ಕನ್ನಡ

# ಬಾಲಭಾರತಿ

ನಾಲ್ಕನೆಯ ಇಯತ್ತೆ



Tele MANAS
National Tele Mental Health Programme
14416

# ಟೆಲಿ ಮಾನಸ ಸಹಾಯವಾಣಿ.

**Tele-MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24×7 ಉಚಿತ, ಏಕಾತ್ಮಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

# ಮನೋದರ್ಪಣ

ಮನೋದರ್ಪಣ (8448440632) ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಈ ಪಠ್ಯಪುಸ್ತಕವನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ಪ್ರಶಿಕ್ಷಣ ಪರಿಷದ, ಮಹಾರಾಷ್ಟ್ರ, ಪುಣೆ ಇವರು ತಯಾರಿಸಿದ ಅಭ್ಯಾಸಕ್ರಮ ಮತ್ತು ಪಠ್ಯಕ್ರಮಗಳಿಗನುಸಾರ ಸಿದ್ಧಪಡಿಸಲಾಗಿದ್ದು, ಅವರ ಮೂಲಕ ಈ ಪಠ್ಯಪುಸ್ತಕದ ಪರಿಶೀಲನೆ ಮಾಡಲಾಗಿದೆ.
ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 13.04.2026 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2026-2027 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ
# ಬಾಲಭಾರತಿ
## ನಾಲ್ಕನೆಯ ಇಯತ್ತೆ



**ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.**

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟ್‌ಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದೃಕ್‌ಶ್ರಾವ್ಯ ಸ್ವರೂಪದಲ್ಲಿ ಅಧ್ಯಯನ-ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2026

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ-ಸದಸ್ಯ**

ಶ್ರೀಮತಿ ಶೈಲಜಾ ದೇಶಪಾಂಡೆ (ಅಧ್ಯಕ್ಷ)
ಶ್ರೀಮತಿ ಮೀನಾಕ್ಷಿ ಹನಗಂಡಿ (ಸದಸ್ಯ)
ಶ್ರೀಮತಿ ಸುವರ್ಣಾ ವ್ಹಿ. ದೀಕ್ಷಿತ (ಸದಸ್ಯ)
ಶ್ರೀ. ಮಹಾದೇವ ಎಸ್. ಜಾವೀರ (ಸದಸ್ಯ)
ಶ್ರೀ. ಭೀಮಾಶಂಕರ ಎಚ್. ಸಲಗರ (ಸದಸ್ಯ)
ಶ್ರೀ. ಪ್ರವೀಣ ಜಿ. ಗಿರಣಿ (ಸದಸ್ಯ)
ಶ್ರೀ. ದಯಾನಂದ ಟಿ. ಹಂಜಗಿ (ಸದಸ್ಯ)
ಶ್ರೀ. ಆನಂದ ಎನ್. ಭಾವಿಕಟ್ಟಿ (ಸದಸ್ಯ)
ಶ್ರೀ. ಶಿವರಾಜ ಕೆ. ಕೂಟನೂರ (ನಿಮಂತ್ರಿತ-ಸದಸ್ಯ)
ಶ್ರೀಮತಿ ರತ್ನಾ ಎಸ್. ಪಟ್ಟಣ (ನಿಮಂತ್ರಿತ-ಸದಸ್ಯ)
ಶ್ರೀಮತಿ ಕೇತಕಿ ಜಾನಿ (ಪ್ರಭಾರಿ ವಿಶೇಷಾಧಿಕಾರಿ, ಕನ್ನಡ)

**ಕನ್ನಡ ಸಂಯೋಜನ ಪ್ರಮುಖರು**

ಶ್ರೀಮತಿ ಕೇತಕಿ ಜಾನಿ
ಪ್ರಭಾರಿ ವಿಶೇಷಾಧಿಕಾರಿ, ಕನ್ನಡ
ಮತ್ತು
ವಿದ್ಯಾಸಚಿವೆ (ಭಾಷಾ)
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪುಣೆ-4.

**ಗುಣವತ್ತಾ ಸಮೀಕ್ಷಕ**

ಡಾ।। ಕೃ.ಶಿ. ಹೆಗಡೆ (ಗುಣವತ್ತಾ ಪರೀಕ್ಷಕ)
ಶ್ರೀ. ಚಂದ್ರಕಾಂತ ದೇಶಪಾಂಡೆ (ಕಾಯದೆ ತಜ್ಞ)
ಶ್ರೀ. ಬಿ. ಎನ್. ಶೋಭಾ (CWSN ತಜ್ಞ)

**ಮುಖಪುಟ :** ಶ್ರೀ. ಭಟು ರಾಮದಾಸ ಬಾಗಲೆ

**ಚಿತ್ರಕಾರ :** ಶ್ರೀ. ಲಕ್ಷ್ಮಿಕಾಂತ್ ಕಾಳೆ

**ಅಕ್ಷರ ಜೋಡಣೆ :** ವಿಜಯ ಆರ್ಟ ಪ್ರಿಂಟರ್ಸ್, ಪುಣೆ

**ಕಾಗದ** : 70 ಜಿ. ಎಸ್.ಎಮ್. ಕ್ರಿಮವೋವ್ವ

**ಮುದ್ರಣಾದೇಶ :**

**ಮುದ್ರಕ :**

ನಿರ್ಮಿತಿ:
**ಶ್ರೀಮತಿ ಮಿತಾಲಿ ಶಿತಪ**
ಪ್ರಭಾರಿ ಮುಖ್ಯ ಉತ್ಪಾದನಾ ಅಧಿಕಾರಿ

**ಶ್ರೀ. ರಾಜೇಂದ್ರ ಪಾಂಡಲೋಸ್ಕರ್**
ನಿರ್ಮಾಣ ಅಧಿಕಾರಿ

**ಪ್ರಕಾಶಕ :**
**ಶ್ರೀ. ಹೇಮಂತ ಬಾಬರ**
ಪ್ರಭಾರಿ ಮುಖ್ಯ ನಿರ್ಮಿತಿ ಅಧಿಕಾರಿ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

## ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿಗಳೇ,

ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗಿದೆ. ನಿಮಗೆಲ್ಲರಿಗೂ ಹೃತ್ಪೂರ್ವಕ ಸ್ವಾಗತ. ಈ ಕನ್ನಡ ಬಾಲಭಾರತಿ ನಾಲ್ಕನೆಯ ಇಯತ್ತೆಯ ಪಠ್ಯಪುಸ್ತಕವನ್ನು ನಿಮ್ಮ ಕೈಗಿಡಲು ತುಂಬಾ ಸಂತೋಷವೆನಿಸುತ್ತಿದೆ.

ನೀವು ಮೂರನೆಯ ಇಯತ್ತೆಯಲ್ಲಿ ಶಬ್ದ ಮತ್ತು ವಾಕ್ಯಗಳನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಲಿತಿರುವಿರಿ. ನಾಲ್ಕನೆಯ ಇಯತ್ತೆಯ ಈ ಪಠ್ಯಪುಸ್ತಕದಿಂದ ನೀವು ಹೊಸ ಹೊಸ ಕಥೆ, ಕವಿತೆ, ಸಂವಾದ, ಚಿತ್ರಕಥೆ, ಚಿತ್ರ ವರ್ಣನೆ, ಮಾಹಿತಿಯುಕ್ತ ಲೇಖನಗಳನ್ನು ಓದುವುದರಲ್ಲಿ ಆನಂದಿಸುವಿರಿ. ಈ ಪಠ್ಯಪುಸ್ತಕದಲ್ಲಿಯ ಪಾಠಗಳು ನಿಮ್ಮನ್ನು ಯೋಚಿಸುವಂತೆ ಮಾಡುತ್ತವೆ, ನಿಮಗೆ ಹೊಸ ವಿಷಯಗಳನ್ನು ಕಲಿಸುತ್ತವೆ ಮತ್ತು ಇದರ ಮೂಲಕ ನಿಮ್ಮ ಕಲ್ಪನಾಶಕ್ತಿಯು ಮತ್ತಷ್ಟು ವಿಕಾಸಹೊಂದುತ್ತದೆ.

ಈ ಪಠ್ಯಪುಸ್ತಕದಲ್ಲಿ ಗೇಯತೆಯಿಂದ ಕೂಡಿದ ಕವಿತೆಗಳು, ನಿಮ್ಮನ್ನು ಲಯಬದ್ಧತೆ ಮತ್ತು ಅಭಿನಯದೊಂದಿಗೆ ಸಾದರಪಡಿಸುವಂತಿವೆ. ನಿಮಗೆ ಈ ಎಲ್ಲಾ ಕವಿತೆಗಳು ಓದಲು, ಹೇಳಲು ಮತ್ತು ಸ್ನೇಹಿತರೊಂದಿಗೆ ಹಾಡಲು ತುಂಬಾ ಆನಂದಿಸುವಿರಿ. ಹಾಗೆಯೇ ಕೆಲವು ಕಥೆಗಳನ್ನು ಓದುವಾಗ ನಿಮಗೆ ನಿಮ್ಮ ಸ್ವಂತದ ಅನುಭವಗಳು ನೆನಪಿಗೆ ಬರಬಹುದು. ಪ್ರತಿಯೊಂದು ಪಾಠಕ್ಕೆ ಮತ್ತು ಕವಿತೆಗಾಗಿ ಕೊಡಲಾಗಿರುವ ವರ್ಣರಂಜಿತ ಮತ್ತು ಆಕರ್ಷಕ ಚಿತ್ರಗಳು ವಿಷಯವನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡುತ್ತವೆ. ಕೆಲವೊಮ್ಮೆ ಚಿತ್ರಗಳನ್ನು ನೋಡುವ ಮೂಲಕ ನೀವೇ ಸ್ವತ: ಕಥೆಗಳನ್ನು ರಚಿಸಲು ಸಾಧ್ಯವಾಗುತ್ತದೆ.

ಈ ಪಠ್ಯಪುಸ್ತಕದಲ್ಲಿ ವಿವಿಧ ಶೀರ್ಷಿಕೆಗಳ ಕೆಳಗೆ ಕೊಡಲಾಗಿರುವ ಎಲ್ಲಾ ಕೃತಿ ಚಟುವಟಿಕೆಗಳನ್ನು ಬಿಡಿಸುವ ಮೂಲಕ ನಿಮ್ಮ ಭಾಷಾ ಕೌಶಲ್ಯಗಳು ಹೆಚ್ಚು ವಿಕಾಸಹೊಂದುತ್ತವೆ. ತಿಳಿಯೋಣ ಬನ್ನಿ, ಯೋಚಿಸಿ ಬರೆ, ಭಾಷೇತಿಳಿಯೋಣ ಬಾ, ಶಬ್ದಗಳ ಆಟ, ಹೇಳು ನಾನಾರು? ಇಂತಹ ಕೃತಿಗಳ ಮೂಲಕ ಕಲಿಯೋಣ ಬನ್ನಿ.

ಈ ರೀತಿಯ ವೈವಿಧ್ಯಪೂರ್ಣ ಶೀರ್ಷಿಕೆಗಳ ಕೆಳಗೆ ಕೊಡಲಾಗಿರುವ ವಿವಿಧ ಕೃತಿಗಳನ್ನು ಬಿಡಿಸಲು ನೀವು ಖಂಡಿತವಾಗಿಯೂ ಇಷ್ಟಪಡುತ್ತೀರಿ. ಈ ಕೃತಿ ಚಟುವಟಿಕೆಗಳನ್ನು ಅಭ್ಯಾಸ(ರೂಢಿ)ಮಾಡುವುದರಿಂದ ನಿಮ್ಮ ಭಾಷಾ ಸಂಪತ್ತು ಬೆಳೆಯುತ್ತದೆ. ಪಠ್ಯಪುಸ್ತಕದಲ್ಲಿಯ ವಿವಿಧ ಪ್ರಕಲ್ಪಗಳು ಮತ್ತು ಉಪಕ್ರಮಗಳನ್ನು ತಯಾರಿಸುವಾಗ ನಿಮಗೆ ತುಂಬಾ ಸಂತೋಷವೆನಿಸಬಹುದು.

ಈ ಪಠ್ಯಪುಸ್ತಕದಿಂದ ಮನೆಯಲ್ಲಿ, ಶಾಲೆಯಲ್ಲಿ,ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಮಾತನಾಡುವಾಗ ನೀವು ಶುದ್ಧ, ಸುಂದರ ಮತ್ತು ಪ್ರಭಾವಿ ಕನ್ನಡ ಭಾಷೆಯನ್ನು ಆತ್ಮವಿಶ್ವಾಸದಿಂದ ಬಳಸಲು ಕಲಿಯುವಿರಿ. ವಿದ್ಯಾರ್ಥಿ ಮಿತ್ರರೇ, ಈ ಪಠ್ಯಪುಸ್ತಕವನ್ನು ಸಂತೋಷದಿಂದ ಮತ್ತು ಮನ:ಪೂರ್ವಕವಾಗಿ ಓದಿರಿ. ಪಠ್ಯಪುಸ್ತಕದಲ್ಲಿಯ ಎಲ್ಲ ಪಠ್ಯಾಂಶಗಳನ್ನು ಸೂಕ್ಷ್ಮವಾಗಿ ಓದಿ ಅರ್ಥಮಾಡಿಕೊಳ್ಳಿರಿ. ಪ್ರಿಯ ವಿದ್ಯಾರ್ಥಿಗಳೇ, ನಿಮ್ಮ ಶೈಕ್ಷಣಿಕ ಪ್ರವಾಸಕ್ಕಾಗಿ ಮನ:ಪೂರ್ವಕ ಶುಭ ಹಾರೈಕೆಗಳು!

**(ಅನುರಾಧಾ ಓಕ್)**
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4

ಪುಣೆ
ದಿನಾಂಕ: 19 ಮಾರ್ಚ್ 2026
ಭಾರತೀಯ ಸೌರ : ಚೈತ್ರ ಶು. 1 ಶಕೆ 1948 ಅಕ್ಷಯ ತೃತೀಯಾ

# ಅಧ್ಯಯನ ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ

| CG | ಅ.ಕ್ರ ಕ್ಷಮತೆ | ಅಧ್ಯಯನ ನಿಷ್ಪತ್ತಿ | ಪುಟ ಸಂಖ್ಯೆ |
|---|---|---|---|
| **CG1** | 1.1.1 | ಘಟನೆ, ಪ್ರಸಂಗ, ಕಥೆ, ಹಾಡು, ಕವಿತೆ ಅಥವಾ ದೈನಂದಿನ ಅನುಭವ ಇತ್ಯಾದಿ ವಿಷಯದ ಬಗ್ಗೆ ಸಹಪಾಠಿ ಯೊಂದಿಗೆ ಸಂಭಾಷಣೆ ಮಾಡುತ್ತಾನೆ. | 1,3,4,5,23,24,38, 50, 51, 52, 62, 63 |
| | 1.1.2 | ಕಥೆಗಳು, ವಾಕ್ಯವೃಂದ, ಗದ್ಯಖಂಡ, ಸಮಾಚಾರವನ್ನು ಕೇಳಿ ಅದರ ಬಗ್ಗೆ ಗುಂಪಿನಲ್ಲಿ ಚರ್ಚಿಸುತ್ತಾನೆ. | 2, 8, 12, 19, 40 |
| | 1.1.3 | ನಡೆದ ಘಟನೆ, ಪ್ರಸಂಗ, ಮತ್ತು ದೈನಂದಿನ ಅನುಭವ ಇವುಗಳ ಬಗ್ಗೆ ಸುಸಂಗತವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | 2, 25, 30, 35, 40, 52, 53,54,59,62,63,74,75,76 |
| | 1.1.4 | ಕೊಟ್ಟ ವಿಷಯದ ಮೇಲೆ ತಿಳಿದುಕೊಂಡು 8 ರಿಂದ10 ವಾಕ್ಯಗಳಲ್ಲಿ ಸಂವಾದ ಸಾದರಪಡಿಸುತ್ತಾನೆ. | 13, 40, 74, 75, 83 |
| **C1.2** | 1.2.1 | ವರ್ಗದಲ್ಲಿ ಓದಿದ ಸಾಹಿತ್ಯದಲ್ಲಿಯ ಮೂಲ ಕಲ್ಪನೆಗಳ ವಿಸ್ತಾರ ಮಾಡುತ್ತಾನೆ ಮತ್ತು ಸಾರಾಂಶ ಹೇಳುತ್ತಾನೆ. ಬೇರೆ ಬೇರೆ ಪ್ರಕಾರದ ವಿಷಯಗಳನ್ನು ಕೇಳಿ ಮತ್ತು ಓದಿ ಅದರಲ್ಲಿಯ ಮುಖ್ಯ ವಿಷಯಗಳನ್ನು ಹೇಳುತ್ತಾನೆ. | 6,8,17,18, 25, 33, 40,46, 52, 81 |
| | 1.2.2 | ವಿಶೇಷ ಭಾಗದಲ್ಲಿಯ ಮುಖ್ಯ ಕಲ್ಪನೆಯನ್ನು ಸವಿಸ್ತಾರವಾಗಿ ಹೇಳುತ್ತಾನೆ. | 30,40,64,65,71,84,85,88 |
| | 1.2.3 | ಸಾಹಿತ್ಯದಲ್ಲಿಯ ಆಶಯದ ವರ್ಣನೆ ಮಾಡುತ್ತಾನೆ. | 8,13,20,25,40,58,81 |
| | 1.2.4 | ವರ್ಗದಲ್ಲಿ ಓದಿದ ಸಾಹಿತ್ಯದಲ್ಲಿ ಪಠ್ಯಾಂಶದ ಸಾರಾಂಶವನ್ನು ಹೇಳುತ್ತಾನೆ. | 58 |
| **C1.3** | 1.3.1 | ಹೇಳಿದ/ಕೇಳಿದ ವಸ್ತುವಿನ ಬಗ್ಗೆ, ಘಟಕದ ಬಗ್ಗೆ ಐದರಿಂದ ಆರು ಸಾಲುಗಳಲ್ಲಿ ಮಾಹಿತಿ ಹೇಳುತ್ತಾನೆ. | 4,5,13,30,40,50, 51, 62, 63,71,76, 83, 84, 85, 88 |
| | 1.3.2 | ಹಬ್ಬ, ಉತ್ಸವ, ದಿನವಿಶೇಷದ ಸಂದರ್ಭದಲ್ಲಿ ಶುಭಾಶಯಗಳನ್ನು ಕೊಡುತ್ತಾನೆ ಮತ್ತು ಮಾಹಿತಿ ಹೇಳುತ್ತಾನೆ. | 54, 55, 86, 90 |
| | 1.3.3 | ಶಾಲೆಯಲ್ಲಿಯ ವಿವಿಧ ಕಾರ್ಯಕ್ರಮಗಳಲ್ಲಿ ಮೌಖಿಕ ಸಾದರೀಕರಣ ಮಾಡುತ್ತಾನೆ (ಕವಿತೆ, ಅಭಿನಯಗೀತೆ, ವಚನ ಇತ್ಯಾದಿ) | 1, 11, 29, 31, 45, 54, 57, 70, 80 |
| | 1.3.4 | ಕೊಟ್ಟ ವಿಷಯದ ಮೇಲೆ ಸ್ವಂತದ ಸಮರ್ಪಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | 26, 30, 46, 54, 66, 88 |
| **C2.1** | 2.1.1 | ಓದಿದ ಪಠ್ಯಾಂಶದಲ್ಲಿಯ (ಗದ್ಯ ಮತ್ತು ಪದ್ಯ) ಘಟನೆಗಳ ಯೋಗ್ಯಕ್ರಮ ಹೇಳುತ್ತಾನೆ. | 35, 63 |
| | 2.1.2 | ಪಠ್ಯಾಂಶದಲ್ಲಿಯ ಮುಖ್ಯ ಘಟನೆ ಮತ್ತು ಪಾತ್ರಗಳ ಬಗ್ಗೆ ಮಾತನಾಡುತ್ತಾನೆ. | 4,5,8,25,40,62,63,84,85,86,87 |
| | 2.1.3 | ಪಠ್ಯಾಂಶದಲ್ಲಿಯ ವಿರಾಮ ಚಿನ್ಹೆಗಳ (ಪೂರ್ಣ ವಿರಾಮ, ಅಲ್ಪವಿರಾಮ, ಪ್ರಶ್ನೆಚಿನ್ಹೆ, ಅವತರಣ ಚಿನ್ಹೆ, ಉದ್ಗಾರವಾಚಕ) ಉಪಯೋಗ ಮಾಡುತ್ತಾನೆ. | 13, 41, 83 |
| | 2.1.4 | ಓದಿದ ವಿಷಯದ ಆಶಯದ ಸಂಬಂಧದಲ್ಲಿ ಅಂದಾಜು ಮಾಡಿ ಸ್ವಭಾಷೆಯಲ್ಲಿ ಹೇಳುತ್ತಾನೆ. | 3,8,16,46,47, 62, 63, 72, 81, 89 |
| | 2.1.5 | ಓದಿದ ವಿಷಯದ ಮೇಲೆ 4 ರಿಂದ 5 ವಾಕ್ಯಗಳಲ್ಲಿ ನಿಷ್ಕರ್ಷ, ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. | 2, 8, 30, 66 |
| **C2.2** | 2.2.1 | ಓದಿದ ವಿವಿಧ ಪ್ರಕಾರದ ಸಾಹಿತ್ಯದಲ್ಲಿಯ ಆಶಯ, ಘಟನೆ, ಪ್ರಸಂಗ, ಪಾತ್ರಗಳ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | 2, 8, 12, 13, 27, 30, 40, 62, 63 |
| | 2.2.2 | ಓದಿದ ವಿಷಯದಲ್ಲಿಯ ವ್ಯಕ್ತಿಚಿತ್ರ ಮುಖ್ಯ ಪಾತ್ರಗಳ ವಿಷಯದಲ್ಲಿ ಸ್ವಂತದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | 35, 47, 66, 71, 89 |
| | 2.2.3 | ಓದಿದ ಸಾಹಿತ್ಯದಲ್ಲಿಯ (ಗದ್ಯ/ಪದ್ಯ) ಆಶಯ ನಿಷ್ಕರ್ಷ ಹೇಳುತ್ತಾನೆ. | 40 |
| **C3.1** | 3.1.1 | ಕೊಟ್ಟ ಶಬ್ದ ಸಮೂಹದಿಂದ ಸುಸಂಗತ ವಾಕ್ಯಗಳನ್ನು ತಯಾರಿಸಿ ಬರೆಯುತ್ತಾನೆ. | 30, 31 |
| | 3.1.2 | ಪರಿಸರದಲ್ಲಿ ನಡೆದ ಘಟನೆಗಳ ಕ್ರಮವನ್ನು ಹಚ್ಚಿ ಸ್ವಂತ ಅನುಭವದ ಆಧಾರದ ಮೇಲೆ ಪರಿಚ್ಛೇದ ತಯಾರಿಸುತ್ತಾನೆ ಸ್ವಂತ ಅಭಿಪ್ರಾಯ ಸಹಿತ ಮುಕ್ತಾಯಗೊಳಿಸುತ್ತಾನೆ. | 21, 26, 30, 47, 77 |
| | 3.1.3 | ಅಪರಿಚಿತ ವಿಷಯವನ್ನು ಓದಿ ಶೀರ್ಷಿಕೆಯನ್ನು ಬರೆಯುತ್ತಾನೆ. | 21, 31, 55, 90 |
| | 3.1.4 | ವಿವಿಧ ಸಾಹಿತ್ಯ ಪ್ರಕಾರದಲ್ಲಿ ಸ್ವಂತ ಅನುಭವಗಳನ್ನು ನಾಲ್ಕರಿಂದ ಐದು ವಾಕ್ಯಗಳಲ್ಲಿ ರಚಿಸಿ ಸರಿಯಾದ ಶೀರ್ಷಿಕೆಯನ್ನು ಕೊಡುತ್ತಾನೆ. | 13, 47, 81 |
| **C3.2** | 3.2.1 | ಕೊಟ್ಟ ಪಠ್ಯಾಂಶದಲ್ಲಿಯ ಮುಖ್ಯ ಸಂಕಲ್ಪನೆ, ವಿಷಯ ಗುರುತಿಸುತ್ತಾನೆ. | 19, 26, 76, 81 |
| | 3.2.2 | ಕೊಟ್ಟ ಪಠ್ಯಾಂಶದಲ್ಲಿಯ ಪ್ರಸಂಗದ ಮೇಲೆ ಆಧರಿಸಿ ತನ್ನ ಸ್ವಂತ ಅಭಿಪ್ರಾಯವನ್ನು ಬರೆಯುತ್ತಾನೆ. | 26, 36, 58, 67, 81 |
| | 3.2.3 | ಕೊಟ್ಟ ವಿಷಯದ ಮೇಲೆ ಆರರಿಂದ ಎಂಟು ವಾಕ್ಯದಲ್ಲಿ ಸ್ಪಷ್ಟವಾಗಿ ಮತ್ತು ಸುಸಂಗತವಾಗಿ ಪರಿಚ್ಛೇದ ಲೇಖನ ಮಾಡುತ್ತಾನೆ. | 13, 26, 47, 67, 81 |
| **C3.3** | 3.3.1 | ವಿವಿಧ ವಿಷಯದಲ್ಲಿ ಭಿತ್ತಿ ಪತ್ರಗಳನ್ನು ತಯಾರಿಸುತ್ತಾನೆ. | 59, 77 |
| | 3.3.2 | ಕೊಟ್ಟ ವಿಷಯದ ಮೇಲೆ ಹಸ್ತಲೇಖನ ತಯಾರಿಸಲು ಸಾಹಿತ್ಯವನ್ನು ಪಡೆದುಕೊಳ್ಳುತ್ತಾನೆ ಮತ್ತು ಲೇಖನ ಮಾಡುತ್ತಾನೆ. | 69, 78 |
| | 3.3.3 | ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದ ನಿಮಂತ್ರಣ ಪತ್ರಿಕೆಗಳನ್ನು ತಯಾರಿಸುತ್ತಾನೆ. | 68, 69, 90 |
| | 3.3.4 | ಸ್ವಂತ ಅನುಭವವನ್ನು ಸಂವಾದರೂಪದಲ್ಲಿ ಲೇಖನ ಮಾಡುತ್ತಾನೆ. | 13, 83 |

| | | | |
|---|---|---|---|
| **C3.4** | 3.4.1 | ಯೋಗ್ಯ ವಿರಾಮ ಚಿಹ್ನೆಗಳ (ಪೂರ್ಣ ವಿರಾಮ,ಅಲ್ಪ ವಿರಾಮ, ಪ್ರಶ್ನೆ ಚಿನ್ಹೆ, ಉದ್ಗಾರವಾಚಕ ಚಿಹ್ನೆ,ಅವತರಣ ಚಿಹ್ನೆ ಮತ್ತು ಜೋಡಾಕ್ಷರದಿಂದ ಕೂಡಿದ ಶಬ್ದ ಇವುಗಳ ಉಪಯೋಗ ಮಾಡಿ ಐದರಿಂದ ಆರು ಸಾಲುಗಳಷ್ಟು ವಿಷಯವನ್ನು ಬರೆಯುತ್ತಾನೆ. | 13, 20, 67, 83 |
| | 3.4.2 | ಶುದ್ದ ಲೇಖನದ ನಿಯಮವನ್ನು ಲಕ್ಷ್ಯದಲ್ಲಿಟ್ಟುಕೊಂಡು ಶಬ್ದ ಮತ್ತು ವಾಕ್ಯ ರಚನೆ ಮಾಡುತ್ತಾನೆ. | 44 |
| | 3.4.3 | ವಿಶೇಷಣ, ಕ್ರಿಯಾಪದ, ಕಾಲ ಇವುಗಳ ವಿಚಾರವನ್ನು ಮಾಡಿ ವಿಶೇಷ ಲೇಖನ ಮಾಡುತ್ತಾನೆ. | 9, 10, 15, 16, 22, 28, 32, 37,41, 48, 56, 73, 82 |
| **C4.1** | 4.1.1 | ಸಮಾನಾರ್ಥಕ, ವಿರುದ್ದಾರ್ಥಕ ಶಬ್ದಗಳ ಪಟ್ಟಿ (ಯಾದಿ )ತಯಾರಿಸುತ್ತಾನೆ. | 21, 31,36,37, 55,60 |
| | 4.1.2 | ಅನೇಕ ಅರ್ಥವಿರುವ ಶಬ್ದಗಳ ಸಂಗ್ರಹ ಮಾಡುತ್ತಾನೆ. | 31, 37, 55, 60, 67, 79 |
| | 4.1.3 | ಶಬ್ದಗಳ ಅರ್ಥ ತಿಳಿದುಕೊಂಡು ಅವುಗಳನ್ನು ವ್ಯವಹಾರದಲ್ಲಿ ಬಳಸುತ್ತಾನೆ. | 67, 79 |
| **C4.2** | 4.2.1 | ಪ್ರತ್ಯಕ್ಷ ಕೃತಿಗಳ ಮೂಲಕ ಶಬ್ದ ಚಿತ್ರಗಳು ಮತ್ತು ಶಬ್ದಗಳ ಆಟದ ಮೂಲಕ ಹೊಸ ಹೊಸ ಶಬ್ದ ಸಂಗ್ರಹ ಮಾಡುತ್ತಾನೆ. | 20, 31, 36, 60, 82, 93 |
| | 4.2.2 | ಒಂದೇ ಶಬ್ದದ ಪರ್ಯಾಯ ಶಬ್ದ ಇತರ ಶಬ್ದಗಳ ಉಪಯೋಗವನ್ನು ಮಾಡಿ ವಾಕ್ಯ ಲೇಖನ ಮಾಡುತ್ತಾನೆ. | 67, 79 |
| | 4.2.3 | ಭಾಷಿಕ ಆಟದ ಮೂಲಕ ಹೆಚ್ಚೆಚ್ಚು ಶಬ್ದ ಸಂಗ್ರಹ ಮಾಡುತ್ತಾನೆ. | 25, 31, 93 |
| | 4.2.4 | ಪೂರಕ ವಾಚನ ಸಾಹಿತ್ಯದಿಂದ ಭಾಷಿಕ ಆಟದ ಮೂಲಕ ನಾವಿನ್ಯಪೂರ್ಣ ಶಬ್ದಗಳ ಸಂಗ್ರಹ ಹೆಚ್ಚಿಸುತ್ತಾನೆ. | 40, 47 |
| | 4.2.5 | ಪದಬಂಧ ಬಿಡಿಸುತ್ತಾನೆ. | 40, 47, 58 |
| **C4.3** | 4.3.1 | ಓದಿದ ಜನಪದ ಸಾಹಿತ್ಯದಲ್ಲಿಯ ಅಪರಿಚಿತ ಶಬ್ದಗಳ ಪಟ್ಟಿ (ಯಾದಿ) ತಯಾರಿಸುತ್ತಾನೆ. | 15 |
| | 4.3.2 | ವಚನಗಳಲ್ಲಿ ಅಪರಿಚಿತ ಶಬ್ದಗಳ ಅರ್ಥ ಶಾಲೆಯ ಶಬ್ದಕೋಶದಿಂದ ಹುಡುಕುತ್ತಾನೆ. | 14, 54 |
| | 4.3.3 | ಜಾನಪದ ಸಾಹಿತ್ಯವನ್ನು ಓದಿ ಅಪರಿಚಿತ ಶಬ್ದಗಳನ್ನು ಹುಡುಕುತ್ತಾನೆ ಮತ್ತು ಶಬ್ದ ಸಂಗ್ರಹ ಹೆಚ್ಚಿಸುತ್ತಾನೆ. | 15, 54 |
| | 4.3.4 | ಓದಿದ ಜಾನಪದ ಸಾಹಿತ್ಯವನ್ನು ತನ್ನ ಸ್ವಂತ ಭಾಷೆಯಲ್ಲಿ ಹೇಳುತ್ತಾನೆ. | 12, 54 |
| **C5.1** | 5.1.1 | ಗ್ರಂಥಾಲಯದಲ್ಲಿಯ ವಿವಿಧ ಪುಸ್ತಕಗಳ ಪರಿಚಯ ಮಾಡಿಕೊಳ್ಳುತ್ತಾನೆ. | 58, 61 |
| | 5.1.2 | ಗ್ರಂಥಾಲಯದಲ್ಲಿಯ ಪುಸ್ತಕಗಳನ್ನು ವಾಚನ ಸಾಹಿತ್ಯಗಳನ್ನು ಸ್ವತಃ ನೋಡಿ ಅದರ ಪ್ರಕಾರ ವರ್ಗೀಕರಣ ಮಾಡುತ್ತಾನೆ. | 61 |
| | 5.1.3 | ಶಾಲೆಯ ಗ್ರಂಥಾಲಯದಿಂದ ಪೂರಕ ಮತ್ತು ಸಂದರ್ಭ ಪುಸ್ತಕಗಳನ್ನು ನಿಯಮಿತವಾಗಿ ಕೊಡು ಕೊಳ್ಳುವದನ್ನು ಮಾಡುತ್ತಾನೆ. | 58 |
| **C5.2** | 5.2.1 | ಗ್ರಂಥಾಲದಲ್ಲಿಯ ಪುಸ್ತಕಗಳನ್ನು ಓದಿ ಇಷ್ಟವಾದ ಭಾಗವನ್ನು ಹೇಳುತ್ತಾನೆ. | 61 |
| | 5.2.2 | ಪಾಲಕ ಮತ್ತು ಶಿಕ್ಷಕರ ಸಹಾಯದಿಂದ ಇ-ಲೈಬ್ರರಿಯ ಉಪಯೋಗ ಮಾಡುತ್ತಾನೆ. | 61,66 |
| **C5.3** | 5.3.1 | ವರ್ತಮಾನ ಪತ್ರದಲ್ಲಿಯ ವಿವಿಧ ಸುದ್ದಿಗಳ ಶೀರ್ಷಿಕೆಗಳನ್ನು ಓದುತ್ತಾನೆ. | 60, 91 |
| | 5.3.2 | ಓದಿದ ಸುದ್ದಿಯ ಆಧಾರದ ಮೇಲೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. | 58, 91 |
| | 5.3.3 | ಭಿತ್ತಿ ಫಲಕದ ಮೇಲೆ ಸುದ್ದಿಗಳ ಪೇಪರ್ ಕಟಿಂಗ್‌ಗಳನ್ನು ಪ್ರದರ್ಶಿಸುತ್ತಾನೆ. | 59, 77 |
| | 5.3.4 | ಸಹಪಾಠಿಗಳಿಂದ ಕೇಳಿದ ಮತ್ತು ಓದಿದ ಸುದ್ದಿಗಳನ್ನು ಹೇಳುತ್ತಾನೆ. | 60 |

## ಪಠ್ಯಪುಸ್ತಕವನ್ನು ಅವಲೋಕಿಸುವಾಗ

- ರಾಷ್ಟ್ರೀಯ ಶಿಕ್ಷಣ ಧೋರಣೆ ೨೦೨೦ರ ಮೇಲೆ ಆಧಾರಿತವಾದ ಈ ಪಠ್ಯಪುಸ್ತಕವು ಮಕ್ಕಳ ಭಾಷಾ ಕೌಶಲ್ಯ ವಿಕಾಸದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಲಿದೆ ಈ ಪಠ್ಯಪುಸ್ತಕದಿಂದ ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಸುಲಭಗೊಳಿಸಲಾಗಿದೆ. ಇದರಲ್ಲಿ ಮಕ್ಕಳ ಅಧ್ಯಯನ ಮತ್ತು ಅಭ್ಯಾಸದ ಹಂತಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳು ಸೇರಿಸಲಾಗಿದೆ.
- ವಿವಿಧ ವಿಷಯಗಳು, ಪರಿಸ್ಥಿತಿ, ಘಟನೆ, ಅನುಭವಗಳು, ಕಥೆ, ಕವಿತೆ ಇತ್ಯಾದಿ ಸ್ವಂತ ಪದ್ಧತಿಯಿಂದ ಮತ್ತು ತಮ್ಮ ಭಾಷೆಯಲ್ಲಿ ಹೇಳುವುದು, ಕೇಳುವುದು ಇವುಗಳಿಗೆ ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಲಾಗಿದೆ.
- ಬೇರೆ ಬೇರೆ ಕಥೆ, ಕವಿತೆ, ಫಲಕಲೇಖನ ಇತ್ಯಾದಿ ತಿಳಿದುಕೊಂಡು ಓದುವುದು, ತಿಳಿಸುವುದು ಮತ್ತು ಅದರ ಮೇಲೆ ತಮ್ಮ ಪ್ರತಿಕ್ರಿಯೆ ಕೊಡುವುದು, ಚರ್ಚೆ ಮಾಡಲು ಮತ್ತು ಪ್ರಶ್ನೆ ವಿಚಾರಿಸಲು ಅವಕಾಶ ಮಾಡಿಕೊಡಲಾಗಿದೆ. ಚಿತ್ರವರ್ಣನೆ, ಚಿತ್ರಕಥೆಯ ರೂಪಗಳನ್ನು ಕೊಡಲಾಗಿದೆ.
- ಹಬ್ಬ, ಉತ್ಸವ ದಿನವಿಶೇಷ ಸಂದರ್ಭದಲ್ಲಿ ಶುಭಾಶಯಗಳನ್ನು ಹೇಳುವ ಕುರಿತು ಮಾಹಿತಿಯನ್ನು ಮಾಡಿಕೊಡಲಾಗಿದೆ. ಉದಾಹರಣೆ 'ಅಂಟಿಕೆ ಪಂಟಿಗೆ' ಮತ್ತು ಜಾನಪದ ಸೊಗಡನ್ನು ಹೊಂದಿರುವ 'ಮುಂಜಾನೆದ್ದು ಕುಂಬಾರಣ್ಣ' ಎಂಬ ಕವಿತೆಯನ್ನು ಮತ್ತೆ ಮನರಂಜನಾತ್ಮಕ ಅಭಿನಯದೊಂದಿಗೆ ಹೇಳುವ ಲಯಬದ್ಧತೆಯಿಂದ ಕೂಡಿದ ಕವಿತೆಗಳನ್ನು ಅಳವಡಿಸಲಾಗಿದೆ. 'ಜಂಬದ ಮಾವಿನಹಣ್ಣು' 'ಶಕ್ತಿ ಮತ್ತು ಸೌಂದರ್ಯ' 'ಅಮೂಲ್ಯ ಉಡುಗೊರೆ' ಸಂವಾದ ಹಾಗೂ ನೀತಿ ಪಾಠಗಳನ್ನು ಕೊಡಲಾಗಿದೆ.
- ಬೋಧನಾತ್ಮಕ,ಮನೋರಂಜನಾತ್ಮಕ ಹಾಗೂ ಲಯಬದ್ಧ ಕವಿತೆಯಿಂದ ಕೂಡಿದ ಸಿಡಿಲ ಕಿಡಿಗಳು, ಒಗ್ಗಟ್ಟು ಸಿರಿಧಾನ್ಯ, ಒಂದೇ ವೃಕ್ಷದ ಕೊಂಬೆಗಳು ಎನ್ನುವಂತ ಕವಿತೆಗಳು ಇಲ್ಲಿ ಒಡಮೂಡಿವೆ. ವ್ಯಾಕರಣದಲ್ಲಿ ನಾಮಪದದ ಪ್ರಕಾರಗಳು, ಸರ್ವನಾಮದ ಪ್ರಕಾರಗಳು, ವಿಶೇಷಣ, ವಿಶೇಷ, ಕರ್ತೃ, ಕರ್ಮ, ಕ್ರಿಯಾಪದ, ಕಾಲಗಳು,ವಾಕ್ಯಪ್ರಕಾರ, ಶಬ್ದ, ವಾಚನ ಲೇಖನದಲ್ಲಿ ಶಿಸ್ತುಬದ್ಧವಾಗಿ ಸೇರಿಸಲ್ಪಟ್ಟಿವೆ.
- ಪರಿಸರ ಹಿತರಕ್ಷಣೆ ಕುರಿತಾದ ಪಾಠಗಳು, ಘೋಷ ವಾಕ್ಯಗಳ ಮೂಲಕ ಪಥನಾಟ್ಯಗಳ ಮೂಲಕ ವ್ಯಕ್ತವಡಿಸಲಾಗಿದೆ.ಆರೋಗ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕಾಗಿ ಕಹಿಬೇವಿನ ಸಿಹಿ ಕಥೆ, ಇವುಗಳಿಗೆ ತಡೆಯಿಲ್ಲವೇ ಎಂಬುವಂತಹ ಪಾಠಗಳು ಸುಂದರವಾಗಿ ಒಡಮೂಡಿಸಲು ಪ್ರಯತ್ನಿಸಲಾಗಿದೆ.
- ಕ್ರಿಯಾತ್ಮಕ ಚಟುವಟಿಕೆಗಳಿಗಾಗಿ ಹಲವಾರು ಕೃತಿಗಳನ್ನು ಕೊಡಲಾಗಿದೆ. ಅವುಗಳಲ್ಲಿ ಭೇಳ ತಯಾರಿಸುವುದು, ಶುಭಾಶಯ ಕಾರ್ಡ್ ತಯಾರಿಸುವುದು, ಅಮಂತ್ರಣ ಪತ್ರಿಕೆ, ಬೆರಳಚ್ಚಿನಿಂದ ಚಿತ್ರ ಬಿಡಿಸುವುದು, ಭಿತ್ತಿಚಿತ್ರ ತಯಾರಿಸುವಂತ ಕೃತಿಗಳು ವಿಶೇಷವಾಗಿವೆ.
- ಪರಿಚಿತ ವಿಷಯವನ್ನು ಓದಿ ಶೀರ್ಷಿಕೆಯನ್ನು ಓದುವುದು, ಬರೆಯುವುದು, ಪ್ರಾಸದಿಂದ ಕೂಡಿದ ಕವಿತೆಗಳನ್ನು ರಚಿಸುವುದಕ್ಕೆ ಅವಕಾಶ ಒದಗಿಸಿಕೊಡಲಾಗಿದೆ.
- ಈ ಪಠ್ಯವನ್ನು ಓದು, ಬರಹ, ಕೌಶಲ್ಯಾಭಿವೃದ್ಧಿ ಗೀತೆಗಳು, ಕಥೆಗಳು ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡಂತೆ ಸಮಗ್ರ ಶಿಕ್ಷಣ ನೀಡಲು ವಿನ್ಯಾಸಗೊಳಿಸಲಾಗಿದೆ. ಮಕ್ಕಳ ಕಲಿಕೆಯ ಪ್ರವಾಸಕ್ಕೆ ಈ ಪಠ್ಯವು ರೂಪಗೊಂಡಿದೆ.

# ಅನುಕ್ರಮಣಿಕೆ


## ಭಾಗ-೧

೧. ಸಿಡಿಲ ಕಿಡಿಗಳು (ಕವಿತೆ) ..................... ೧
- ಫ.ಗು. ಸಿದ್ಧಾಪುರ

೨. ಚಿತ್ರಕಥೆ - ಆಮೆ ಮತ್ತು ಕೊಕ್ಕರೆ ................ ೪

೩. ಸೇರು ಭತ್ತ.................................. ೬

೪ ಮುಂಜಾನೆದ್ದು ಕುಂಬಾರಣ್ಣ (ಕವಿತೆ)........ ೧೧

೫. ಕಹಿ ಬೇವಿನ ಸಿಹಿ ಕಥೆ ....................... ೧೭

## ಭಾಗ-೨

೬. ಜಂಭದ ಮಾವಿನ ಹಣ್ಣು..................... ೨೩

೭. ಒಗ್ಗಟ್ಟು (ಕವಿತೆ) .......................... ೨೯
- ಪಿ.ಎಸ್. ಕುಮಾರ

೮. ಬದುಕಿನ ಆಟ .............................. ೩೩

೯. ಶಕ್ತಿ ಮತ್ತು ಸೌಂದರ್ಯ ..................... ೩೮

೧೦. ಬೆದರು ಬೆಚ್ಚ (ಕವಿತೆ) ..................... ೪೫
-ಕಂಚ್ಯಾಣಿ ಶರಣಪ್ಪ

## ಭಾಗ-೩

೧೧. ಚಿತ್ರ ಹರಟೆ-ಬ್ಯಾಂಕ್ ಮತ್ತು ಅಂಚೆ ಕಚೇರಿ. . ೫೦

೧೨. ಅಂಟಿಗೆ ಪಂಟಿಗೆ .......................... ೫೨

೧೩. ಪುಸ್ತಕ ಪ್ರೇಮಿ (ಕವಿತೆ) .................... ೫೭
- ಪರಮೇಶ್ವರಪ್ಪ ಕುದರಿ

೧೪. ಚಿತ್ರಕಥೆ - ಅಜ್ಜಿ ಮತ್ತು ಆನೆಮರಿ............. ೬೨

೧೫. ಬಾಪೂಜಿ ಮತ್ತು ಅರ್ಧ ಆಣೆ ................ ೬೪

೧೬. ಹಿತನುಡಿ (ಕವಿತೆ) ........................ ೭೦
- ಜಿ. ಎಸ್. ಕುಂಭಾರ

## ಭಾಗ-೪

೧೭. ಧ್ವನಿ ಪ್ರದೂಷಣೆ (ಬೀದಿ ನಾಟಕ)........... ೭೪

೧೮. ಸಿರಿಧಾನ್ಯ (ಕವಿತೆ)......................... ೮೦

೧೯. ಇವುಗಳಿಗೆ ತಡೆಯಿಲ್ಲವೇ? (ಚಿತ್ರವರ್ಣನೆ) .. ೮೪

೨೦. ಅಮೂಲ್ಯ ಉಡುಗೊರೆ ..................... ೮೬

೨೧. ಒಂದೇ ವೃಕ್ಷದ ಕೊಂಬೆಗಳು (ಕವಿತೆ) ......... ೯೨
- ಜಿ.ಎಸ್. ಶಿವರುದ್ರಪ್ಪ

★ ಶಬ್ದಕೋಶ................................ ೯೫





**ಶಿಕ್ಷಕರಿಗೆ ಸೂಚನೆ:** ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯನ್ನು ನಡೆಸುವಾಗ ಸಾಂಕೇತಿಕ ಭಾಷೆ (ಸೈನ್ ಲ್ಯಾಂಗ್ವೇಜ್) ಮತ್ತು ಇತರ ಪೂರಕ ಅಧ್ಯಾಪನ ಪದ್ಧತಿಗಳನ್ನು ಬಳಸಿಕೊಳ್ಳಬೇಕು. ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅವರಿಂದ ಸಾಧ್ಯವಾಗುವ ಯಾವುದೇ ಪದ್ಧತಿಯಿಂದ ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಿಕೊಡಬೇಕು.

# ೧. ಸಿಡಿಲ ಕಿಡಿಗಳು



ಬನ್ನಿರಿ ಚಿಣ್ಣರೆ ಭಾರತ ಪುತ್ರರೆ
ದೇಶದ ಏಳ್ಗೆಗೆ ದುಡಿಯೋಣ
ಇಂದಿನ ಎಳೆಯರು ನಾಳಿನ ಹಿರಿಯರು
ನಾವೇ ಎನ್ನುವದರಿಯೋಣ ॥೧॥



ಕನ್ನಡ ತಮಿಳರು ತೆಲುಗು ಮರಾಠರು
ಭಾಷಾ ಭೇದವ ಅಳಿಸೋಣ
ಭಾರತ ಮಾತೆಯ ಮುದ್ದಿನ ಮಕ್ಕಳು
ಸೋದರರಂತೆ ಬಾಳೋಣ ॥೨॥



ಕಲಿಗಳ ಕುಡಿಗಳು ಸಿಡಿಲಿನ ಕಿಡಿಗಳು
ಕೆಚ್ಚೆದೆ ವೀರರು ನಾವುಗಳು
ಅರಿಗಳ ಎದುರಿಗೆ ಶಿರವನು ಬಾಗದೆ
ನೆತ್ತರ ಹೀರುವ ಸಿಂಹಗಳು ॥೩॥




ಹಿರಿಯರ ಹಿತನುಡಿ ಪಠಿಸುತ ದಿನವಿಡಿ
ಹೆಜ್ಜೆಯ ಮುಂದಕೆ ಹಾಕೋಣ
ಒಮ್ಮನದಿಂದಲಿ ಶ್ರಮಿಸುತ ನಾಡಲಿ
ಪ್ರಗತಿಯ ಶಿಖರನೇರೋಣ ॥೪॥

– ಫ. ಗು. ಸಿದ್ದಾಪುರ

## ಶಬ್ದಾರ್ಥ:

| | | |
|---|---|---|
| ಚಿಣ್ಣರು – ಮಕ್ಕಳು | ಸಹೋದರರು – ಅಣ್ಣತಮ್ಮಂದಿರು | ನೆತ್ತರು – ರಕ್ತ |
| ಪುತ್ರ – ಮಗ | ಅರಿ – ಶತ್ರು | ಒಮ್ಮನ – ಒಂದೇ ಮನ. |
| ಏಳ್ಗೆ – ಪ್ರಗತಿ, ಬೆಳವಣಿಗೆ | ಶಿರ – ತಲೆ | |

## ಮಾತನಾಡೋಣ ಬನ್ನಿ.

೧. ನಮ್ಮ ದೇಶ ಯಾವುದು ?

೨. ದೇಶದ ಏಳ್ಗೆಗೆ ಯಾರು ಯಾರು ದುಡಿಯುತ್ತಾರೆ?

೩. ನಿಮ್ಮ ಮನೆಯ ಸುತ್ತಮುತ್ತ ಯಾವ ಯಾವ ಭಾಷೆ ಮಾತನಾಡುವ ಜನರಿದ್ದಾರೆ ?

## ಯೋಚಿಸಿ ಬರೆ.

- **ಪದ್ಯದಲ್ಲಿ ಬಂದಿರುವ ಪ್ರಾಸಯುಕ್ತ ಪದದ ಸಹಾಯದಿಂದ ಚಿಕ್ಕದಾದ ನಾಲ್ಕು ಸಾಲಿನ ಪದ್ಯವನ್ನು ಬರೆ.**

ಉದಾ – ಎಲ್ಲರೂ ಸೇರಿ ದುಡಿಯೋಣ

ದುಡಿಮೆಯೇ ದೇವರು ಎನ್ನುವುದರಿಯೋಣ

..........................................................................................

..........................................................................................

## ಪ್ರಶ್ನೆಗಳಿಗೆ ಉತ್ತರಿಸು.

೧) ಭಾರತ ಪುತ್ರರು ಎಂದು ಯಾರಿಗೆ ಹೇಳಿದ್ದಾರೆ?

..........................................................................................

..........................................................................................

೨) ಕವಿ ನಾವೆಲ್ಲರೂ ಯಾವ ರೀತಿಯಲ್ಲಿ ಬಾಳೋಣ ಎಂದಿದ್ದಾನೆ ?

..........................................................................................

..........................................................................................

೩) ಅರಿಗಳ ಎದುರಿಗೆ ನಾವು ಹೇಗೆ ನಿಲ್ಲಬೇಕೆಂದು ಕವಿಯು ಹೇಳಿದ್ದಾನೆ?

..........................................................................................

..........................................................................................

೪) ಯಾವ ರೀತಿ ಪ್ರಗತಿಯ ಶಿಖರವನ್ನು ಏರಬೇಕು?

..........................................................................................

..........................................................................................

## ಸರಿ ಉತ್ತರದ ಪರ್ಯಾಯ ಕ್ರಮಾಂಕಕ್ಕೆ ಗೋಲು ◯ ಹಾಕು.

ಅ) 'ಮಗು' ಈ ಪದದ ಬಹುವಚನ ಪದ ಯಾವುದು?

೧) ಕೂಸು ೨) ಮಗು ೩) ಮಕ್ಕಳು ೪) ಮಗುಗಳು

ಬ) ಕೆಳಗಿನ ಗಾದೆಮಾತನ್ನು ಪೂರ್ಣ ಮಾಡು.

............................. ಹೊತ್ತು ಉತ್ತಮ

೧) ಕಾಲಕ್ಕಿಂತ ೨) ಮುತ್ತಿಗಿಂತ ೩) ವೇಳೆಗಿಂತ ೪) ಸುಖಕ್ಕಿಂತ

ಕ) 'ಹಿರಿಯರು' ಈ ಪದದ ಜೋಡು ಶಬ್ದ ಯಾವುದು ?

೧)ಎಲ್ಲರೂ ೨) ದೊಡ್ಡವರು ೩) ಕಿರಿಯರು ೪) ಚಿಕ್ಕವರು

## ✤ ಥಟ್ಟನೆ ಹೇಳು.



ಹಾರುತಿದೆ ನೋಡಿ
ಗಾಳಿಪಟವಲ್ಲ
ಬಣ್ಣಗಳುಂಟು
ಕಾಮನ ಬಿಲ್ಲು ಅಲ್ಲ
ಚಕ್ರವುಂಟು ವಾಹನವಲ್ಲ
ಹೇಳಿ ನಾನಾರು? ಜಾಣರೆ ನೀವೆಲ್ಲ

ಲೇಖನಿ

## ಬೇರೆ ಬೇರೆ ಭಾಷೆಗಳಲ್ಲಿ ನಮಸ್ಕಾರ ಹೇಗೆ ಹೇಳುತ್ತಾರೆ ಎಂಬುವುದನ್ನು ತಿಳಿ ಮತ್ತು ಹೇಳು.



# ೨. ಚಿತ್ರಕಥೆ - ಆಮೆ ಮತ್ತು ಕೊಕ್ಕರೆ











**(ಸೂಚನೆ:** ಇಂತಹ ಇನ್ನಷ್ಟು ಕಥೆಗಳನ್ನು ಕಥೆ ಪುಸ್ತಕಗಳಿಂದ, ಅಂತರ್ಜಾಲದಿಂದ ಓದಲು, ಕೇಳಲು ಹೇಳಿರಿ. ಅವುಗಳನ್ನು ವರ್ಗದಲ್ಲಿ ಹೇಳಲು ಅವಕಾಶ ಮಾಡಿ ಕೊಡಿರಿ ಮತ್ತು ಕಥೆಯಲ್ಲಿ ಬರುವ ಪಾತ್ರಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹೇಳಿರಿ. ಉದಾ: ಈ ಕಥೆಯಲ್ಲಿ ನಿನಗೆ ಯಾವ ಪ್ರಾಣಿ ಇಷ್ಟವಾಯಿತು? ಏಕೆ ಇಷ್ಟವಾಯಿತು? ಈ ಕಥೆಯಲ್ಲಿ ನಿನಗೆ ಯಾವ ಪ್ರಾಣಿ ಇಷ್ಟವಾಗಲಿಲ್ಲ? ಏಕೆ ಇಷ್ಟವಾಗಲಿಲ್ಲ?)

# ೩. ಸೇರು ಭತ್ತ

ಗೋವಿಂದಪ್ಪ ಹೊಸಪೇಟೆಯ ಒಬ್ಬ ವ್ಯಾಪಾರಿ. ನೆರೆ ಹಳ್ಳಿಗಳಲ್ಲಿ ಅವನಿಗೆ ಹೊಲಗದ್ದೆಗಳು ಇದ್ದವು. ಗೋವಿಂದಪ್ಪನಿಗೆ ಮೂವರು ಗಂಡು ಮಕ್ಕಳಿದ್ದರು. ಅವರು ಆ ಗದ್ದೆಗಳಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದರು. ತಮ್ಮ ಮಡದಿ ಮಕ್ಕಳೊಡನೆ ಸುಖವಾಗಿ ಇದ್ದರು.

ಒಮ್ಮೆ ಗೋವಿಂದಪ್ಪನಿಗೆ ತನ್ನ ಸೊಸೆಯಂದಿರ ಜಾಣತನವನ್ನು ತಿಳಿಯುವ ಆಸೆ ಆಯಿತು. ಅವನು ಸೊಸೆಯಂದಿರನ್ನು ಹೊಸಪೇಟೆಗೆ ಕರೆಯಿಸಿದನು. ಮೂವರು ಸೊಸೆಯಂದಿರರಿಗೆ ಒಂದೊಂದು ಸೇರು ಭತ್ತ ಕೊಟ್ಟನು. ''ಈ ಭತ್ತವನ್ನು ಜೋಪಾನವಾಗಿಡಿ. ನಾನು ಕೇಳಿದಾಗ ಮಾತ್ರ ಕೊಡಿ'' ಎಂದನು.

ಅವರಿಗೆ ಮಾವನ ಮಾತುಗಳು ಸೋಜಿಗ ಎನಿಸಿದವು. ಆದರೂ ಅವರು ಮರು ಮಾತನಾಡದೆ ಭತ್ತ ತೆಗೆದುಕೊಂಡರು. ಮರುದಿನ ತಮ್ಮ ಹಳ್ಳಿಗಳಿಗೆ ತೆರಳಿದರು.

ಒಂದೆರಡು ವರುಷಗಳು ಉರುಳಿದವು.ಗೋವಿಂದಪ್ಪ ಸೊಸೆಯಂದಿರಿಗೆ ಭತ್ತ ತೆಗೆದುಕೊಂಡು ಬರಲು ಹೇಳಿ ಕಳುಹಿಸಿದನು.

ಹಿರಿಯ ಸೊಸೆ ಪಾರ್ವತಿಯು ಪತಿಯೊಡನೆ ಅಂದೇ ಬಂದಳು. ''ಮಾವಯ್ಯ ನೀವು ಕೊಟ್ಟ ಭತ್ತವನ್ನು ನಾನು ಚೆಲ್ಲಿಬಿಟ್ಟೆನು'' ಎಂದಳು.



ಎರಡನೆಯ ಸೊಸೆ ಕಾವೇರಿ, ''ಮಾವಯ್ಯ, ನಾನು ಭತ್ತವನ್ನು ಭದ್ರವಾಗಿ ಕೂಡಿಟ್ಟಿದ್ದೆ. ಈಗ ನೋಡಿದರೆ ಸಿಪ್ಪೆಯಷ್ಟೇ ಉಳಿದಿದೆ, ಕ್ಷಮಿಸಿರಿ'' ಎಂದು ತಲೆತಗ್ಗಿಸಿ ನಿಂತಳು. ಅವರಿಬ್ಬರ ಮಾತುಗಳಿಂದ ಗೋವಿಂದಪ್ಪನಿಗೆ ಸಮಾಧಾನವಾಗಲಿಲ್ಲ.

ಅನ್ನಪೂರ್ಣೆ ಕಿರಿಯ ಸೊಸೆ. ಅವಳು ಮರುದಿನ ಮುಂಜಾನೆ ಹೊಸಪೇಟೆಗೆ ಬಂದಳು. ಅವಳ ಜೊತೆಗೆ ಗೋಣಿಚೀಲಗಳಿಂದ ತುಂಬಿದ ಒಂದು ಚಕ್ಕಡಿ ಕೂಡ ಬಂದಿತು. ಮನೆಯ ಮುಂದೆ ನಿಂತಿತು. ಅದನ್ನು ನೋಡಿ ಎಲ್ಲರಿಗೂ ಅಚ್ಚರಿಯೇ ಅಚ್ಚರಿ.



''ಇದೇನು, ಈ ಚಕ್ಕಡಿಯಲ್ಲಿ ಇಷ್ಟೊಂದು ಚೀಲಗಳು?'', ಎಂದು ಗೋವಿಂದಪ್ಪ ಕಿರಿಯ ಸೊಸೆಗೆ ಕೇಳಿದನು. ''ಮಾವಯ್ಯ, ನೀವು ಕೊಟ್ಟ ಒಂದು ಸೇರು ಭತ್ತವನ್ನು ನಾವು ಹೊಲದಲ್ಲಿ ಬಿತ್ತಿದೆವು. ಕಷ್ಟಪಟ್ಟು ದುಡಿದೆವು. ಹುಲುಸಾದ ಬೆಳೆ ಬಂದಿತು. ಬೆಳೆದ ಭತ್ತವನ್ನೆಲ್ಲ ಜೋಪಾನವಾಗಿ ಕೂಡಿಟ್ಟೆವು. ಚಕ್ಕಡಿಯಲ್ಲಿ ತಂದ ಭತ್ತದ ಚೀಲಗಳು ನೀವು ಕೊಟ್ಟ ಸೇರು ಭತ್ತದ ಫಲ'' ಎಂದಳು ಅನ್ನಪೂರ್ಣೆ.

ಅನ್ನಪೂರ್ಣೆಯ ಮಾತಿನಿಂದ ಗೋವಿಂದಪ್ಪನಿಗೆ ಸಂತೋಷವಾಯಿತು. ಅವನು, ''ಭಲೆ ಅನ್ನಪೂರ್ಣೆ, ನೀನು ತುಂಬಾ ಜಾಣೆ. ನಾನು ಕೊಟ್ಟ ಕಾಳಿನ ಸರಿಯಾದ ಉಪಯೋಗ ಮಾಡಿದೆ. ಹೆಸರಿಗೆ ತಕ್ಕಂತೆ ನೀನು ಅನ್ನಪೂರ್ಣೆಯೇ ಸರಿ'' ಎಂದು ಕಿರಿಯ ಸೊಸೆಯನ್ನು ಹೊಗಳಿದನು.

**–ಯ.ಕೃಷ್ಣಶರ್ಮ**

## ಶಬ್ದಾರ್ಥ:

| | | | |
|---|---|---|---|
| ಭದ್ರ –ಸುರಕ್ಷಿತ | ಹುಲುಸು –ಹೆಚ್ಚು | ಸೋಜಿಗ –ಆಶ್ಚರ್ಯ | ಚಕ್ಕಡಿ – ಬಂಡಿ |

## ಮಾತನಾಡೋಣ ಬನ್ನಿ.

೧. ಗೋವಿಂದಪ್ಪನ ಸೊಸೆಯಂದಿರು ಮಾಡಿದ ಕೆಲಸದ ಕುರಿತು ನಿಮ್ಮ ಅಭಿಪ್ರಾಯ ಹೇಳಿರಿ.

೨. ನಿನಗೆ ಅಪ್ಪ, ಅಮ್ಮ, ನೆಂಟರು ಹಣ ಕೊಟ್ಟರೆ ಅದನ್ನು ಏನು ಮಾಡುವೆ?

## ಯೋಚಿಸಿ ಬರೆ.

೧. ಗೋವಿಂದಪ್ಪನ ಹೊಲಗದ್ದೆಗಳು ಎಲ್ಲಿ ಇದ್ದವು?

..........................................................................................

..........................................................................................

೨. ಗೋವಿಂದಪ್ಪನು ಸೊಸೆಯಂದಿರಿಗೆ ಏನು ಕೊಟ್ಟನು?

..........................................................................................

..........................................................................................

೩. ಕಾವೇರಿ ಬಳಿಯಲ್ಲಿದ್ದ ಭತ್ತ ಏಕೆ ಸಿಪ್ಪೆಯಾದವು?

..........................................................................................

..........................................................................................

೪. ಅನ್ನಪೂರ್ಣೆ ಮಾವನಿಗೆ ಏನೆಂದು ಉತ್ತರಿಸಿದಳು?

..........................................................................................

..........................................................................................

೫. ಗೋವಿಂದಪ್ಪನು ಅನ್ನಪೂರ್ಣೆಯನ್ನು ಏಕೆ ಹೊಗಳಿದನು?

..........................................................................................

..........................................................................................

## ಹೊಂದಿಸಿ ಬರೆ

| | | | |
|---|---|---|---|
| ಅ) | ಪಾರ್ವತಿ | ೧) | ಹೆಸರಿಗೆ ತಕ್ಕಂತೆ ನೀನು ಅನ್ನಪೂರ್ಣೆಯೇ |
| ಆ) | ಕಾವೇರಿ | ೨) | ಮಾವಯ್ಯ ನೀವು ಕೊಟ್ಟ ಭತ್ತವನ್ನು ನಾನು ಚೆಲ್ಲಿಬಿಟ್ಟೆನು |
| ಇ) | ಅನ್ನಪೂರ್ಣೆ | ೩) | ಮಾವಯ್ಯ ನಾನು ಭತ್ತವನ್ನು ಭದ್ರವಾಗಿ ಕೂಡಿಟ್ಟಿದ್ದೆ |
| ಈ) | ಗೋವಿಂದಪ್ಪ | ೪) | ಚಕ್ಕಡಿಯಲ್ಲಿ ತಂದ ಭತ್ತದ ಚೀಲಗಳು ನೀವು ಕೊಟ್ಟ ಸೇರು ಭತ್ತದ ಫಲ |

## ✤ ಭಾಷೆ ತಿಳಿಯೋಣ ಬಾ:

- **ಕೆಳಗಿನ ವಾಕ್ಯಗಳಲ್ಲಿಯ ಗೆರೆ ಹೊಡೆದ ಶಬ್ದಗಳನ್ನು ಯೋಗ್ಯ ಚೌಕಟ್ಟಿನಲ್ಲಿ ಬರೆಯಿರಿ.**

೧) ಅವನಿಗೆ ಹೊಲಗದ್ದೆಗಳು ಇದ್ದವು.

೨) ಗೋವಿಂದಪ್ಪನು ಸೊಸೆಯಂದಿರನ್ನು ಹೊಸಪೇಟೆಗೆ ಕರೆಯಿಸಿದನು.

೩) ಒಂದು ಸೇರು ಭತ್ತವನ್ನು ನಾವು ಹೊಲದಲ್ಲಿ ಬಿತ್ತಿದೆವು.

| ಏಕವಚನ | ಬಹುವಚನ |
|---|---|
| | |
| | |
| | |

## ನಾಮಪದ

ನಾಮಪದ ಎಂದರೆ ವ್ಯಕ್ತಿ, ಸ್ಥಳ, ಪ್ರಾಣಿ, ಪಕ್ಷಿ, ವಸ್ತುಗಳು, ಭಾವನೆ ಮತ್ತು ಉದ್ಯೋಗಗಳನ್ನು ಸೂಚಿಸುವ ಪದಗಳು. ಉದಾ : ರಾಮ, ಪುಣೆ, ನಾಯಿ , ಗಿಳಿ, ಬೆಳೆ, ಸುಂದರ, ಅರಮನೆ, ಬಡಿಗ ಇತ್ಯಾದಿ.

**ನಾಮಪದದ ಪ್ರಕಾರಗಳು**

- ವಸ್ತುವಾಚಕ
- ಗುಣವಾಚಕ
- ಸಂಖ್ಯಾವಾಚಕ

### ೧) ವಸ್ತುವಾಚಕ ನಾಮಪದ

**ವಸ್ತುಗಳ ಹೆಸರುಗಳನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಪದಗಳು.**

ಉದಾ : **ಚೇತನವುಳ್ಳ ವಸ್ತುಗಳು :** ಹೆಂಗಸು, ಕೃಷ್ಣ, ಬಸವ, ಎತ್ತು, ಮುದುಕ, ನರಿ, ಎಮ್ಮೆ, ನಾಯಿ ಮುಂತಾದವುಗಳು.

**ಚೇತನವಿಲ್ಲದ ವಸ್ತುಗಳು:** ನೆಲ, ಜಲ, ಕಲ್ಲು ಹಣ್ಣು, ಹೂ, ಅಡವಿ, ಬೆಟ್ಟ, ಕಾರು, ಮಠ, ಶಾಲೆ, ಮನೆ ಮುಂತಾದವುಗಳು.

ಈ ವಸ್ತುವಾಚಕಗಳನ್ನು ೧) ರೂಢನಾಮ ೨) ಅಂಕಿತನಾಮ ೩) ಅನ್ವರ್ಥಕನಾಮ- ಎಂದು ಮೂರು ರೀತಿಯಾಗಿ ವಿಂಗಡಿಸಬಹುದು.

**ವಸ್ತುವಾಚಕ ನಾಮಪದದ ಪ್ರಕಾರಗಳು**

- **ರೂಢನಾಮ (ಸಾಮಾನ್ಯನಾಮ)**
- **ಅಂಕಿತನಾಮ**
- **ಅನ್ವರ್ಥಕ ನಾಮ**

೧) **ರೂಢನಾಮ ( ಸಾಮಾನ್ಯ ನಾಮ) :** ಪರಂಪರಾಗತವಾಗಿ ರೂಢಿಯಲ್ಲಿರುವ ಶಬ್ದಗಳಿಗೆ ರೂಢನಾಮಗಳೆನ್ನುವರು.

ಉದಾ : ನದಿ, ಹುಡುಗ ,ಹುಡುಗಿ, ಪ್ರಾಣಿ, ಪಕ್ಷಿ, ಗಿಡ, ಮಗು, ಬೆಟ್ಟ ಇತ್ಯಾದಿ.

**ಕೆಳಗಿನ ಉದಾಹರಣೆಗಳಲ್ಲಿ ರೂಢನಾಮವನ್ನು ಗುರುತಿಸಿ ಗೆರೆ ಹಾಕು.**

೧. ಹುಲುಸಾದ ಬೆಳೆ ಬಂದಿತು.
೨. ತಮ್ಮ ಮಡದಿ ಮಕ್ಕಳೊಡನೆ ಸುಖವಾಗಿ ಇದ್ದರು.
೩. ನೆರೆ ಹಳ್ಳಿಗಳಲ್ಲಿ ಅವನಿಗೆ ಹೊಲ ಗದ್ದೆಗಳು ಇದ್ದವು.
೪. ನನ್ನ ಶಾಲೆ ಬಹಳ ಸುಂದರವಾಗಿದೆ.
೫. ನದಿಯಲ್ಲಿ ಈಜಲು ಹೋದರು.

೨) **ಅಂಕಿತನಾಮ :** ವ್ಯಕ್ತಿ, ಪ್ರಾಣಿ, ಪಕ್ಷಿ, ವಸ್ತುಗಳಿಗೆ ಇಟ್ಟ ಹೆಸರುಗಳಿಗೆ **ಅಂಕಿತನಾಮ**ಗಳೆನ್ನುವರು.

ಉದಾ:ರಾಮ, ಶಾಲೆ, ಆನೆ, ಗಂಗಾನದಿ, ಹಿಮಾಲಯ, ಸಾವಿತ್ರಿ, ಬೆಂಗಳೂರು, ಪರ್ವತ ಇತ್ಯಾದಿ.

**ಕೆಳಗಿನ ಉದಾಹರಣೆಗಳಲ್ಲಿ ಅಂಕಿತನಾಮವನ್ನು ಗುರುತಿಸಿ ಗೆರೆ ಹಾಕು.**

೧. ಹಿರಿಯ ಸೊಸೆ ಪಾರ್ವತಿಯು ಪತಿಯೊಡನೆ ಅಂದೇ ಬಂದಳು.
೨. ಅವಳ ಮಾತುಗಳಿಂದ ಗೋವಿಂದಪ್ಪನಿಗೆ ಸಮಾಧಾನವಾಗಲಿಲ್ಲ.
೩. ಎರಡನೆಯ ಸೊಸೆ ಕಾವೇರಿ ''ಮಾವಯ್ಯ, ನಾನು ಭತ್ತವನ್ನು ಭದ್ರವಾಗಿ ಕೂಡಿಟ್ಟಿದ್ದೆ.
೪. ಅನ್ನಪೂರ್ಣೆಯ ಮಾತಿನಿಂದ ಗೋವಿಂದಪ್ಪನಿಗೆ ಸಂತೋಷವಾಯಿತು.
೫. ಮಹಾತ್ಮ ಗಾಂಧೀಜಿ ನಮ್ಮ ದೇಶದ ರಾಷ್ಟ್ರಪಿತ.

೩) **ಅನ್ವರ್ಥಕ ನಾಮ :** ಉದ್ಯೋಗ, ಸ್ವಭಾವ ಮತ್ತು ನ್ಯೂನ್ಯತೆಗಳನ್ನು ಸೂಚಿಸುವ ಪದಗಳಿಗೆ ಅನ್ವರ್ಥಕ ನಾಮಗಳೆನ್ನುವರು.

ಉದಾ : ಬಡಿಗ, ಮೂಕ, ಗೌಳಿಗ, ಕಿವುಡ, ಶಿಕ್ಷಕ, ರೋಗಿ, ಕುಂಟ, ವೈದ್ಯ, ಯೋಗಿ ಇತ್ಯಾದಿ

**ಕೆಳಗಿನ ಉದಾಹರಣೆಗಳಲ್ಲಿ ಅನ್ವರ್ಥಕನಾಮವನ್ನು ಗುರುತಿಸಿ ಗೆರೆ ಹಾಕು.**

೧. ಗೋವಿಂದಪ್ಪ ಹೊಸಪೇಟೆಯ ಒಬ್ಬ ವ್ಯಾಪಾರಿ.
೨. ಕರ್ಕಶ ಧ್ವನಿಯ ಕೇಳಿ ಆತ ಕಿವುಡನಾಗಿದ್ದಾನೆ.
೩. ನಾನು ಲೋಕೇಶ. ಜಿಲ್ಲಾ ಪರಿಷದ ಕನ್ನಡ ಶಾಲೆಯ ವಿದ್ಯಾರ್ಥಿ.
೪. ನಾನು ಇದೇ ಊರಿನ ಪ್ರಗತಿಪರ ರೈತ.
೫. ಕಂಬಾರ ಕಬ್ಬಿಣದ ವಿವಿಧ ಸಲಕರಣೆಗಳನ್ನು ತಯಾರಿಸುತ್ತಾನೆ.

**ದುಡಿಮೆಯೇ ದುಡ್ಡಿನ ತಾಯಿ**

# ೪. ಮುಂಜಾನೆದ್ದು ಕುಂಬಾರಣ್ಣ



ಮುಂಜಾನೆದ್ದು ಕುಂಬಾರಣ್ಣ
ಹಾಲು ಬಾನುಂಡಾನ
ಹಾರ್‍ಯಾರಿ ಮಣ್ಣಾ ತುಳಿದಾನ
ಹಾರಿ ಹಾರ್‍ಯಾರಿ ಮಣ್ಣಾ ತುಳಿದು ತಾ ಮಾಡ್ಯಾನ
ನಾರ್‍ಯಾರು ಹೊರುವಂತ ಐರಾಣಿ ॥



ಹೊತ್ತಾರೆದ್ದು ಕುಂಬಾರಣ್ಣ
ತುಪ್ಪ ಬಾನುಂಡಾನ
ಗಟ್ಟೀಸಿ ಮಣ್ಣಾ ತುಳಿದಾನ
ಗಟ್ಟೀಸಿ ಮಣ್ಣಾ ತುಳಿಯುತ ಮಾಡ್ಯಾನ
ಮಿತ್ರೇರು ಹೊರುವಂತ ಐರಾಣಿ ॥



ಅಕ್ಕಿ ಹಿಟ್ಟು ನಾವು ತಕ್ಕೊಂಡು ತಂದೀವಿ
ಗಿಂಡೀಲಿ ತಂದಿವ್ನಿ ತಿಳಿದುಪ್ಪ
ಗಿಂಡೀಲಿ ತಂದಿವ್ನಿ ತಿಳಿದುಪ್ಪ ಕುಂಬಾರಣ್ಣ
ತಂದೀಡು ನಮ್ಮ ಐರಾಣಿ ॥



ಕುಂಬಾರಣ್ಣನ ಮಡದಿ ಕಡಗಾದ ಕೈಯಿಕ್ಕಿ
ಕೊಡದಾ ಮ್ಯಾಲೇನ ಬರೆದಾಳ
ಕೊಡದಾ ಮ್ಯಾಲೇನ ಬರೆದಾಳ ಕಲ್ಯಾಣದ
ಶರಣ ಬಸವನ ನಿಲಿಸ್ಯಾಳ ॥

–ಜಾನಪದ

## ಶಬ್ದಾರ್ಥ :

| | |
|---|---|
| ಬಾನ-ಅನ್ನ | ಮಿತ್ರೇರು - ಗೆಳತಿಯರು |
| ಹೊತ್ತಾರೆ - ಬೆಳಗಿನ ಜಾವ | ನಾರ್‍ಯಾರು - ಹೆಣ್ಣು ಮಕ್ಕಳು, ನಾರಿಯರು |
| ಹಾರಿ - ಜಿಗಿದು | ಐರಾಣಿ - ಬಿಂದಿಗೆ, ಕಿರಿದಾದ ಬಾಯುಳ್ಳ ಪಾತ್ರೆ |

## ಮಾತನಾಡೋಣ ಬನ್ನಿ.

೧. ನೀನು ಕೇಳಿದ ಒಂದು ಜನಪದ ಗೀತೆಯನ್ನು ಹಾಡು.

೨. ಕುಂಬಾರನು ಮಣ್ಣಿನಿಂದ ಯಾವ ಯಾವ ವಸ್ತುಗಳನ್ನು ತಯಾರಿಸುವನು?

## ಯೋಚಿಸಿ ಬರೆ.

೧) ಕುಂಬಾರಣ್ಣ ಮಣ್ಣನ್ನು ಹೇಗೆ ತುಳಿಯುತ್ತಾನೆ? ಏಕೆ ತುಳಿಯುತ್ತಾನೆ?

........................................................................................................

........................................................................................................

೨) ಯಾರು ಹೊರುವಂತ ಐರಾಣಿ ಕುಂಬಾರಣ್ಣ ಮಾಡಿದ್ದಾನೆ ?

........................................................................................................

೩) ತಿಳಿದುಪ್ಪ ಯಾವುದರಲ್ಲಿ ತಂದಿದ್ದರು?

........................................................................................................

೪) ಕುಂಬಾರಣ್ಣ ಏನು ಉಂಡಿದ್ದಾನೆ ?

........................................................................................................

- ಕುಂಬಾರಣ್ಣ ಮಡಿಕೆ ತಯಾರಿಸುವ ವಿಧಾನದ ಯೋಗ್ಯ ಕ್ರಮವನ್ನು ಮುಂದಿನ ಚೌಕಟ್ಟಿನಲ್ಲಿ ಬರೆ.

೧) ಮಡಿಕೆಗಳನ್ನು ಒಣಗಿಸುವನು. ☐

೨) ತಿಗರಿಯ ಮೇಲೆ ಮಣ್ಣಿನ ಮುದ್ದೆ ಇಟ್ಟು ಆಕಾರ ನೀಡುವನು. ☐

೩) ಮಡಿಕೆಗಳನ್ನು ಸುಡುವನು. ☐

೪) ಮಣ್ಣಿನ ಆಯ್ಕೆ ಮತ್ತು ಶುದ್ಧೀಕರಣ ಮಾಡುವನು. ☐

೫) ಮಣ್ಣಿನ ಮುದ್ದೆಯನ್ನು ಹದಗೊಳಿಸುವನು. ☐

**ಕಂಬಾರಣ್ಣನಿಗೆ ಭೇಟಿಯಾಗಿ ಅವನ ಉದ್ಯೋಗದ ಬಗ್ಗೆ ಮಾಹಿತಿ ಸಂಗ್ರಹಿಸುತ್ತ, ಅವನೊಂದಿಗೆ ಮಾಡಿದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**



ಮಿತಾಲಿ: ನಮಸ್ಕಾರ ಕಂಬಾರಣ್ಣ.

ಕಂಬಾರಣ್ಣ: 'ನಮಸ್ಕಾರ, ಹೇಳು ಮಗು ನನ್ನಿಂದ ಏನಾಗಬೇಕಿತ್ತು?

ಮಿತಾಲಿ:

ಕಂಬಾರಣ್ಣ:

ಮಿತಾಲಿ:

ಕಂಬಾರಣ್ಣ:

ಮಿತಾಲಿ:

ಕಂಬಾರಣ್ಣ:

ಮಿತಾಲಿ:

**ಪದ್ಯದ ಅರ್ಥವನ್ನು ನಿಮ್ಮ ಸ್ವಂತದ ಮಾತುಗಳಲ್ಲಿ ಹೇಳಿರಿ ಮತ್ತು ಆರರಿಂದ ಎಂಟು ವಾಕ್ಯಗಳಲ್ಲಿ ಬರೆಯಿರಿ.**

## ವಚನ ಓದು



ಬಸವಣ್ಣ

ನುಡಿದಡೆ ಮುತ್ತಿನ ಹಾರದಂತಿರಬೇಕು

ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು

ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು

ನುಡಿಯೊಳಗಾಗಿ ನಡೆಯದಿದ್ದಡೆ

ಕೂಡಲಸಂಗಮದೇವನೆಂತೊಲಿವನಯ್ಯಾ ?

## ಕೆಳಗಿನ ವಚನಕಾರರ ಯಾವುದೇ ಒಂದು ವಚನ ಬರೆ.



ಅಕ್ಕಮಹಾದೇವಿ



ಸಿದ್ಧರಾಮೇಶ್ವರ



## ಭಾಷೆ ತಿಳಿಯೋಣ ಬಾ:

ಕೊಟ್ಟ ಗ್ರಾಮ್ಯ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆದು ನಿಮ್ಮ ವಾಕ್ಯದಲ್ಲಿ ಉಪಯೋಗಿಸಿರಿ.

ಹಾರ್‍ಯಾರಿ – ಹಾರಿ ಹಾರಿ;

ಮಕ್ಕಳು ಗಿಡದಲ್ಲಿನ ಹಣ್ಣುಗಳನ್ನು **ಹಾರ್‍ಯಾರಿ** ಕೀಳುತ್ತಿದ್ದರು.

೧. ತಕ್ಕೊಂಡು : ..........................................................................................

೨. ನಾರ್‍ಯಾರು : ..........................................................................................

೩. ತಂದಿವ್ನಿ : ..........................................................................................

೪. ಮಾಡ್ಯಾನ : ..........................................................................................

### ❖ ಯೋಗ್ಯ ಪರ್ಯಾಯ ಕ್ರಮಾಂಕಕ್ಕೆ ಗೋಲು ◯ ಹಾಕು.

೧) ಅಂಗಡಿಕಾರ ಇದು ............................ ನಾಮಪದ.

ಅ)ರೂಢನಾಮ ಬ)ಅಂಕಿತನಾಮ ಕ) ಅನ್ವರ್ಥಕ ನಾಮ ಡ) ಗುಣವಾಚಕ

೨) ............................ ಇದು ರೂಢನಾಮವಾಗಿದೆ.

ಅ) ರಾಮ ಬ) ಸೀತೆ ಕ) ಮನುಷ್ಯ ಡ) ರವಿನಾ

೩) ಕೆಳಗಿನ ವಾಕ್ಯದಲ್ಲಿಯ ಗುಣವಾಚಕ ನಾಮಪದ ಗುರುತಿಸಿರಿ.

ಒಮ್ಮೆಲೆ ಜೋರಾಗಿ ಮಳೆ ಆರಂಭಿಸಿತು.

ಅ) ಆರಂಭಿಸಿತು ಬ)ಮಳೆ ಕ) ಒಮ್ಮೆಲೆ ಡ) ಜೋರಾಗಿ

೪) ಇಟ್ಟ ಹೆಸರುಗಳಿಗೆ ............................ ನಾಮಗಳೆನ್ನುವರು.

ಅ) ಅಂಕಿತನಾಮ ಬ) ಅನ್ವರ್ಥಕ ನಾಮ ಕ) ರೂಢನಾಮ ಡ) ವಸ್ತುವಾಚಕ

### ● ಹೇಳು ನಾನಾರು?



ಸುಟ್ಟರೆ ಸಾಯಲ್ಲ, ಒಡೆದರೆ ಬದುಕಲ್ಲ

(ಇಟ್ಟಿಗೆ)

**೨) ಗುಣವಾಚಕ ನಾಮಪದ :**

ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲಾ ಗುಣವಾಚಕ ನಾಮಪದ ಎನಿಸುವವು.

ಉದಾ : ಸುಂದರ, ಧೈರ್ಯ, ಕಪ್ಪು, ದೊಡ್ಡದು, ಚಿಕ್ಕದು, ಹೊಸ, ಬಿಳಿಯ, ಇಂಪಾದ, ಹಳೆಯ ಇತ್ಯಾದಿ.

**ಕೆಳಗಿನ ಉದಾಹರಣೆಗಳಲ್ಲಿ ಗುಣವಾಚಕ ನಾಮಪದ ಗುರುತಿಸಿ ಗೆರೆ ಹಾಕು.**

೧. ಕುಂಬಾರಣ್ಣ ಮಡಿಕೆ ತಯಾರಿಸಲು ಕೆಂಪು ಮಣ್ಣು ತಂದನು.

೨. ಗಿಂಡೀಲಿ ತಂದಿವ್ನಿ ತಿಳಿದುಪ್ಪ ಕುಂಬಾರಣ್ಣ

೩. ಭಲೆ! ಅನ್ನಪೂರ್ಣೆ,ನೀನು ತುಂಬಾ ಜಾಣೆ.

೪. ತೋಟದಲ್ಲಿ ಕೆಂಪುಗುಲಾಬಿ ಹೂವುಗಳು ಅರಳಿವೆ.

೫. ಬೇವಿನ ಹಣ್ಣುಗಳು ಸಿಹಿಕಹಿಯಾದ ರುಚಿಯನ್ನು ಹೊಂದಿರುತ್ತವೆ.

**೩) ಸಂಖ್ಯಾವಾಚಕ ನಾಮಪದ :**

ವ್ಯಕ್ತಿಗಳ, ವಸ್ತುಗಳ, ಸಂಗತಿಗಳ ಸಂಖ್ಯೆ ಅಥವಾ ಎಣಿಕೆಯನ್ನು ತಿಳಿಸುವ ನಾಮಪದವನ್ನು ಸಂಖ್ಯಾವಾಚಕ ನಾಮಪದ ಎನ್ನುವರು.

ಉದಾ : ೧) ಒಂದು, ಮೂರು, ಎಂಟು, ಹನ್ನೊಂದು,

೨) ಮೂರನೆಯ, ಮೊದಲನೆಯ, ಐದನೆಯ

೩) ಹಲವಾರು, ಕೆಲವು, ಅನೇಕ

೪) ತ್ರಿಗುಣ, ದ್ವಿಗುಣ, ಇಮ್ಮಡಿ, ಮುಮ್ಮಡಿ

**ಕೆಳಗಿನ ಉದಾಹರಣೆಗಳಲ್ಲಿ ಸಂಖ್ಯಾವಾಚಕ ನಾಮವನ್ನು ಗುರುತಿಸಿ ಗೆರೆ ಹಾಕು.**

೧. ಒಮ್ಮನದಿಂದಲಿ ಶ್ರಮಿಸುತ ನಾಡಲಿ.

೨. ಗೋವಿಂದಪ್ಪನಿಗೆ ಮೂರು ಜನ ಸೊಸೆಯಂದಿರು ಇದ್ದರು.

೩. ಬಾಪೂಜಿ ಎಲ್ಲಿಗೆ ಹೋದರೂ,ಅಲ್ಲಿ ಸಾವಿರಾರು ಜನರು ಸೇರುತ್ತಿದ್ದರು.

೪. ಅಂಟಿಗೆ ಪಂಟಿಗೆ ತಂಡದಲ್ಲಿ ಸಾಮಾನ್ಯವಾಗಿ ಇಬ್ಬರು ಮುಮ್ಮೇಳದವರಾದರೆ, ಉಳಿದವರೆಲ್ಲ ಹಿಮ್ಮೇಳದವರು.

೫. ಒಂದು ದಿನ ಶೆಫಾಲಿ ನಿಧಾನವಾಗಿ ಕೇಳಿದಳು.

- **ಮಣ್ಣಿನಿಂದ ಹಣ್ಣುಗಳನ್ನು ತಯಾರಿಸಿ ಬಣ್ಣ ಕೊಡು.**

**ಕೈ ಕೆಸರಾದರೆ ಬಾಯಿ ಮೊಸರು**

# ೫. ಕಹಿ ಬೇವಿನ ಸಿಹಿ ಕಥೆ

ಬೇವು ಕಹಿಯಾದರೂ ಅದರಿಂದಾಗುವ ಲಾಭಗಳು ಮಾತ್ರ ಅತ್ಯಂತ ಸಿಹಿಯಾಗಿವೆ. ಬೇವಿನ ಮರದ ಪ್ರತಿಯೊಂದು ಭಾಗವು ಔಷಧಿಯುಕ್ತವಾಗಿದೆ. ಮಾನವ, ಪಶು, ಪಕ್ಷಿಗಳಿಗೆ ಇದು ಉಪಯುಕ್ತವಾಗಿದೆ.

ಬೇವಿನ ಮರವು ಭಾರತದಲ್ಲಿ ಎಲ್ಲೆಡೆ ಕಂಡುಬರುವ ಮರವಾಗಿದೆ. ಅದು ನಲ್ವತ್ತರಿಂದ ಐವತ್ತು ಅಡಿಗಳಷ್ಟು ಎತ್ತರವಾಗಿ ಬೆಳೆಯುತ್ತದೆ. ಇದು ದೀರ್ಘಕಾಲ ಬಾಳುವ ದೊಡ್ಡ ಗಾತ್ರದ ಮರವಾಗಿದೆ. ಇದರ ಎಲೆಗಳು ಹಚ್ಚಹಸಿರಾಗಿದ್ದು ಕಹಿಯಾಗಿರುತ್ತವೆ. ಹಳದಿ ಬಣ್ಣದ ಇದರ ಹಣ್ಣುಗಳು ಸಿಹಿ ಕಹಿಯಾದ ರುಚಿಯನ್ನು ಹೊಂದಿರುತ್ತವೆ. ದಟ್ಟವಾಗಿ ಬೆಳೆಯುವ ಈ ಮರ ತಂಪಾದ ನೆರಳನ್ನು ನೀಡುತ್ತದೆ.



ಬೇವಿನ ಮರದಿಂದ ನಮಗೆ ಅನೇಕ ಉಪಯೋಗಗಳಿವೆ. ಬೇವಿನ ಎಲೆಯ ರಸವನ್ನು ಜೇನಿನೊಂದಿಗೆ ಪ್ರತಿದಿನ ಸೇವಿಸಿದರೆ ರಕ್ತ ಶುದ್ಧಿಯಾಗುವುದು ಮತ್ತು ರೋಗ ನಿರೋಧಕ ಶಕ್ತಿ ಹೆಚ್ಚುವುದು. ಇದರ ತೊಗಟೆಯ ಚೂರ್ಣ ಮತ್ತು ಎಲೆಯ ರಸದ ಸೇವನೆಯಿಂದ ಮಧುಮೇಹ ಹಿಡಿತದಲ್ಲಿಡಬಹುದು. ಎಲೆಯ ರಸ, ಶುಂಠಿ ಹಾಗೂ ಕಾಳು ಮೆಣಸನ್ನು ಸೇರಿಸಿ ಕೊಟ್ಟರೆ ಮಲೇರಿಯಾ ಜ್ವರ

ಕಡಿಮೆಯಾಗುವುದು. ಇದರ ಕಷಾಯದಿಂದ ಬಾಯಿ ಮುಕ್ಕಳಿಸಿದರೆ ನಾಲಿಗೆ ಮತ್ತು ಬಾಯಿ ಹುಣ್ಣು ವಾಸಿಯಾಗುವುದು. ಬೇವಿನ ಎಣ್ಣೆ ಹಾಗೂ ಬೇವಿನ ಎಲೆಯ ರಸವನ್ನು ಅನೇಕ ಚರ್ಮರೋಗಗಳಿಗೆ ಮದ್ದಾಗಿ ಬಳಸುತ್ತಾರೆ. ಬೇವಿನ ಕಡ್ಡಿಯನ್ನು ಹಲ್ಲು ಉಜ್ಜಲು ಬಳಸುತ್ತಾರೆ. ಅದರಿಂದ ಹಲ್ಲು ಮತ್ತು ವಸಡುಗಳು ಗಟ್ಟಿಮುಟ್ಟಾಗಿರುತ್ತವೆ.











ಬೇವಿನ ಮರವು ವಾತಾವರಣವನ್ನು ಶುದ್ಧಗೊಳಿಸುತ್ತದೆ. ಗಾಳಿಯನ್ನು ತಂಪಾಗಿಸುತ್ತದೆ ಆರೋಗ್ಯಕರ ವಾತಾವರಣವನ್ನು ನೀಡುತ್ತದೆ. ಇದರ ಬೀಜದಿಂದ ಎಣ್ಣೆ ತೆಗೆದ ನಂತರ ಬೇವಿನ ಹಿಂಡಿಯನ್ನು ತಯಾರಿಸುತ್ತಾರೆ. ಇದು ಸಸ್ಯಗಳಿಗೆ ಅತಿ ಉತ್ತಮವಾದ ಗೊಬ್ಬರವಾಗಿದೆ. ಇದು ಮಣ್ಣನ್ನು ಹಾಳು ಮಾಡದೆ ಕ್ರಿಮಿನಾಶಕದಂತೆ ವರ್ತಿಸಿ, ಬೇರಿಗೆ ಗೆದ್ದಲು ತಗುಲದಂತೆ ಮಾಡುತ್ತದೆ. ಒಕ್ಕಲಿಗನಿಗೆ ಅತ್ಯಂತ ಉಪಯುಕ್ತ ಗೊಬ್ಬರವಾಗಿದೆ.

ನಾವು ಬೇವಿನ ಮರಗಳನ್ನು ಹೆಚ್ಚಾಗಿ ಬೆಳೆಸಿ ಅವುಗಳನ್ನು ಕಾಪಾಡಬೇಕು. ಬೇವಿನ ಮರ ನಮ್ಮ ಆರೋಗ್ಯಕ್ಕೆ ಮತ್ತು ಪ್ರಕೃತಿಗೆ ವರದಾನವಾಗಿದೆ.

## ಶಬ್ದಾರ್ಥ :

| | |
|---|---|
| ದೀರ್ಘ – ಬಹಳ | ಮಧುಮೇಹ – ಸಕ್ಕರೆ ಕಾಯಿಲೆ |
| ಶುದ್ಧ – ಸ್ವಚ್ಛ | ಒಕ್ಕಲಿಗ– ರೈತ |

## ಮಾತನಾಡೋಣ ಬನ್ನಿ.

೧) ನಿಮಗೆ ಗೊತ್ತಿರುವ ಔಷಧಿ ವನಸ್ಪತಿಗಳ ಹೆಸರು ಹೇಳು.

೨) ನಿಮ್ಮ ಅಮ್ಮ ಅಥವಾ ಅಜ್ಜಿ ನಿಮಗೆ ಯಾವ ಯಾವ ಕಾಯಿಲೆಗಾಗಿ ಮನೆ ಮದ್ದನ್ನು ಕೊಡುತ್ತಾರೆ?

೩) ಉಪಯುಕ್ತವಾಗಿರುವ ಇನ್ನೊಂದು ಮರದ ಉಪಯೋಗವನ್ನು ಹೇಳು.

## ಯೋಗ್ಯ ಪರ್ಯಾಯ ಆರಿಸಿ ವಾಕ್ಯ ಪೂರ್ಣ ಮಾಡು.

೧) ಬೇವಿನ ಮರ .......................... ಕಂಡುಬರುವ ಮರವಾಗಿದೆ.

ಅ) ಅಲ್ಲಲ್ಲಿ ಬ) ಕೆಲವೆಡೆ ಕ) ಎಲ್ಲೆಡೆ ಡ) ವಿರಳವಾಗಿ

೨) ಬೇವಿನ ಮರ .......................... ನೆರಳನ್ನು ನೀಡುತ್ತದೆ.

ಅ) ದಟ್ಟವಾದ ಬ) ತಂಪಾದ ಕ) ವಿರಳವಾದ ಡ) ಉದ್ದವಾದ

೩) ಬೇವಿನ ಎಲೆಯ ರಸದಿಂದ .......................... ಜ್ವರ ವಾಸಿಯಾಗುವುದು.

ಅ) ಡೆಂಗ್ಯೂ ಬ) ಚಿಕುನ್ ಗುನ್ಯಾ ಕ) ಮೆದುಳು ಡ) ಮಲೇರಿಯಾ

## ಪ್ರಶ್ನೆಗಳಿಗೆ ಉತ್ತರಿಸು.

೧) ಬೇವಿನ ಮರದ ಲಾಭಗಳು ಯಾವುವು?

..........................................................................................

..........................................................................................

೨) ಬೇವಿನ ಮರದ ವರ್ಣನೆ ಮಾಡಿರಿ.

..........................................................................................

..........................................................................................

೩) ಬೇವಿನ ಮರ ಒಕ್ಕಲಿಗರಿಗೆ ಹೇಗೆ ಉಪಯುಕ್ತವಾಗಿದೆ?

..........................................................................................

..........................................................................................

೪) ಚರ್ಮರೋಗಕ್ಕಾಗಿ ಏನನ್ನು ಬಳಸುತ್ತಾರೆ?

..........................................................................................

..........................................................................................

**ಸರಿ ಉತ್ತರದ ಪರ್ಯಾಯ ಕ್ರಮಾಂಕಕ್ಕೆ ಗೋಲು ◯ ಹಾಕು.**

ಅ) 'ಮಧುಮೇಹ' ದ ಸಮಾನ ಪದ ಯಾವುದು?

೧) ಕಾಲರಾ ೨) ಕಾಮಾಲೆ ೩) ಸಕ್ಕರೆ ಕಾಯಿಲೆ ೪) ವಿಷಮ ಜ್ವರ

ಬ) ಜ್ಞಾನೇಂದ್ರಿಯವಲ್ಲದ ಪರ್ಯಾಯವನ್ನು ಹುಡುಕು.

೧) ಕಣ್ಣು ೨) ಕಿವಿ ೩) ತ್ವಚೆ ೪)ತಲೆ

**ಬೇವಿನ ಮರದ ಉಪಯೋಗವನ್ನು ನಿನ್ನ ಮಾತುಗಳಲ್ಲಿ ಹೇಳು ಮತ್ತು ಯೋಗ್ಯ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ೬ ರಿಂದ ೮ ವಾಕ್ಯಗಳನ್ನು ಬರೆ.**

.................................................................................................

.................................................................................................

.................................................................................................

.................................................................................................

.................................................................................................

.................................................................................................

.................................................................................................

.................................................................................................

**ಕೆಳಗೆ ಕೊಟ್ಟ ಔಷಧಿ ವನಸ್ಪತಿಗಳ ಚಿತ್ರಗಳನ್ನು ನೋಡಿ ಅವುಗಳ ಹೆಸರು ಹಾಗೂ ಉಪಯೋಗ ಬರೆ.**









| | | | | |
|---|---|---|---|---|
| ಹೆಸರು | | | | |
| ಉಪಯೋಗ | | | | |



**ನಿನಗೆ ಗೊತ್ತಿರುವ ಯಾವುದಾದರೂ ಒಂದು ಮರದ ಚಿತ್ರ ತೆಗೆದು ಅದರ ವರ್ಣನೆಯನ್ನು ಮಾಡುತ್ತ ಒಂದು ಪರಿಚ್ಛೇದ ತಯಾರಿಸಿ ಅದಕ್ಕೆ ಯೋಗ್ಯ ತಲೆಬರಹ ಕೊಡು.**



**ಕೆಳಗಿನ ಗದ್ಯಭಾಗವನ್ನು ಓದಿ, ಅನುಲೇಖನ ಮಾಡಿ ಅದಕ್ಕೆ ಯೋಗ್ಯ ತಲೆಬರಹ ಕೊಡಿರಿ.**

ಚೈತ್ರ ಮಾಸದ ಆರಂಭದೊಂದಿಗೆ ವಸಂತದ ಆಗಮವಾಗುತ್ತದೆ. ಗಿಡ -ಮರಗಳೆಲ್ಲ ಹೊಸ ಚಿಗುರಿನಿಂದ ಕಂಗೊಳಿಸುತ್ತವೆ. ಈ ಹೊಸ ಉತ್ಸಾಹದಲ್ಲಿ ಬರುವ ಹಬ್ಬವೇ ಯುಗಾದಿ. ಹೊಸ ವರುಷ, ಹೊಸ ಹರುಷ ತರುವ ಈ ಹಬ್ಬದಲ್ಲಿ ಬೇವು-ಬೆಲ್ಲಕ್ಕೆ ಅತ್ಯಂತ ಮಹತ್ವವಿದೆ. ಬೇವು-ಬೆಲ್ಲ ತಿಂದು ಜೀವನದಲ್ಲಿ ಬರುವ ಸಿಹಿ-ಕಹಿ ಅನುಭವಗಳನ್ನು ಸಮಾನವಾಗಿ ಸ್ವೀಕರಿಸಬೇಕು.

## ❖ ಭಾಷೆ ತಿಳಿಯೋಣ ಬಾ:

- **ಅನೇಕ ಶಬ್ದಗಳಿಗೆ ಒಂದು ಶಬ್ದ ಜೋಡಿಸಿ ಬರೆ.**

| 'ಅ' | ಉತ್ತರ | 'ಬ' |
|---|---|---|
| ೧) ಹಗಲಿನಲ್ಲಿ ಜಗತ್ತಿಗೆ ಬೆಳಕು ಕೊಡುವವನು | ...................... | ಅ) ಹೂವಾಡಗಿತ್ತಿ |
| ೨) ರೋಗಿಗೆ ಚಿಕಿತ್ಸೆ ಕೊಡುವವನು | ...................... | ಬ) ನಿರ್ಗಮನ |
| ೩) ಹೂಗಳನ್ನು ಮಾರುವವಳು | ...................... | ಕ) ಸೂರ್ಯ |
| ೪) ಹೊರಗೆ ಹೋಗುವ ದಾರಿ | ...................... | ಡ) ವೈದ್ಯ |

- **ಕೊಟ್ಟ ಶಬ್ದಗಳ ವಿರುದ್ಧಾರ್ಥಕ ಶಬ್ದವನ್ನು ಪಾಠದಿಂದ ಹುಡುಕಿ ಬರೆ.**

೧) ಹಾನಿ × ....................    ೨) ನಿರುಪಯುಕ್ತ × ....................

೩) ಕಹಿ × ....................    ೪) ಅಶುದ್ಧ × ....................

## ಸರ್ವನಾಮ

**ನಾಮಪದಗಳ ಬದಲಾಗಿ ಉಪಯೋಗ ಮಾಡುವ ಪದಗಳಿಗೆ 'ಸರ್ವನಾಮ' ಎನ್ನುವರು.**

ಉದಾ: ಅವನು, ಅವಳು, ಅದು, ಅವರು, ನಾನು, ನಾವು, ನೀನು, ನೀವು, ತಾವು, ತಾನು, ಯಾವನು, ಯಾವುದು, ಯಾವಳು ಇತ್ಯಾದಿ.

### ಸರ್ವನಾಮದ ಪ್ರಕಾರಗಳು

- ಪುರುಷಾರ್ಥಕ ಸರ್ವನಾಮ
- ಪ್ರಶ್ನಾರ್ಥಕ ಸರ್ವನಾಮ
- ಆತ್ಮಾರ್ಥಕ ಸರ್ವನಾಮ

೧) **ಪುರುಷಾರ್ಥಕ ಸರ್ವನಾಮ :** ಹೆಸರಿನ ಬದಲಾಗಿ ಉಪಯೋಗಿಸುವ ಪದಗಳಿಗೆ 'ಪುರುಷಾರ್ಥಕ ಸರ್ವನಾಮ' ಎನ್ನುವರು. ಉದಾ: ನಾನು, ನಾವು, ನೀನು, ನೀವು, ಅವನು, ಅವಳು, ಅದು, ಅವರು ಇತ್ಯಾದಿ.

ಉದಾಹರಣೆಗಳು:

೧. **ನಾನು** ಇಂದು ಶಾಲೆಗೆ ಹೋಗುತ್ತೇನೆ.

೨. **ನಾವು** ಆಟ ಆಡುತ್ತೇವೆ.

೩. **ನೀನು** ತುಂಬಾ ಜಾಣೆ.

೪. **ನೀವು** ಕೊಟ್ಟ ಭತ್ತವನ್ನು ನಾವು ಹೊಲದಲ್ಲಿ ಬಿತ್ತಿದೆವು.

೫. **ಅವನು** ಪುಸ್ತಕ ಓದುತ್ತಾನೆ.

೬. **ಅವಳು** ಮರುದಿನ ಮುಂಜಾನೆ ಹೊಸಪೇಟೆಗೆ ಬಂದಳು.

೭. **ಅದು** ಒಂದು ಸುಂದರ ಹೂವು.

೮. **ಅವರು** ನಮ್ಮ ಶಿಕ್ಷಕರು.

**ಕೆಳಗಿನ ವಾಕ್ಯಗಳಲ್ಲಿ ಇರುವ ಪುರುಷಾರ್ಥಕ ಸರ್ವನಾಮವನ್ನು ಗುರುತಿಸಿ ಚೌಕಟ್ಟಿನಲ್ಲಿ ಬರೆ.**

೧. ನಾನು ಪುಸ್ತಕ ಓದುತ್ತಿದ್ದೇನೆ. ..............

೨. ಅವನು ಚೆನ್ನಾಗಿ ಓಡುತ್ತಾನೆ. ..............

೩. ನಾವು ಶಾಲೆಗೆ ಹೋಗುತ್ತೇವೆ. ..............

# ೬. ಜಂಭದ ಮಾವಿನ ಹಣ್ಣು

(ಮಾವಿನ ಮರದಲ್ಲಿ ಒಂದು ಸುಂದರವಾದ ಹಣ್ಣು ತೂಗಾಡುತ್ತಿತ್ತು. ತಾನೇ ಅತಿ ಸುಂದರವೆಂದು ಹೇಳುತ್ತಿತ್ತು. ಗರ್ವದಿಂದ ಪಕ್ಕದಲ್ಲಿರುವ ಮಾಗಿದ ಎಲೆಯೊಂದಿಗೆ ಮಾತಾಡಿತು.)

**ಮಾವಿನ ಹಣ್ಣು:** ಏಯ್! ಮುದುಡಿದ ಎಲೆಯೇ, ನಿನ್ನ ಬಾಡಿದ ಮುಖ ನೋಡಲಾಗದು. ನನ್ನನ್ನು ನೋಡು, ದಷ್ಟಪುಷ್ಟ, ದುಂಡಾಗಿ, ರಸಭರಿತವಾಗಿದ್ದೇನೆ. ನನ್ನ ಬಣ್ಣ ನೋಡು ಹೇಗಿದೆ? ಹಳದಿ ಮಿಶ್ರಿತ ಕೆಂಪು.



**ಮಾಗಿದ ಎಲೆ :** ಹುಂ! ಹೇಳು ಹೇಳು, ನಿನ್ನ ಈಗಿರುವ ರೂಪಕ್ಕೆ ನಾನೇ ಕಾರಣ. ನಾನು ಆಹಾರ ತಯಾರಿಸಿ ಕೊಟ್ಟಿದ್ದೇನೆ. ಅದರಿಂದಲೇ ನಿನ್ನ ಈ ಸೌಂದರ್ಯ, ಬಿಂಕದಿಂದ ಮೆರೆಯಬೇಡ.

**ಮಾವಿನ ಹಣ್ಣು:** (ಬದಿಗೆ ನೋಡುತ್ತಾ) ಎಲವೋ ಟೊಂಗೆ. ನನ್ನನ್ನೇಕೆ ನೋಡುತ್ತಿರುವೆ? ನನ್ನ ಬಗ್ಗೆ ಏನು ತಿಳಿದುಕೊಂಡಿರುವೆ?



**ಟೊಂಗೆ :** (ಗಹಗಹಿಸಿ ನಗುತ್ತಾ) ಅಯ್ಯೋ! ಮಂಕೇ, ನನ್ನಿಂದಲೇ ನೀನು ಅಲ್ಲಿ ಖುಷಿಯಿಂದ ನೇತಾಡುತ್ತಿರುವೆ. ನಾನು ನೀಡಿದ ಆಹಾರದಿಂದಲೇ ನಿನ್ನ ಈ ಸುಂದರ ರೂಪ, ಹೆಚ್ಚು ಮೆರೆಯಬೇಡ ಬಾಯಿಮುಚ್ಚು.



**ಮಾವಿನ ಹಣ್ಣು:** (ಕತ್ತು ತಿರುಗಿಸುತ್ತ ಸೊಕ್ಕಿನಿಂದ ಕೆಳಗೆ ನೋಡಿ) ಏ! ಯಾರು ನೀನು? ನನ್ನನ್ನು ನೋಡಲಿಲ್ಲವೆ? ನನ್ನ ಅಂದ-ಚಂದ ಕಾಣುವದಿಲ್ಲವೇ?

**ಕಾಂಡ :** ಏ ಜಂಭದ ಹಣ್ಣೆ, ಎಷ್ಟೊಂದು ಕೊಚ್ಚಿಕೊಳ್ಳುತ್ತಿರುವೆ? ನಾನೂ ನೋಡುತ್ತಲೇ ಇದ್ದೇನೆ. ಏನೆಂದು ಹೇಳಲಿ? ಈ ಸಂಪೂರ್ಣ ಗಿಡಕ್ಕೆ ನಾನೇ ಆಧಾರ. ಇದನ್ನು ಎಂದಿಗೂ ಮರೆಯಬೇಡ. ಇನ್ನೆಂದೂ ಈ ರೀತಿ ಮಾತನ್ನು ಆಡಬೇಡ. ಇದೇ ನಿನಗೆ ಒಳಿತು.

**ಮಾವಿನ ಹಣ್ಣು:** (ಕತ್ತು ಕೊಂಕಿಸುತ್ತ ಕೆಳಗೆ ನೋಡಿ) ಏಯ್, ಮಣ್ಣಿನಲ್ಲಿ ಹುದುಗಿರುವ ನೀನಾರು?



**ಬೇರು :** ಈ ಮರಕ್ಕೆ ನಾನೇ ತಾಯಿ. ನಾನು ಮಣ್ಣಿನಲ್ಲಿರುವ ನೀರು ಹಾಗೂ ಸತ್ವಗಳನ್ನು ಹೀರುತ್ತೇನೆ. ಅದನ್ನು ಮರದ ಪ್ರತಿಯೊಂದು ಭಾಗಕ್ಕೆ ಒದಗಿಸುತ್ತೇನೆ. ಆದ್ದರಿಂದಲೇ ನಿನಗೆ ಈ ಸುಂದರ ರೂಪ. ನನ್ನನ್ನೇ ಯಾರೆಂದು ಕೇಳುವೆಯಾ? ತಾಳು, ನಿನಗೆ ತಕ್ಕ ಪಾಠ ಕಲಿಸುವೆ.

**ಮಾವಿನ ಹಣ್ಣು :** ನಿನ್ನಿಂದ ನಾನು ಪಾಠ ಕಲಿಯುವುದೇ? ಹೋಗು ಹೋಗು. ನಿನ್ನಂಥವರನ್ನು ಬಹಳ ನೋಡಿರುವೆ.

**ಬೇರು :** (ಸಿಟ್ಟಿನಿಂದ) ನಿಲ್ಲು ನಿಲ್ಲು ನಾನು ಈ ಕ್ಷಣದಿಂದಲೇ ನನ್ನ ಕೆಲಸ ನಿಲ್ಲಿಸುವೆ. (ತಮ್ಮಲ್ಲಿ ಆದ ಬದಲಾವಣೆ ನೋಡಿಕೊಳ್ಳುತ್ತವೆ. ಎಲೆ, ಟೊಂಗೆ, ಕಾಂಡ ಏಕಕಾಲಕ್ಕೆ ಅಶಕ್ತವಾಗುತ್ತವೆ.)

**ಎಲೆ, ಟೊಂಗೆ, ಕಾಂಡ :** ( ಗಾಬರಿಯಿಂದ ಎಲ್ಲರೂ ಕೂಡಿ ಒಟ್ಟಿಗೆ ಜೋರಾಗಿ ) ಅಯ್ಯೋ ಕಾಪಾಡಿರಿ...!

ಕಾಪಾಡಿರಿ...! ಏನಾಗುತ್ತಿದೆ ನಮಗೆ? ಕಾಪಾಡಿರಿ...! ಕಾಪಾಡಿರಿ...!



**ಮಾವಿನಹಣ್ಣು:** (ಗಾಬರಿಯಿಂದ) ಅಯ್ಯೋ! ನನಗೂ ಸಹ ಏನೋ ಆಗುತ್ತಿದೆ..ಯಾರಾದರೂ ಕಾಪಾಡಿ...! ಕಾಪಾಡಿ..! ನಾನು ಕೆಳಗೆ ಬೀಳುತ್ತಿರುವೆ. (ಎನ್ನುವಷ್ಟರಲ್ಲಿಯೇ ಮಾವಿನ ಹಣ್ಣು ದೊಪ್ಪನೆ ಕೆಳಗೆ ಬೀಳುವುದು.)

**ಬೇರು :** ಹೇ ಜಂಭದ ಮಾವಿನ ಹಣ್ಣೆ! ಇಲ್ಲಿಯವರೆಗೆ ನಾನೇ ಮೇಲೆಂದು ನಮ್ಮ ಮಹತ್ವ ತಿಳಿಯದೆ ಮರೆಯುತ್ತಿದ್ದೆಯಲ್ಲ? ಈಗ ನೋಡು ಹೇಗೆ ಮಣ್ಣುಪಾಲಾದೆ? (ಎಲೆ, ಟೊಂಗೆ, ಕಾಂಡಗಳನ್ನು ಉದ್ದೇಶಿಸಿ) ಬನ್ನಿ, ಬನ್ನಿ ಗೆಳೆಯರೇ, ಮತ್ತೆ ಮರವನ್ನು ಮೊದಲಿನಂತೆ ನಳನಳಿಸೋಣ.

## ಶಬ್ದಾರ್ಥ:

| | |
|---|---|
| ಜಂಭ- ಗರ್ವ | ಬಾಡಿದ -ಮುದುಡಿದ |
| ದಷ್ಟಪುಷ್ಟ- ಗಟ್ಟಿಮುಟ್ಟಾದ | ಮಿಶ್ರಿತ -ಕೂಡಿದ |
| ಬಿಂಕ- ಒಯ್ಯಾರ, ಬೆಡಗು | ಅಶಕ್ತ - ಬಲಹೀನ |
| ನಳನಳಿಸು - ಸುಂದರವಾಗು, ಕಾಂತಿಯುಕ್ತವಾಗು | |

## ಮಾತನಾಡೋಣ ಬನ್ನಿ.

೧. ಮಾವಿನ ಹಣ್ಣಿಗೆ ಸಿಕ್ಕ ಶಿಕ್ಷೆಯ ಬಗ್ಗೆ ನಿಮ್ಮ ವಿಚಾರವೇನು ?

೨. ಬೇರು, ಮಾವಿನ ಹಣ್ಣಿಗೆ ಯಾವ ರೀತಿ ಪಾಠ ಕಲಿಸಿತು?

## ಯೋಚಿಸಿ ಬರೆ.

೧) ಮಾವಿನ ಹಣ್ಣು ಮೊದಲು ಯಾರೊಂದಿಗೆ ಮಾತನಾಡಿತು?

..................................................................................................

೨) ಮಾವಿನ ಹಣ್ಣು ಏನೆಂದು ಜಂಬ ಕೊಚ್ಚಿಕೊಂಡಿತು?

..................................................................................................

೩) ಮರಕ್ಕೆ ನೀರು ಹಾಗೂ ಸತ್ವಗಳನ್ನು ಯಾರು ಕಳಿಸುವರು?

..................................................................................................

೪) ''ಮರಕ್ಕೆ ನಾನೇ ಆಧಾರ'' ಎಂದು ಯಾರು ಹೇಳಿದರು?

..................................................................................................

## ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆ.

೧) ಹಳದಿ, ಹಸಿರು, ರೂಪ, ಕಂದು :

೨) ಕತ್ತು, ತಲೆ, ಕಾಲು, ಕೆಲಸ :

೩) ತಾಯಿ, ಕಹಿ, ಸಿಹಿ, ಹುಳಿ :

೪) ಮರ, ಮಣ್ಣು, ಗಿಡ, ಬಳ್ಳಿ :

## ವನಸ್ಪತಿಯ ಭಾಗಗಳನ್ನು ಹೆಸರಿಸು



## ನಿನಗೆ ಇಷ್ಟವಾದ ಹಣ್ಣಿನ ವರ್ಣನೆಯನ್ನು ಹೇಳು ಮತ್ತು ಆರರಿಂದ ಎಂಟು ವಾಕ್ಯಗಳಲ್ಲಿ ಬರೆ.

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

## ಮರ ಹಾಗೂ ಮರದ ಭಾಗಗಳ ಕುರಿತು ಗೆಳೆಯ/ಗೆಳತಿಯೊಂದಿಗೆ ಒಂದು ಸಂವಾದ ತಯಾರಿಸಿ ವರ್ಗದಲ್ಲಿ ಸಾದರ ಪಡಿಸಿರಿ.



## ಭಾಷೆ ತಿಳಿಯೋಣ ಬಾ.

● **ವಾಕ್ಯ ಸರಿಪಡಿಸಿ ಬರೆ.**

೧) ಪಾಲಾದೆ ಈಗ ಮಣ್ಣು.

..........................................................................................

೨) ಮಹತ್ವ ಹೋದೆ ತಿಳಿಯದೆ.

..........................................................................................

೩) ನಳನಳಿಸೋಣ ಮರವನ್ನು ಮೊದಲಿನಂತೆ.

..........................................................................................

★ ಉದಾಹರಣೆಯಲ್ಲಿ ಕೊಟ್ಟಂತೆ ಶಬ್ದಗಳಲ್ಲಿನ ಸ್ವರ -ವ್ಯಂಜನಗಳನ್ನು ವಿಂಗಡಿಸಿ ಬರೆ.

ಉದಾ : ಮಾವಿನ = ಮ್ +ಆ +ವ್ +ಇ +ನ್ +ಅ

| | | | |
|---|---|---|---|
| ೧) | ಸುಂದರವಾದ | = | |
| ೨) | ನೋಡಲಾಗದು | = | |
| ೩) | ನೀನಾರು | = | |
| ೪) | ಕಾಪಾಡಿರಿ | = | |

**೨) ಪ್ರಶ್ನಾರ್ಥಕ ಸರ್ವನಾಮ:** ಪ್ರಶ್ನೆಗಳನ್ನು ಕೇಳಲು ಬಳಸುವ ಸರ್ವನಾಮಗಳಿಗೆ 'ಪ್ರಶ್ನಾರ್ಥಕ ಸರ್ವನಾಮ' ಎನ್ನುತ್ತಾರೆ. ಉದಾ: ಯಾರು, ಯಾವನು, ಯಾವಳು, ಯಾವುದು, ಎಲ್ಲಿ, ಹೇಗೆ ಇತ್ಯಾದಿ.

ಉದಾಹರಣೆಗಳು.

೧. **ಯಾರು** ಬಾಗಿಲು ತಟ್ಟಿದರು?

೨. **ಯಾವುದು** ನಿನ್ನ ಮನೆ?

೩. ನೀನು **ಎಲ್ಲಿಗೆ** ಹೋಗುತ್ತಿರುವೆ?

೪. ನೀನು ಈ ಚಿತ್ರವನ್ನು **ಹೇಗೆ** ತೆಗೆದಿರುವೆ?

೫. ನಿನಗೆ ಕಥೆ **ಯಾರು** ಹೇಳಿದರು?

೬. ನಿನಗೆ ಇಷ್ಟವಾದ ಹಣ್ಣು **ಯಾವುದು**?

೭. ನಿನ್ನ ಮನೆ **ಎಲ್ಲಿ** ಇದೆ?

೮. ನೀನು ಶಾಲೆಗೆ **ಹೇಗೆ** ಬರುವೆ?

**ಯೋಗ್ಯ ಪ್ರಶ್ನಾರ್ಥಕ ಸರ್ವನಾಮವನ್ನು ತುಂಬು.**

(ಯಾರು, ಎಲ್ಲಿ, ಯಾವ, ಯಾರ, ಹೇಗೆ )

೧. ನೀನು ಊರಿಗೆ .................. ಬರುವೆ?

೨. .................. ನನ್ನ ಪುಸ್ತಕ ತೆಗೆದುಕೊಂಡರು?

೩.  ಇದು .................. ಮನೆ?

೪.  .................. ಹೂವು ನಿನಗೆ ಇಷ್ಟ?

೫.  .................. ಆಟ ಆಡುತ್ತಿದ್ದಾಳೆ?

## ೩) ಆತ್ಮಾರ್ಥಕ ಸರ್ವನಾಮ

ತನ್ನ ಅಥವಾ ಸ್ವಂತದ ಕುರಿತು ತಿಳಿಸುವ ಪದಗಳಿಗೆ ''ಆತ್ಮಾರ್ಥಕ ಸರ್ವನಾಮ'' ಎನ್ನುವರು.

ಉದಾಹರಣೆ : ತಾನು, ತಾವು, ತನ್ನ ಇತ್ಯಾದಿ.

ಉದಾಹರಣೆಗಳು

೧.  **ತಾನು** ಮಾಡಿದ ಕೆಲಸವನ್ನು **ತಾನೇ** ಮೆಚ್ಚಿಕೊಂಡನು.

೨.  ರಾಮನು **ತನ್ನ** ಪುಸ್ತಕವನ್ನು ಹುಡುಕುತ್ತಿದ್ದಾನೆ.

೩.  ಗುರುಗಳು **ತಾವು** ಬರೆದ ಕಥೆಯನ್ನು ಹೇಳಿದರು.

೪.  ಅವಳು **ತನ್ನ** ಸ್ನೇಹಿತೆಗೆ ಸಹಾಯ ಮಾಡಿದಳು.

೫.  ಅವು **ತಮ್ಮಲ್ಲಿ** ಆದ ಬದಲಾವಣೆ ನೋಡಿಕೊಳ್ಳುತ್ತವೆ.

- **ಕೆಳಗಿನ ವಾಕ್ಯಗಳಲ್ಲಿ ಯೋಗ್ಯ ಆತ್ಮಾರ್ಥಕ ಸರ್ವನಾಮವನ್ನು ಬಳಸಿ ವಾಕ್ಯ ಪೂರ್ಣ ಮಾಡು.**

(ತಮ್ಮ, ತನಗೆ, ತಾವು )

೧.  ಅವರು ಮರುದಿನ ................ ಹಳ್ಳಿಗಳಿಗೆ ತೆರಳಿದರು.

೨.  ರಮೇಶ ................ ಬಹುಮಾನ ಸಿಕ್ಕಿತು ಎಂದು ಸಂತೋಷಪಟ್ಟನು.

೩.  ಗುರುಗಳು ................ ಹೇಳಿದಂತೆ ಮಾಡಿರಿ ಎಂದರು.

- **ಕೊಟ್ಟ ವಾಕ್ಯಗಳಲ್ಲಿ ಸರ್ವನಾಮದ ಪ್ರಕಾರ ಗುರುತಿಸಿ ಚೌಕಟ್ಟಿನಲ್ಲಿ ಬರೆ.**

| | |
|---|---|
| ೧) ಮಾವಿನ ಹಣ್ಣು ತಾನೇ ಅತಿ ಸುಂದರವೆಂದು ಹೇಳುತ್ತಿತ್ತು. | |
| ೨) ಕುಂಬಾರಣ್ಣ ಏನು ಉಂಡಿದ್ದಾನೆ? | |
| ೩) ಅವರಿಗೆ ಮಾವನ ಮಾತುಗಳು ಸೋಜಿಗ ಎನಿಸಿದವು. | |
| ೪) ಎಲ್ಲರು ತಮ್ಮತಮ್ಮಲ್ಲಿ ಮಾತನಾಡಿಕೊಂಡರು. | |
| ೫) ಎಲವೋ ಟೊಂಗೆ ನನ್ನನ್ನು ಏಕೆ ನೋಡುತ್ತಿರುವೆ? | |
| ೬) ಇದು ದೀರ್ಘಕಾಲ ಬಾಳುವ ದೊಡ್ಡ ಗಾತ್ರದ ಮರವಾಗಿದೆ. | |

ಹಣ್ಣೆಲೆ ಉದುರುವಾಗ ಚಿಗುರೆಲೆ ನಗುತ್ತಿತ್ತು

# ೭. ಒಗ್ಗಟ್ಟು



ಸಣ್ಣವು ಸಣ್ಣವು ಜೇನಿನ ಹುಳುಗಳು ॥
ಎಲ್ಲವು ಒಂದೆಡೆ ಸೇರಿದವು ।
ಒಂದೆಡೆ ಸೇರಿದ ಜೇನಿನ ಹುಳುಗಳು ॥
ಮಧುವನು ಹುಟ್ಟಲಿ ತುಂಬಿದವು ।

ಸಣ್ಣವು ಸಣ್ಣವು ಮೋಡದ ಕಣಗಳು ॥
ಎಲ್ಲವು ತಾವೊಂದಾಗಿಹವು ।
ಆನೆಯ ತೆರದಲಿ ಮೋಡವು ತೇಲಿ ॥
ರಪರಪ ಘನಮಳೆ ಸುರಿಸಿದವು ।

ಸಣ್ಣವು ಸಣ್ಣವು ಬೆಂಕಿಯ ಕಿಡಿಗಳು ॥
ಎಲ್ಲವೂ ಒಂದೆಡೆ ಕೂಡಿದವು ।
ಒಂದೆಡೆ ಕೂಡಿದ ಬೆಂಕಿಯ ಕಿಡಿಗಳು ॥
ಉಕ್ಕನು ಕರಗಿಸಿ ಬಿಟ್ಟಿಹವು।

ಸಣ್ಣವರಾಗಿಹ ಮಕ್ಕಳೆ, ಮುಂದೆ ॥
ಎಲ್ಲರೂ ದೊಡ್ಡವರಾಗುವಿರಿ ।
ದೊಡ್ಡವರಾಗಿ ಒಗ್ಗಟ್ಟಾಗಿ ॥
ವಿಶ್ವವನೆಲ್ಲವ ಆಳುವಿರಿ ।

**– ಪಿ. ಎಸ್. ಕುಮಾರ**

## ಶಬ್ದಾರ್ಥ:

| | | |
|---|---|---|
| ಮಧು- ಜೇನುತುಪ್ಪ | ವಿಶ್ವ -ಜಗತ್ತು | ಘನ -ದಟ್ಟ |

## ಮಾತನಾಡೋಣ ಬನ್ನಿ.

೧) ನಿಮಗೆ ಗೊತ್ತಿರುವ ಕೀಟಕಗಳ ಹೆಸರುಗಳನ್ನು ಹೇಳಿರಿ.

೨) ಹೂವಿನ ಸುತ್ತಲೂ ಕೀಟಕಗಳು ಏಕೆ ಸುತ್ತುವವು?

೩) 'ಒಗ್ಗಟ್ಟಿನಲ್ಲಿ ಬಲವಿದೆ' ಈ ಗಾದೆ ಮಾತಿನ ಅರ್ಥ ನಿನ್ನ ಮಾತುಗಳಲ್ಲಿ ಹೇಳು.

## ಯೋಚಿಸಿ ಬರೆ.

೧) ಜೇನುಹುಳುಗಳು ಹುಟ್ಟಿನಲ್ಲಿ ಏನನ್ನು ತುಂಬಿದವು?

..........................................................................................

೨) ಮೋಡವು ಮಳೆಯನ್ನು ಹೇಗೆ ಸುರಿಸಿತು?

..........................................................................................

೩) ಮಕ್ಕಳು ದೊಡ್ಡವರಾಗಿ ಏನು ಮಾಡುವರು?

..........................................................................................

೪) ಒಗ್ಗಟ್ಟಿನಿಂದ ನಾವು ಏನನ್ನಾದರೂ ಸಾಧಿಸಬಹುದು ಎಂಬುದನ್ನು ನಿನ್ನ ಮಾತುಗಳಲ್ಲಿ ಹೇಳು ಮತ್ತು ಬರೆ.

..........................................................................................

..........................................................................................

..........................................................................................

## ಕೆಳಗೆ ಕೊಟ್ಟಿರುವ ಶಬ್ದಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಬರೆ.

೧) ಗೂಡು – ..................................................

೨) ಮಳೆ – ..................................................

೩) ಮಧು – ..................................................

೪) ಒಟ್ಟಿಗೆ – ..................................................

## ಕೆಳಗೆ ಕೊಟ್ಟಿರುವ ಅಕ್ಷರಗಳನ್ನು ಸರಿಪಡಿಸಿ ಅರ್ಥಪೂರ್ಣ ಶಬ್ದ ಬರೆ.

೧) ಕಿ ಯ ಬೆಂ ..............................

೨) ಡೆ ದೆ ಒಂ ..............................

೩) ಡ ಗೂ ನು ..............................

## ಕೆಳಗಿನ ಚಿತ್ರವನ್ನು ನೋಡಿ ಅಂಕಿಗಳಿಗೆ ಸಂಬಂಧಿಸಿದ ಅಕ್ಷರಗಳಿಂದ ಶಬ್ದ ತಯಾರಿಸಿ ಬರೆ.

ಉದಾ - ೫, ೪, ೬, ೧೧ – ಜೇನುನೊಣ

೧) ೮ , ೨ – ..............................

೨) ೭, ೧, ೯, ೧೨ – ..............................

೩) ೭, ೧೩ – ..............................




- ಈ ಕವಿತೆಯನ್ನು ಹಾವಭಾವದಿಂದ ರಾಗಬದ್ಧವಾಗಿ ಹಾಡಿರಿ.
- ಒಗ್ಗಟ್ಟನ್ನು ಬಿಂಬಿಸುವ ಬೇರೆ- ಬೇರೆ ಕವಿತೆಗಳನ್ನು ಸಂಗ್ರಹಿಸಿ ಹಾಡಿರಿ.

## ಕೆಳಗಿನ ಗದ್ಯಭಾಗವನ್ನು ಓದಿ, ಅನುಲೇಖನ ಮಾಡಿ ಅದಕ್ಕೆ ಯೋಗ್ಯ ತಲೆಬರಹ ಕೊಡು.

ಒಗ್ಗಟ್ಟೇ ಬಲ, ಒಡಕೆ ಕೆಡಕು ಇದು ನಮ್ಮ ಹಿರಿಯರ ಅನುಭವದ ಮಾತು. ನಾವು ಎಲ್ಲರೂ ಒಟ್ಟಾಗಿ, ಸಂತೋಷದಿಂದ ಬದುಕಿದರೆ ಜೀವನ ಸ್ವರ್ಗದಂತೆ ಅನಿಸುತ್ತದೆ. ಮನೆಯಲ್ಲೂ, ಶಾಲೆಯಲ್ಲೂ ಸ್ನೇಹಿತರ ಜೊತೆ ಸೇರಿ ಆಟವಾಡಿದರೆ ನಮ್ಮ ಸಂತೋಷ ಇನ್ನಷ್ಟು ಹೆಚ್ಚುತ್ತದೆ. ಒಬ್ಬರಿಗೊಬ್ಬರು ಸಹಾಯ ಮಾಡಿದರೆ ಸಮಸ್ಯೆಗಳು ಬೇಗ ಪರಿಹಾರವಾಗುತ್ತವೆ. ಜಗಳ ಮಾಡದೆ, ಪ್ರೀತಿಯಿಂದ ನಡೆದುಕೊಂಡರೆ ಎಲ್ಲರಿಗೂ ಹಿತ. ಆದ್ದರಿಂದ, ನಾವು ಯಾವಾಗಲೂ ''ಕೂಡಿ ಬಾಳುವ'' ಗುಣವನ್ನು ಬೆಳೆಸಿಕೊಳ್ಳಬೇಕು. ಜಗಳದಿಂದ ಏನಾದರು ಲಾಭವಿದೆಯೇ? ಖಂಡಿತ ಇಲ್ಲ. ಚರ್ಚೆಯಿಂದ ಎಲ್ಲ ಭಿನ್ನಾಭಿಪ್ರಾಯಗಳು ದೂರವಾಗುತ್ತವೆ. ಅದಕ್ಕಾಗಿಯೇ ತಿಳಿದವರು ಹೇಳುತ್ತಾರೆ ''ಕೂಡಿ ಬಾಳಿದರೆ ಸ್ವರ್ಗ ಸುಖ'', ಎಂದು.

## ಭಾಷೆ ತಿಳಿಯೋಣ ಬಾ:

**೧. ಸರಿ ಉತ್ತರದ ಪರ್ಯಾಯ ಕ್ರಮಾಂಕಕ್ಕೆ ಗೋಲು ◯ ಹಾಕು.**

'ಮಧು' ಇದರ ಸಮಾನ ಪದ ಯಾವುದು?

೧) ಜೇನು  ೨) ಮಾತು  ೩) ಮೆತ್ತಗೆ  ೪) ಹಾಲು

**೨. ಕೆಳಗಿನವುಗಳಲ್ಲಿ ಯಾವುದು ಸರಿಯಾದ ಜೋಡು ಶಬ್ದವಲ್ಲ?**

೧) ಅಕ್ಕ -ತಂಗಿ  ೨) ಉಡುಗೆ- ತೊಡುಗೆ  ೩) ಮನೆ -ಮಠ  ೪) ಸಣ್ಣ ಸಣ್ಣ

**೩. ಶುದ್ಧ ಪದವನ್ನು ಹುಡುಕಿ ಬರೆ.**

೧) ಚಕ್ರವರ್ತಿ  ೨) ಚಕರವರ್ತಿ  ೩) ಚೌಕವರ್ತಿ  ೪) ಚರ್ಕವರ್ತಿ

## ವಿಶೇಷಣ

ಯಾವುದೊಂದು ವಸ್ತು, ಪ್ರಾಣಿ, ಅಥವಾ ವ್ಯಕ್ತಿಗಳ ಗುಣ, ಬಣ್ಣ, ಗಾತ್ರ, ಸ್ವಭಾವ, ರೀತಿಗಳನ್ನು ವರ್ಣಿಸುವ ಪದಗಳಿಗೆ 'ವಿಶೇಷಣ' ಎನ್ನುವರು. ಯಾವ ಪದಗಳಿಗೆ ವರ್ಣನೆ ಮಾಡಲಾಗುತ್ತದೆಯೋ ಅವುಗಳಿಗೆ 'ವಿಶೇಷ್ಯ' ಎನ್ನವರು.

ಉದಾಹರಣೆ – ಒಳ್ಳೆಯ, ಕೆಂಪು, ಸುಂದರ, ಉತ್ತಮ, ಬಹಳ, ವಿಶಾಲ ಇತ್ಯಾದಿ.

ಉದಾಹರಣೆಗಾಗಿ ವಾಕ್ಯಗಳು –

೧. **ಚಿಕ್ಕ** ಬಾಲಕಿ ಆಡುತ್ತಿರುವಳು.

ಚಿಕ್ಕ ⟶ ವಿಶೇಷಣ

ಬಾಲಕಿ ⟶ ವಿಶೇಷ್ಯ

೨) ಇದು **ಸುಂದರ** ಹೂವು.

ಸುಂದರ ⟶ ವಿಶೇಷಣ

ಹೂವು ⟶ ವಿಶೇಷ್ಯ

- **ಕೆಳಗಿನ ವಾಕ್ಯಗಳಲ್ಲಿನ ವಿಶೇಷಣ, ವಿಶೇಷ್ಯಗಳನ್ನು ಗುರುತಿಸಿ.**

೧) ಇದು ಒಳ್ಳೆಯ ಪುಸ್ತಕ. ವಿಶೇಷಣ................ವಿಶೇಷ್ಯ................

೨) ಅದು ಭವ್ಯವಾದ ಕಟ್ಟಡ. ವಿಶೇಷಣ................ವಿಶೇಷ್ಯ................

೩) ಬಿಳಿ ಎತ್ತು ಓಡುತ್ತಿದೆ. ವಿಶೇಷಣ................ವಿಶೇಷ್ಯ................

೪) ಗೀತಾ ಹಾಡನ್ನು ಇಂಪಾಗಿ ಹಾಡುತ್ತಾಳೆ. ವಿಶೇಷಣ................ವಿಶೇಷ್ಯ................

೫) ಋಷಿಗಳು ಘೋರವಾದ ತಪಸ್ಸು ಮಾಡುತ್ತಿದ್ದಾರೆ. ವಿಶೇಷಣ................ವಿಶೇಷ್ಯ................

★ **ಕೆಳಗಿನ ಉದಾಹರಣೆಗಳಲ್ಲಿ ವಿಶೇಷಣಕ್ಕೆ ಅಡಿಗೆರೆ ಹಾಕು ಮತ್ತು ವಿಶೇಷ್ಯಕ್ಕೆ ಗೋಲು ಹಾಕು.**

೧) ಸಣ್ಣವು ಸಣ್ಣವು ಜೇನಿನ ಹುಳುಗಳು ।। ಎಲ್ಲವು ಒಂದೆಡೆ ಸೇರಿದವು ।

೨) ಆನೆಯ ತೆರದಲಿ ಮೋಡವು ತೇಲಿ ।। ರಪರಪ ಘನಮಳೆ ಸುರಿಸಿದವು ।

೩) ಸುಂದರವಾದ ಕಾಡನ್ನು ನೋಡುವ ಆಸೆ ನನಗೆ ಎಂದಿತು.

೪) ಹಳೆಯ ಲುಂಗಿಯನ್ನು ಈತ ಸುತ್ತಿಕೊಂಡನು. ಹರಿದ ಅಂಗಿಯನ್ನು ಮೇಲೆ ತೊಟ್ಟುಕೊಂಡನು

೫) ಪ್ರವಾಸಕ್ಕೆಂದು ಆಫ್ರಿಕಾಗೆ ಹೋದವನೊಬ್ಬ, ಬಣ್ಣ ಬಣ್ಣದ ಮಾತನಾಡುವ ಗಿಣಿಯನ್ನು ಹಿಡಿದನು.

★ **ಗುಂಪಿಗೆ ಸೇರದ ಶಬ್ದ ಗುರುತಿಸಿ ಬರೆ.**

| ಶಬ್ದಗಳು | ಉತ್ತರ |
|---|---|
| ಎತ್ತರ, ಉದ್ದ, ಆಕಾರ, ಅಗಲ | |
| ಸಿಹಿ, ಬೆಳೆ, ಕಹಿ, ಉಪ್ಪು | |
| ಇರುವೆ, ದೊಡ್ಡ, ಚಿಕ್ಕ, ಬಲಾಢ್ಯ | |
| ಕೆಂಪು, ಹಸಿರು, ನೀಲಿ, ಎಲೆ | |
| ಒಳ್ಳೆಯ, ಉತ್ತಮ, ಒರಟು, ಚಂದಿರ | |

ಕೂಡಿ ಬಾಳಿದರೆ ಸ್ವರ್ಗ ಸುಖ

# ೮. ಬದುಕಿನ ಆಟ

ಪ್ರವಾಸಕ್ಕೆಂದು ಆಫ್ರಿಕಾಗೆ ಹೋದವನೊಬ್ಬ, ಬಣ್ಣ ಬಣ್ಣದ ಮಾತನಾಡುವ ಗಿಣಿಯನ್ನು ಹಿಡಿದನು. ಅದನ್ನು ತೆಗೆದುಕೊಂಡು ಭಾರತಕ್ಕೆ ಬಂದನು. ಮಾತನಾಡುವ ಬಣ್ಣದ ಗಿಣಿಗೆ ಒಳ್ಳೆಯ ಕಾಳು, ಜೇನುತುಪ್ಪ ಕೊಟ್ಟು ಸುಂದರವಾದ ಪಂಜರದಲ್ಲಿಟ್ಟನು. ಅದಕ್ಕೆ ಕೇಳಿಸುವ ಹಾಗೆ ಒಳ್ಳೆಯ ಸಂಗೀತವನ್ನು ಏರ್ಪಡಿಸಿದನು.

ಎರಡು ವರ್ಷಗಳಾದ ಮೇಲೆ ಇದೇ ಪ್ರವಾಸಿ ಮತ್ತೊಮ್ಮೆ ಆಫ್ರಿಕಾಕ್ಕೆ ಹೊರಟನು. ''ಕಾಡಿನಲ್ಲಿರುವ ನಿನ್ನ ಬಳಗದವರಿಗೆ ಏನಾದರೂ ಹೇಳಬೇಕಾ? ಅಂತ ಗಿಣಿಯನ್ನು ಕೇಳಿದ.''



''ನನ್ನ ಪಂಜರದಲ್ಲಿ ನಾನು ಸುಖವಾಗಿ ಕಾಲ ಕಳೆಯುತ್ತಿದ್ದೇನೆ. ಅವರಿಗೆಲ್ಲಾ ನನ್ನ ಪ್ರೀತಿಯನ್ನು ಕಳುಹಿಸಿದ್ದೇನೆ ಅಂತ ಹೇಳು'', ಎಂದಿತು ಜಾಣ ಗಿಣಿ.

ಆಫ್ರಿಕಾವನ್ನು ತಲುಪಿದ ಪ್ರವಾಸಿಯು ಗಿಣಿಗಳ ಹಿಂಡಿಗೆ ಪಂಜರದ ಗಿಣಿ ಹೇಳಿದ ಮಾತನ್ನು ತಿಳಿಸಿದನು. ಒಂದು ಗಿಣಿ ಕಣ್ಣೀರು ಸುರಿಸುತ್ತಾ, ಹಿಂದೆ ಹಿಂದೆ ಸರಿಯುತ್ತಾ ಕೆಳಗೆ ಬಿದ್ದಿತು. 'ಪಾಪ! ಈ ಗಿಣಿ ನನ್ನ ಗಿಣಿಯ ಹತ್ತಿರದ ಸಂಬಂಧಿಯೇ ಇರಬೇಕು, ಅದ್ದರಿಂದಲೇ ಅದರ ನೆನಪಿನಲ್ಲಿ ಇದು ಸತ್ತೇ ಹೋಯಿತು' ಅಂದುಕೊಂಡನು ಪ್ರವಾಸಿ.

ಭಾರತಕ್ಕೆ ಹಿಂದಿರುಗಿ ಬಂದ ಪ್ರವಾಸಿ ಆಫ್ರಿಕಾದಲ್ಲಿ ನಡೆದಿದ್ದನ್ನು ಹೇಳಿದನು. ಪಂಜರದಲ್ಲಿದ್ದ ಬಣ್ಣದ ಗಿಣಿಯೂ ಕಣ್ಣೀರು ಸುರಿಸುತ್ತಾ, ಹಿಂದೆ ಹಿಂದೆ ಸರಿಯುತ್ತಾ ಕೆಳಗೆ ಬಿದ್ದಿತು, 'ತನ್ನ ಪ್ರಿಯ ಸಂಬಂಧಿ ಆಫ್ರಿಕದಲ್ಲಿ ಸತ್ತ ಸುದ್ದಿ ಕೇಳಿ ಈ ಗಿಣಿಯೂ ಸತ್ತು ಹೋಯಿತು' ಎಂದು ಪ್ರವಾಸಿ ಅಂದುಕೊಂಡನು.



ಪಂಜರವನ್ನು ತೆಗೆದನು ಸತ್ತ ಗಿಣಿಯನ್ನು ಎತ್ತಿದನು. ಅದನ್ನು ತೆಗೆದುಕೊಂಡು ಹೋಗಿ ಗೊಬ್ಬರದ ಗುಂಡಿಯಲ್ಲಿ ಎಸೆದನು. ತಕ್ಷಣ ಆ ಸಾಕಿದ ಗಿಣಿ ಕಣ್ಣು ಬಿಟ್ಟಿತು. ರೆಕ್ಕೆ ಬಡಿಯುತ್ತ ಪಕ್ಕದಲ್ಲಿದ್ದ ಮಾವಿನ ಮರದ ಮೇಲೆ ಕುಳಿತಿತು. ಪ್ರವಾಸಿ ಆಶ್ಚರ್ಯದಿಂದ ಕೇಳಿದನು, ''ನೀನು ಸತ್ತಿಲ್ಲವೆ! ನೀನು ಏಕೆ ಹೀಗೆ ಮಾಡಿದೆ?

''ಯಾಕೆಂದರೆ, ಆಫ್ರಿಕಾದ ಕಾಡಿನಲ್ಲಿರುವ ನನ್ನ ಸೋದರ ನನಗೊಂದು ಮುಖ್ಯ ಸಂದೇಶವನ್ನು ಕಳುಹಿಸಿದ್ದಾನೆ.''

'ಆ ಸಂದೇಶ ಏನು?' ಎಂದು ಕೇಳಿದನು ಪ್ರವಾಸಿ.

''ಈ ಪ್ರಪಂಚದ ತೊಂದರೆಗಳಿಂದ ತಪ್ಪಿಸಿಕೊಳ್ಳಬೇಕು, ಅದಕ್ಕೆ ಹೇಗಾದರೂ ಮಾಡಿ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕು. ಸ್ವಾತಂತ್ರ್ಯ ಇಲ್ಲದ ಬದುಕು ಇದ್ದರೂ ಸತ್ತಂತೆ'' ಎಂದನು.

## ಶಬ್ದಾರ್ಥ:

| ಪ್ರವಾಸ - ಪ್ರಯಾಣ | ಕಾಡು - ಅರಣ್ಯ | ಸುದ್ದಿ - ವಾರ್ತೆ |
|---|---|---|

## ಮಾತನಾಡೋಣ ಬನ್ನಿ.

೧) ನೀನು ಯಾವುದಾದರೂ ಪ್ರವಾಸಿ ತಾಣಕ್ಕೆ ಹೋಗಿದ್ದೀಯಾ?

೨) ನೀನು ಪ್ರವಾಸಕ್ಕೆ ಹೋಗಿರುವ ಸ್ಥಳಗಳ ಹೆಸರುಗಳನ್ನು ಹೇಳು.

೩) ಪ್ರವಾಸಕ್ಕೆ ಹೋದಾಗ ಯಾವ ಪ್ರಾಣಿ ಪಕ್ಷಿಗಳನ್ನು ನೋಡಿರುವೆ?

## ಯೋಚಿಸಿ ಬರೆ.

- **ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಲೇಖನ ಪುಸ್ತಕದಲ್ಲಿ ಬರೆ.**

೧) ಪ್ರವಾಸಿಗನು ಪ್ರವಾಸಕ್ಕೆಂದು ಎಲ್ಲಿಗೆ ಹೋಗಿದ್ದನು?

೨) ಪ್ರವಾಸಿ ಆಫ್ರಿಕಾದಿಂದ ಏನನ್ನು ತೆಗೆದುಕೊಂಡು ಬಂದನು?

೩) ಪಂಜರದಲ್ಲಿದ್ದ ಪಕ್ಷಿ ಕಾಡಿನಲ್ಲಿರುವ ತನ್ನ ಬಳಗಕ್ಕೆ ಏನನ್ನು ಹೇಳಿ ಕಳುಹಿಸಿತು?

೪) ಸುದ್ದಿ ಕೇಳಿದ ಆಫ್ರಿಕಾದ ಪಕ್ಷಿಯು ಏನು ಮಾಡಿತು?

೫) ಪಂಜರದಲ್ಲಿ ಸತ್ತ ಗಿಣಿಯನ್ನು ಪ್ರವಾಸಿಗನು ಏನು ಮಾಡಿದನು?

೬) ಪಂಜರದ ಗಿಣಿಯು ಸತ್ತ ಹಾಗೆ ಏಕೆ ನಟಿಸಿತು?

## ಬಿಟ್ಟ ಸ್ಥಳಗಳನ್ನು ತುಂಬಿರಿ.

೧) ಕಾಡಿನಲ್ಲಿರುವ ನಿನ್ನ................ ಏನಾದರೂ ಹೇಳಬೇಕಾ?

೨) ಪಾಪ! ಈ ಗಿಣಿ ನನ್ನ ಗಿಣಿಯ........... ಸಂಬಂಧಿಯೇ ಇರಬೇಕು.

೩) ಒಂದು ಗಿಣಿ ಕಣ್ಣೀರು ಸುರಿಸುತ್ತಾ, ............. ಬಿದ್ದಿತು.

೪) 'ಅವರಿಗೆಲ್ಲ ನನ್ನ.............. ಕಳುಹಿಸಿದ್ದೇನೆ ಅಂತ ಹೇಳು' ಅಂದಿತು ಜಾಣ ಗಿಣಿ.

## ಕೆಳಗೆ ಕಥೆಯ ಅಂಶಗಳನ್ನು ಕೊಡಲಾಗಿದೆ. ಅವುಗಳನ್ನು ಕ್ರಮವಾಗಿ ಬರೆ.

೧) ನನ್ನ ಪ್ರಪಂಚದಲ್ಲಿ ನಾನು ಸುಖವಾಗಿ ಕಾಲ ಕಳೆಯುತ್ತಿದ್ದೇನೆ.

೨) ಭಾರತಕ್ಕೆ ಹಿಂದಿರುಗಿ ಬಂದ ಪ್ರವಾಸಿ ಆಫ್ರಿಕಾದಲ್ಲಿ ನಡೆದಿದ್ದನ್ನು ಹೇಳಿದನು.

೩) ಒಬ್ಬನು ಪ್ರವಾಸಕ್ಕೆಂದು ಆಫ್ರಿಕಾಗೆ ಹೋಗಿದ್ದನು.

೪) ಮಾವಿನ ಮರದ ಮೇಲೆ ಕುಳಿತಿತು.

೫) ನನ್ನ ಸೋದರ ನನಗೊಂದು ಮುಖ್ಯ ಸಂದೇಶವನ್ನು ಕಳುಹಿಸಿದ್ದಾನೆ.

## ಚಿತ್ರಕ್ಕೆ ಬಣ್ಣ ಕೊಡು.





## ನಿನಗೆ ಇಷ್ಟವಾದ ಯಾವುದಾದರು ಒಂದು ಪಕ್ಷಿಯ ಕುರಿತು ಐದರಿಂದ ಆರು ಸಾಲುಗಳಲ್ಲಿ ಲೇಖನ ಪುಸ್ತಕದಲ್ಲಿ ಬರೆ.

## ಭಾಷೆ ತಿಳಿಯೋಣ ಬಾ:

- ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.

ಹಿಂದೆ X ಮುಂದೆ

.................. X ..................

.................. X ..................

.................. X ..................



## ಸಮಾನಾರ್ಥಕ ಶಬ್ದಗಳನ್ನು ಬರೆ.

ಜನಸಂದಣಿ
............ **ಹಿಂಡು** ............
ಗುಂಪು

ಅಂದವಾದ
............ **ಸುಂದರ** ............
ಸೊಗಸಾದ

ವಿಶ್ವ
............ **ಪ್ರಪಂಚ** ............
ಜಗತ್ತು

ಯಾತ್ರೆ
............ **ಪ್ರವಾಸ** ............
ಸಂಚಾರ

## ಕ್ರಿಯಾಪದ

ಕ್ರಿಯೆಯನ್ನು ಸೂಚಿಸುವ ಪದಗಳಿಗೆ 'ಕ್ರಿಯಾಪದ' ಎನ್ನುವರು.

**ಉದಾಹರಣೆ :** ನೋಡು, ಓದು, ಬರೆ, ಮಾಡು, ಓಡು, ಹಾಡು, ತಿನ್ನು, ಮಲಗು, ಕೇಳು ಇತ್ಯಾದಿ.

ಉದಾಹರಣೆಗಾಗಿ ವಾಕ್ಯಗಳು :

೧) ನಾನು ಪಾಠವನ್ನು **ಓದುತ್ತೇನೆ.**

೨) ಬೆಕ್ಕು ಹಾಲನ್ನು **ಕುಡಿಯುತ್ತದೆ.**

೩) ಹಕ್ಕಿಗಳು ಆಕಾಶದಲ್ಲಿ **ಹಾರುತ್ತವೆ.**

**ವಾಕ್ಯಗಳಿಂದ ಕ್ರಿಯಾಪದಗಳನ್ನು ಗುರುತಿಸಿ ಬರೆ.**

| ವಾಕ್ಯಗಳು | ಕ್ರಿಯಾಪದಗಳು |
|---|---|
| ಒಂದೆರಡು ವರುಷಗಳು ಉರುಳಿದವು. | |
| ಬೇವಿನ ಮರವು ವಾತಾವರಣವನ್ನು ಶುದ್ಧಗೊಳಿಸುತ್ತದೆ. | |
| ಅವನು ಆಫ್ರಿಕಾದಲ್ಲಿ ನಡೆದಿದ್ದನ್ನು ಹೇಳಿದನು. | |
| ಮೋಡವು ಮಳೆಯನ್ನು ಸುರಿಸಿತು. | |
| ಮಕ್ಕಳು ಹಾಡನ್ನು ಹಾಡುವರು. | |

ಶಕ್ತಿಗಿಂತ ಯುಕ್ತಿ ಮೇಲು

# ೯. ಶಕ್ತಿ ಮತ್ತು ಸೌಂದರ್ಯ

ಒಂದು ಸುಂದರವಾದ ಕಾಡು ಇತ್ತು. ಸಿಂಹವೇ ಕಾಡಿನ ರಾಜ. ಸಿಂಹ ತನ್ನ ಮರಿಗಳೊಂದಿಗೆ ಸಂತೋಷವಾಗಿತ್ತು. ಸಿಂಹದಮರಿ ಒಂದು ದಿನ ತನ್ನ ತಾಯಿಯ ಹತ್ತಿರ ಬಂದಿತು. ''ಅಮ್ಮಾ, ನಾನು ಈ ಕಾಡಿನಲ್ಲಿ ಸುತ್ತಾಡಿಕೊಂಡು ಬರುತ್ತೇನೆ. ನನಗೆ ಈ ಸುಂದರ ಕಾಡನ್ನು ನೋಡುವ ಆಸೆ'' ಎಂದಿತು. ಆಗ ತಾಯಿ, ''ಸರಿ ಮಗು, ಹಾಗಾದರೆ ಹುಷಾರಾಗಿ ಹೋಗಿ ಬಾ'' ಎಂದು ಮರಿಯನ್ನು ಕಳುಹಿಸಿ ಕೊಟ್ಟಿತು.

ಸಿಂಹದ ಮರಿಯು ಕಾಡಿನಲ್ಲಿ ಆನಂದದಿಂದ ಸುತ್ತಾಡಿತು. ಪ್ರಕೃತಿ ಸೌಂದರ್ಯವನ್ನು ಸವಿಯಿತು ಎಲ್ಲಾ ಪ್ರಾಣಿ-ಪಕ್ಷಿಗಳನ್ನು, ಗಿಡ-ಮರಗಳನ್ನು ನೋಡುತ್ತ ಹೊರಟಿತು. ದಾರಿಯಲ್ಲಿ ಒಂದು ನವಿಲಿನ ಮರಿಯನ್ನು ಕಂಡಿತು. ಅದು ಗರಿಗಳನ್ನು ಬಿಚ್ಚಿ ವೈಯ್ಯಾರದಿಂದ ಕುಣಿಯುತ್ತಿತ್ತು.



ಸಿಂಹದಮರಿ ನವಿಲನ್ನು ನೋಡಿತು ''ಆಹಾ! ಇದು ಎಂತಹ ಸುಂದರ ಪಕ್ಷಿ! ನನಗೇಕೆ ಇಂತಹ ಸೌಂದರ್ಯ ಇಲ್ಲ?'' ಎಂದು ಅದಕ್ಕೆ ಬೇಸರ ಆಯಿತು.

ಮರಿಸಿಂಹ ನವಿಲಿನ ಮರಿಯ ಹತ್ತಿರ ಹೋಯಿತು ''ನಿನ್ನ ಗರಿಗಳು ಎಷ್ಟು ಸುಂದರ. ಇಂತಹ ಅಂದವಾದ ಗರಿಗಳನ್ನು ನಿನಗೆ ಯಾರು ಕೊಟ್ಟರು?'' ಎಂದು ಕೇಳಿತು. ನವಿಲಿನ ಮರಿ ''ಈ ಗರಿಗಳನ್ನು ನಾನು ಹುಟ್ಟುವಾಗಲೇ ನನ್ನ ತಾಯಿ ನನಗೆ ಕೊಟ್ಟಳು'' ಎಂದಿತು.

ಸಿಂಹದ ಮರಿಗೆ ಸಂದೇಹ ಬಂದಿತು. ''ನವಿಲಿನ ತಾಯಿ ನವಿಲಿಗೆ ಇಂತಹ ಸುಂದರ ಗರಿಗಳನ್ನು ಕೊಟ್ಟಿದ್ದಾಳೆ. ಆದರೆ ನನ್ನ ತಾಯಿ ನನಗೇಕೆ ಇಂತಹ ಗರಿಗಳನ್ನು ಕೊಡಲಿಲ್ಲ'' ಹೀಗೆ ಅಂದುಕೊಂಡಿತು. ಅದು ಕೂಡಲೇ ತನ್ನ ತಾಯಿಯ ಬಳಿಗೆ ಪ್ರಶ್ನಿಸಲು ಓಡಿತು.



''ಅಮ್ಮಾ! ನವಿಲಿನ ತಾಯಿ ಮರಿಗೆ ಹುಟ್ಟುವಾಗಲೇ ಸುಂದರ ಗರಿಗಳನ್ನು ಕೊಟ್ಟಳಂತೆ. ನೀನೇಕೆ ನನಗೆ ಗರಿಗಳನ್ನು ಕೊಡಲಿಲ್ಲ?''

''ಮಗು, ಅದು ಪಕ್ಷಿ ಇದೆ. ನಾವು ಪ್ರಾಣಿಗಳು. ನವಿಲಿನ ತಾಯಿ ಅದಕ್ಕೆ ಸೌಂದರ್ಯವನ್ನು ಮಾತ್ರ ಕೊಟ್ಟಿದ್ದಾಳೆ. ಅದಕ್ಕೆ ನಮ್ಮಷ್ಟು ಶಕ್ತಿ ಇಲ್ಲ. ನೀನು ನನ್ನ ಮಗ, ನಿನಗೆ ಶಕ್ತಿಯನ್ನು ಕೊಟ್ಟಿದ್ದೇನೆ. ನಿನ್ನಂತಹ ಶಕ್ತಿಶಾಲಿ ಬೇರೆ ಯಾರೂ ಇಲ್ಲ. ಎಲ್ಲಾ ಪ್ರಾಣಿಗಳು ನಿನ್ನನ್ನು ನೋಡಿ ಹೆದರಿ ಓಡಿ ಹೋಗುತ್ತವೆ. ನೀನು ಮುಂದೆ ಈ ಕಾಡಿನ ರಾಜನಾಗುವೆ. ನವಿಲಿನ ಮರಿಗೆ ಕೇವಲ ಸೌಂದರ್ಯ ಮಾತ್ರ ಇದೆ. ಆದರೆ ಶಕ್ತಿ ಇಲ್ಲ'' ಎಂದಿತು. ಆಗ ಸಿಂಹದಮರಿಗೆ ಸಮಾಧಾನ ಆಯಿತು. ಅದು ಸಂತಸದಿಂದ ಆಟವಾಡಲು ಓಡಿತು.

ನೀತಿ: ಪ್ರತಿಯೊಂದು ಪ್ರಾಣಿ ಮತ್ತು ಪಕ್ಷಿಗೂ ತನ್ನದೇಯಾದ ವಿಶೇಷತೆ ಇದೆ.



## ಶಬ್ದಾರ್ಥ:

| | | |
|---|---|---|
| ಗರಿ- ಪುಚ್ಛ, ಪುಕ್ಕ<br>ಸಂದೇಹ - ಅನುಮಾನ | ಪ್ರಕೃತಿ -ನಿಸರ್ಗ<br>ತಕ್ಷಣ- ಬೇಗನೆ | ಒಯ್ಯಾರ - ಬಿಂಕ, ಒನಪು<br>ಹೆದರು - ಅಂಜು |

## ಮಾತನಾಡೋಣ ಬನ್ನಿ.

೧. ನಿನಗೆ ಗೊತ್ತಿರುವ ಸಾಕುಪ್ರಾಣಿಗಳ ಮತ್ತು ಕಾಡುಪ್ರಾಣಿಗಳ ಹೆಸರು ಹೇಳು?

೨. ನಿನಗೆ ನವಿಲಿನ ಹಾಗೆ ಗರಿಗಳು ಇದ್ದರೆ ಏನು ಮಾಡುತ್ತಿದ್ದೆ ?

೩. ನೀನು ನವಿಲು ಹಾಗೂ ಸಿಂಹಗಳಲ್ಲಿ ಏನಾಗಲು ಬಯಸುವೆ ? ಏಕೆ ?

## ಯೋಚಿಸಿ ಬರೆ.

೧. ನವಿಲಿನ ಮರಿ ಸಿಂಹದ ಮರಿಗೆ ಏನು ಹೇಳಿತು?

..........................................................................................

..........................................................................................

೨. ಈ ಕಥೆಯ ನೀತಿ ಯಾವುದು?

..........................................................................................

## ಸರಿಯಾದ ಅಕ್ಷರ ಬಳಸಿ ಚೌಕಟ್ಟು ತುಂಬು.

| | |
|---|---|
| ನ | |
| ವಿ | |
| | |

| | | |
|---|---|---|
| ಮೊ | | ಳೆ |
| | | |

## ಕೆಳಗೆ ಕೊಟ್ಟ ಚೌಕಟ್ಟಿನಲ್ಲಿ ಪ್ರಾಣಿ-ಪಕ್ಷಿಗಳು ವಾಸಿಸುವ ಸ್ಥಳಗಳನ್ನು ಹುಡುಕಿ ಬರೆ.

೧. ಸಿಂಹ ೨ ನವಿಲು ೩. ಗುಬ್ಬಿ ೪. ಮನುಷ್ಯ ೫. ಮೀನು

| | | | |
|---|---|---|---|
| ಗು | ಗೂ | ಡು | ಳ |
| ಹೆ | ಮ | ನೆ | ನೀ |
| ಖು | ಗಿ | ಡ | ರು |

| | | |
|---|---|---|
| | | |

| | |
|---|---|
| | |

**ಕಂಸಿನಲ್ಲಿಯ ಪದಗಳನ್ನು ಉದಾಹರಣೆಯಲ್ಲಿ ತೋರಿಸಿದಂತೆ ಯೋಗ್ಯ ಸ್ಥಳದಲ್ಲಿ ಬರೆ**

( ಓಟ, ಶಕ್ತಿ, ಈಜುವುದು, ಕುಣಿಯುವುದು )

ಉದಾ: ನವಿಲಿನ : ಸೌಂದರ್ಯ : ಸಿಂಹದ : ಶಕ್ತಿ

೧. ಮಂಗನ : ಜಿಗಿತ : ಕುದುರೆ : ..........

೨. ಪಕ್ಷಿ : ಹಾರುವುದು : ಮೀನು : ..........

೩. ಕೋಗಿಲೆ : ಹಾಡುವುದು : ನವಿಲು : ........

## ✤ ಭಾಷೆ ತಿಳಿಯೋಣ ಬಾ:

- ವಿರಾಮ ಚಿಹ್ನೆಗಳನ್ನು ಸರಿಯಾಗಿ ಹೊಂದಿಸು.

| | |
|---|---|
| ೧. ಪ್ರಶ್ನಾರ್ಥಕ | ಅ. ! |
| ೨. ಪೂರ್ಣ ವಿರಾಮ | ಬ. ? |
| ೩. ಉದ್ಗಾರವಾಚಕ | ಕ. . |
| ೪. ಅಲ್ಪ ವಿರಾಮ | ಡ. ‘‘ ’’ |
| ೫. ಉದ್ಧರಣ ಚಿಹ್ನೆ | ಇ. ; |
| ೬. ಅರ್ಧವಿರಾಮ | ಈ. , |

- **ಕೆಳಗಿನ ವಾಕ್ಯ ಓದಿ ಯೋಗ್ಯ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಬರೆ.**

ಸಿಂಹದಮರಿ ನವಿಲನ್ನು ನೋಡಿತು ಆಹಾ ಎಂತಹ ಸುಂದರ ಪಕ್ಷಿ ಅದೆಷ್ಟು ಸೌಂದರ್ಯ ಇದರಲ್ಲಿ ಕೂಡಿದೆ ಇಂತಹ ಸೌಂದರ್ಯ ನನಗೇಕೆ ಇಲ್ಲ ಎಂದು ಬೇಸರಗೊಂಡಿತು

### ಕರ್ತೃ

ಕ್ರಿಯಾಪದಕ್ಕೆ ‘ಯಾರು?’ ಅಥವಾ ‘ಯಾವುದು?’ ಎಂದು ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಕರ್ತೃಪದ. ಯಾವ ಪದವು ಕ್ರಿಯೆಯನ್ನು ಯಾರು ಅಥವಾ ಯಾವುದು ಮಾಡಿತು ಎಂಬುದನ್ನು ತಿಳಿಸುತ್ತದೆಯೋ ಆ ಪದವೇ ಕರ್ತೃಪದ.

ಸಾಮಾನ್ಯವಾಗಿ ವಾಕ್ಯದಲ್ಲಿ ಕರ್ತೃವಿಗೆ ‘ನು’, ‘ಳು’, ‘ವು’, ‘ರು’ ಮುಂತಾದ ಪ್ರತ್ಯಯಗಳು ಸೇರಿರುತ್ತವೆ.

ಉದಾಹರಣೆಗಾಗಿ : ೧) **ದೇವರು** ನಿನಗೆ ಒಳ್ಳೆಯದನ್ನು ಮಾಡಲಿ.

೨) ಹೊಲದಲ್ಲಿ **ರೈತನು** ಕೆಲಸ ಮಾಡುತ್ತಾನೆ.

೩) ನೀರಿನಲ್ಲಿ **ಮಕ್ಕಳು** ಈಜಾಡುತ್ತಿದ್ದಾರೆ.

೪) **ನೀನು** ಚೆನ್ನಾಗಿ ಚಿತ್ರವನ್ನು ಬಿಡಿಸುತ್ತಿರುವೆ.

೫) **ನಾನು** ಪ್ರತಿದಿನ ಯೋಗಾಸನ ಮಾಡುತ್ತೇನೆ.

- **ಕೆಳಗೆ ಕೊಟ್ಟ ವಾಕ್ಯಗಳಲ್ಲಿ ಕರ್ತೃಪದವನ್ನು ಗುರುತಿಸಿ ಗೆರೆ ಹೊಡೆದು ಬರೆ.**

೧) ಗೋವಿಂದಪ್ಪನ ಮಾತುಗಳು ಸೋಜಿಗ ಎನಿಸಿದವು. ..............................

೨) ಹಲ್ಲು ಉಜ್ಜಲು ಬೇವಿನ ಕಡ್ಡಿಯನ್ನು ಬಳಸುತ್ತಾರೆ. ..............................

೩) ನಾನು ಕೆಳಗೆ ಬೀಳುತ್ತಿರುವೆ. ..............................

೪) ಸಾಕಿದ ಗಿಣಿ ಕಣ್ಣು ಬಿಟ್ಟು ರೆಕ್ಕೆ ಬಡಿಯುತ್ತಾ ಪಕ್ಕದಲ್ಲಿದ್ದ ಮಾವಿನ ಮರದ ಮೇಲೆ ಕುಳಿತಿತು. ..............................

೫) ಅವರೆಲ್ಲ ಸೇರಿ ಔತಣಕೂಟ ಮಾಡುವರು. ..............................

## ಕರ್ಮ

ಯಾವುದೇ ಒಂದು ವಾಕ್ಯದ ಕ್ರಿಯಾಪದಕ್ಕೆ 'ಏನನ್ನು?' ಅಥವಾ 'ಯಾರನ್ನು?' ಎಂದು ಪ್ರಶ್ನೆ ಹಾಕಿದಾಗ ಬರುವ ಉತ್ತರವೇ ಕರ್ಮಪದ.

ಉದಾಹರಣೆಗಾಗಿ : ೧) ಅಜ್ಜಿಯು ನಮಗೆ **ಕಥೆಯನ್ನು** ಹೇಳುತ್ತಾಳೆ.

೨) ಕವಿಯು ಸುಂದರವಾದ **ಕವನವನ್ನು** ಬರೆಯುತ್ತಾನೆ.

೩) ಇಲಿಯು **ಬೆಕ್ಕನ್ನು** ಕಂಡು ಓಡಿ ಹೋಯಿತು.

೪) ಗುರುಗಳು ಒಳ್ಳೆಯ **ಉಪದೇಶ** ಮಾಡಿದರು.

೫) ಗಾಯಕಿಯು **ಹಾಡನ್ನು** ಇಂಪಾಗಿ ಹಾಡುತ್ತಿದ್ದಾಳೆ.

ಕೆಳಗೆ ಕೊಟ್ಟ ವಾಕ್ಯಗಳಲ್ಲಿ ಕರ್ಮ ಪದವನ್ನು ಗುರುತಿಸಿ ಗೆರೆ ಹೊಡೆದು ಬರೆ.

೧) ವಿಕಲಚೇತನ ಮಕ್ಕಳಿಗೆ ಪ್ರೇರಣೆಯಾಗಬಲ್ಲ ಸಾಮಾಜಿಕ ಕಾರ್ಯ ಮಾಡುತ್ತಿದ್ದಾಳೆ. ......................

೨) ಪ್ರತಿದಿನವು ಸಿರಿಧಾನ್ಯಗಳನ್ನು ಬಳಸೋಣ. ......................

೩) ತಲೆಗೆ ಸುಣ್ಣ ಬಳಿದ ಒಡಕು ಮಡಿಕೆಯನ್ನು ಇಟ್ಟುಕೊಂಡನು. ......................

೪) ನನ್ನ ಪಂಜರದಲ್ಲಿ ನಾನು ಸುಖವಾಗಿ ಕಾಲವನ್ನು ಕಳೆಯುತ್ತಿದ್ದೇನೆ. ......................

೫) ನಿನಗೆ ತಕ್ಕ ಪಾಠವನ್ನು ಕಲಿಸುವೆ. ......................

- **ನೆನಪಿಟ್ಟುಕೊಳ್ಳಲು ಸುಲಭ ಹಾದಿ:**

**ಕರ್ತೃ:** ಕೆಲಸ ಮಾಡುವವನು.

**ಕರ್ಮ:** ಕೆಲಸದ ಪರಿಣಾಮ ಅನುಭವಿಸುವ ವಸ್ತು/ವ್ಯಕ್ತಿ

**ಕ್ರಿಯಾಪದ:** ನಡೆಯುವ ಕೆಲಸ

- **ಈ ಕೆಳಗಿನ ಕೋಷ್ಟಕದಲ್ಲಿರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ತಯಾರಿಸಿ.**

| ಕರ್ತೃ (ಯಾರು?/ಯಾವುದು?) | ಕರ್ಮ (ಏನನ್ನು?/ಯಾರನ್ನು?) | ಕ್ರಿಯಾಪದ (ಏನು ಮಾಡಿದರು?) |
|---|---|---|
| ಬಾಲಕನು | ಹಣ್ಣನ್ನು | ಓದಿದನು. |
| ಶಿಕ್ಷಕರು | ಪುಸ್ತಕವನ್ನು | ತಿಂದಳು. |
| ಆನೆಯು | ನೀರನ್ನು | ಕಲಿಸಿದರು. |
| ರಾಣಿಯು | ಪಾಠವನ್ನು | ಕುಡಿಯಿತು. |

೧) ..........................................................................

೨) ..........................................................................

೩) ..........................................................................

೪) ..........................................................................

- **ಕೆಳಗಿನ ವಾಕ್ಯಗಳಲ್ಲಿಯ ಕರ್ತೃ, ಕರ್ಮ, ಕ್ರಿಯಾಪದ ವಿಂಗಡಿಸಿ ಬರೆ.**

| ವಾಕ್ಯಗಳು | ಕರ್ತೃ | ಕರ್ಮ | ಕ್ರಿಯಾಪದ |
|---|---|---|---|
| ಉದಾ: ಅಪ್ಪ ಪತ್ರಿಕೆ ಓದಿದರು. | ಅಪ್ಪ | ಪತ್ರಿಕೆ | ಓದಿದರು |
| ಹಣ್ಣು ರುಚಿ ಹೊಂದಿರುತ್ತದೆ. | | | |
| ಹೊಲದಲ್ಲಿ ಭತ್ತ ಬಿತ್ತಿದೆವು. | | | |
| ಸುಂದರವಾದ ಗರಿ ಕೊಟ್ಟಳಂತೆ. | | | |
| ಹಾಲುಮರಕ್ಕೆ ತಾಗಿಸಿ ದೀಪ ನಂದಿಸುವರು. | | | |

- **ಯೋಗ್ಯ ಪದಗಳನ್ನು ತುಂಬಿ ವಾಕ್ಯ ಪೂರ್ಣ ಮಾಡು.**

೧) (ಕರ್ತೃ) .................+ (ಕರ್ಮ) ...................... + (ಕ್ರಿಯಾಪದ) ನೋಡುತ್ತಿದ್ದಾನೆ.

ಉದಾಹರಣೆ: **ರಾಮನು ಪಕ್ಷಿಗಳನ್ನು** ನೋಡುತ್ತಿದ್ದಾನೆ..

೨) (ಕರ್ತೃ) ...................+ (ಕರ್ಮ) ಅಡುಗೆಯನ್ನು + (ಕ್ರಿಯಾಪದ) .........................

..........................................................................................................

೩) (ಕರ್ತೃ) ಮಕ್ಕಳು + (ಕರ್ಮ) ................ + (ಕ್ರಿಯಾಪದ) .........................

..........................................................................................................

೪) (ಕರ್ತೃ) .................... + (ಕರ್ಮ) ................ (ಕ್ರಿಯಾಪದ) ಹೋಗುತ್ತೇನೆ.

..........................................................................................................

- **'ನೀನು ಕಾಡಿನ ರಾಜನಾದರೆ ಏನು ಮಾಡುವೆ?' ನಿನ್ನ ಅಭಿಪ್ರಾಯವನ್ನು ಬರೆ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**ತಾಯಿಗಿಂತ ಹಿತವರು ಇಲ್ಲ, ಸಕ್ಕರೆಗಿಂತ ಸವಿ ಇಲ್ಲ.**

# ೧೦. ಬೆದರು ಬೆಚ್ಚ

ನಮ್ಮ ಹೊಲದ ನಡುವೆ ನಿಂತ ಬಂಟನಾವನು ?
ಗಟ್ಟಿಗಾವಲಾಗಿ ಹೊಲವ ಕಾಯುತಿರುವನು ॥ ಪ ॥

ಹಳೆಯ ಲುಂಗಿಯನ್ನು ಈತ ಸುತ್ತಿಕೊಂಡನು
ಹರಿದ ಅಂಗಿಯನ್ನು ಮೇಲೆ ತೊಟ್ಟುಕೊಂಡನು
ಸುಣ್ಣ ಬಳಿದ ಒಡಕು ಮಡಿಕೆ ತಲೆಗೆ ಇಟ್ಟನು
ಬಡಿಗೆ ಹಿಡಿದು ಬಯಲಿನಲ್ಲಿ ನಿಂತುಕೊಂಡನು ॥ ೧ ॥

ಮಳೆಯು ಚಳಿಯು ಏನೆ ಬರಲಿ ಅಳುಕಲಾರನು
ಕೆಟ್ಟ ಬಿಸಿಲು ಬೇಗೆಯನ್ನು ಹೇಗೆ ತಾಳ್ವನು ।
ಇವನ ಕಂಡ ಹಕ್ಕಿಪಕ್ಕಿ ಹಾರಿ ಹೋದವು
ತುಡುಗ ದನವು ಹೊಲದ ಸನಿಹ ಸುಳಿಯಲಾರವು ।೨।

ಕತ್ತಲಲ್ಲಿ ಕದಿಯ ಬಂದ ಕಳ್ಳಕಾಕರು
ಹೆದರಿಕೊಂಡು ಎದ್ದು ಬಿದ್ದು ಓಡಿ ಬಿಡುವರು ।
ಕೇಕೆ ಹಾಕಿ ಈತ ಗಸ್ತು ತಿರುಗಲಾರನು
ಗಟ್ಟಿಗಾವಲಾಗಿ ನಿಂತ ಬೆದರು ಬೆಚ್ಚನು

–ಕಂಚ್ಯಾಣಿ ಶರಣಪ್ಪ



## ಶಬ್ದಾರ್ಥ:

| | |
|---|---|
| ಬಂಟ – ಸೇವಕ | ತುಡುಗ – ಕಳ್ಳ |
| ಮಡಿಕೆ – ಗಡಿಗೆ | ಗಸ್ತು – ಕಾವಲು |

## ಮಾತನಾಡೋಣ ಬನ್ನಿ.

೧) ಬೆದರು ಬೆಚ್ಚನನ್ನು ಹೊಲದಲ್ಲಿ ಏಕೆ ನಿಲ್ಲಿಸುವರು?

೨) ನಿಮ್ಮ ಹೊಲದ ರಕ್ಷಣೆಗಾಗಿ ನೀವು ಯಾವ ಯಾವ ಉಪಾಯ ಮಾಡುವಿರಿ?

## ಯೋಗ್ಯ ಪರ್ಯಾಯ ಶಬ್ದವನ್ನು ಉಪಯೋಗಿಸಿ ವಾಕ್ಯಗಳನ್ನು ಪೂರ್ಣ ಮಾಡಿರಿ.

೧ ಗಟ್ಟಿಗಾವಲಾಗಿ ಹೊಲವ ........................................

ಅ) ಕಾಯುತಿರುವನು ಬ) ನೋಡುತಿರುವನು ಕ) ಊಳುತಿರುವನು ಡ) ಬೆಳಗುತಿರುವನು

೨. ಸುಣ್ಣ ಬಳಿದ ಒಡಕು ಮಡಿಕೆ ........................................

ಅ) ಕೈಯಲ್ಲಿಟ್ಟನು ಬ) ಕಾಲಲ್ಲಿಟ್ಟನು ಕ) ತಲೆಗೆ ಇಟ್ಟನು ಡ) ಬಿಟ್ಟುಬಿಟ್ಟನು

೩. ಬಡಿಗೆ ಹಿಡಿದು ಬಯಲಿನಲ್ಲಿ ........................................

ಅ) ಮಲಗಿಕೊಂಡನು ಬ) ಓಡಿಹೋದನು ಕ) ನಿಂತುಕೊಂಡನು ಡ) ಆಡಿಕೊಂಡನು

೪. ಕೇಕೆ ಹಾಕಿ ಈತ ........................................

ಅ) ಗಸ್ತು ತಿರುಗಲಾರನು ಬ) ಓಡಿ ಹೋಗಲಾರನು ಕ) ಜಿಗಿದು ಬೀಳಲಾರನು ಡ) ಹಾಡಲಾರನು

## ಯೋಚಿಸಿ ಬರೆ.

೧. ನಮ್ಮ ಹೊಲದ ನಡುವೆ ಯಾರು ನಿಂತಿದ್ದಾರೆ?

........................................................................................................

೨ ಬೆದರು ಬೆಚ್ಚನು ತನ್ನ ತಲೆಗೆ ಏನು ಇಟ್ಟಿದ್ದಾನೆ?

........................................................................................................

೩. ಬೆದರು ಬೆಚ್ಚನನ್ನು ಕಂಡು ಯಾರು ಸುಳಿಯಲಾರರು ?

........................................................................................................

೪. ಯಾರನ್ನು ಕಂಡು ಕಳ್ಳಕಾಕರು ಹೆದರಿ ಓಡುವರು?

........................................................................................................

## ಬದಿಗೆ ಇರುವ ಚಿತ್ರವನ್ನು ನೋಡಿ ಅದರ ಕುರಿತು ಒಂದು ಪರಿಚ್ಛೇದ ತಯಾರಿಸು ಮತ್ತು ತಲೆಬರಹ ಕೊಡು.



## ಭಾಷೆ ತಿಳಿಯೋಣ ಬಾ

- **ಬರಿದಾದ ಚೌಕಟ್ಟಿನಲ್ಲಿ ಯೋಗ್ಯ ಅಕ್ಷರವನ್ನು ಉಪಯೋಗಿಸಿ ಪದಬಂಧವನ್ನು ಪೂರ್ಣಮಾಡು.**

| | | |
|---|---|---|
| | | |
| ಅ | | ಯ |
| | ಯ | |

| | | |
|---|---|---|
| | | |
| | | |
| | | |

| | | |
|---|---|---|
| | | |
| | | |
| | | |

- **ಕೆಳಗಿನ ಜೋಡಿ ಶಬ್ದಗಳನ್ನು ಜೋಡಿಸಿ ಬರೆ**

| | | |
|---|---|---|
| ಹಕ್ಕಿ | ಸುಣ್ಣ | ಮಡಿಕೆ |
| ಬಣ್ಣ | ಕುಡಿಕೆ | ಪಕ್ಕಿ |
| ಉದಾ: ಹಕ್ಕಿ – ಪಕ್ಕಿ | | |



ಬಡಿಗ ಮಾಡಿದ ಬಂಡಿ ಅದಲ್ಲ
ಮನುಷ್ಯ ಮಾಡಿದ ಯಂತ್ರವಿದಲ್ಲ
ವರುಷ ಇಡೀ ಸುತ್ತುತ್ತದೆ
ಹೇಳಿರಿ ಚಿಣ್ಣರೆ ಯಾವುದಿದೆ?

ಗಡಿಯಾರ

## ಕಾಲಗಳು

ವಾಕ್ಯದಲ್ಲಿ ಕ್ರಿಯೆ ನಡೆಯುವ ಸಮಯವನ್ನು ಸೂಚಿಸುವುದೇ ಕಾಲ. ಒಂದೇ ಕ್ರಿಯಾಪದದ ರೂಪವು ಕಾಲಾನುಸಾರವಾಗಿ ಬದಲಾಗುತ್ತದೆ. ವರ್ತಮಾನ, ಭೂತ ಮತ್ತು ಭವಿಷ್ಯತ್‌ಕಾಲಗಳಲ್ಲಿ ಕಂಡುಬರುವ ಕ್ರಿಯೆಗಳ ಸನ್ನಿವೇಶಗಳನ್ನು ತಿಳಿಸುವ ರೂಪಗಳಿಗೆ ಕಾಲಗಳು ಎನ್ನಲಾಗಿದೆ.

ಕನ್ನಡದಲ್ಲಿ ಮುಖ್ಯವಾಗಿ **ಮೂರು** ಕಾಲಗಳು ಇವೆ.

ಕಾಲಗಳು

೧. ವರ್ತಮಾನಕಾಲ | ೨. ಭೂತಕಾಲ | ೩. ಭವಿಷ್ಯತ್ಕಾಲ

### ೧. ವರ್ತಮಾನ ಕಾಲ

- ಕ್ರಿಯೆಯು ಈಗ ನಡೆಯುತ್ತಿದೆ ಎಂಬುದನ್ನು ಸೂಚಿಸುವುದೇ ವರ್ತಮಾನ ಕಾಲ.

ಉದಾಹರಣೆ: ೧. ನಾನು ಶಾಲೆಗೆ ಹೋಗುತ್ತಿದ್ದೇನೆ.

೨. ಕಿರಣನು ನೀರಿನಲ್ಲಿ ಈಜುತ್ತಿದ್ದಾನೆ.

೩. ರಮೇಶನು ಊಟ ಮಾಡುತ್ತಿದ್ದಾನೆ.

೪. ಅರುಣಾ ಆಟ ಆಡುತ್ತಿದ್ದಾಳೆ.

- **ಕೆಳಗಿನ ವಾಕ್ಯಗಳ ಕ್ರಿಯಾಪದವನ್ನು ವರ್ತಮಾನ ಕಾಲದ ರೂಪದಲ್ಲಿ ಪೂರ್ಣಗೊಳಿಸು.**

೧. ದಟ್ಟವಾಗಿ ಬೆಳೆಯುವ ಈ ಮರ ತಂಪಾದ ನೆರಳನ್ನು ..........................

೨. ಬೇರು ಮಣ್ಣಿನಲ್ಲಿರುವ ನೀರು ಹಾಗೂ ಸತ್ವವನ್ನು ..........................

೩. ನನ್ನ ಪಂಜರದಲ್ಲಿ ನಾನು ಸುಖವಾಗಿ ಕಾಲ ..........................

೪. ಎಲ್ಲ ಪ್ರಾಣಿಗಳು ನಿನ್ನನು ನೋಡಿ ಹೆದರಿ ಓಡಿ ..........................

೫. ಮನೆಯೊಡತಿ ತಾನೊಂದು ದೀಪ ತಂದು ಬಾಗಿಲು ತೆರೆದು ದೀಪದಿಂದ ದೀಪವನ್ನು ..........................

### ೨. ಭೂತಕಾಲ

- ಕ್ರಿಯೆಯು ಹಿಂದೆ ನಡೆದು ಹೋಗಿದೆ ಎಂಬುದನ್ನು ಸೂಚಿಸುವುದೇ ಭೂತಕಾಲ.

ಉದಾಹರಣೆ: ೧. ಅವನು ಶಾಲೆಗೆ ಹೋದನು .

೨. ಅಜ್ಜಿ ಕಥೆಯನ್ನು ಹೇಳಿದಳು.

೩. ಅಮ್ಮ ನಮಗಾಗಿ ಸಿಹಿ ತಿಂಡಿ ಮಾಡಿದ್ದಳು.

೪. ಅಪ್ಪ ತೋಟಕ್ಕೆ ಹೋದರು.

- **ಕೆಳಗಿನ ವಾಕ್ಯಗಳ ಕ್ರಿಯಾಪದವನ್ನು ಭೂತಕಾಲದ ರೂಪದಲ್ಲಿ ಪೂರ್ಣಗೊಳಿಸು.**

೧. ಈ ತಂಡದವರು ಹೋಗಿ ಅವರವರ ವೃತ್ತಿಗಳನ್ನು ಹೊಗಳುವ ಹಾಡುಗಳನ್ನು ........................

೨. ಎಲ್ಲರೂ ಬಾಪೂಜಿಯ ಜಯ ಜಯಕಾರ...............................

೩. ಅದಕ್ಕೆ ಇಲ್ಲಿ ಬಂದಂತ ಸಮಾಜ ಸೇವಕರೇ ನಿರ್ಧಾರ ........................

೪. ಶೆಫಾಲಿ, ದಿಯಾ ಮತ್ತು ತರುಣ ಅವಳಿಗೆ ಒಳ್ಳೆಯ ಉಡುಗೊರೆ ........................

೫. ತನ್ನ ಜೀವನ ಕಥೆಯನ್ನು ಮನಮುಟ್ಟುವಂತೆ ........................ .

## ೩. ಭವಿಷ್ಯತ್‌ಕಾಲ

- ಕ್ರಿಯೆಯು ಮುಂದೆ ನಡೆಯಲಿರುವುದನ್ನು ಸೂಚಿಸುವುದೇ ಭವಿಷ್ಯತ್‌ಕಾಲ.

ಉದಾಹರಣೆ:
೧. ಅವರು ಪ್ರವಾಸಕ್ಕೆ ಹೋಗುವರು.
೨. ಅವಳು ಹಾಡನ್ನು ಹಾಡುವಳು.
೩. ಮೋಟಾರು ಊರಿಗೆ ತಲುಪುವದು.
೪. ಆಟ ಯಾವಾಗ ಆರಂಭ ಆಗುವುದು.

- **ಕೆಳಗಿನ ವಾಕ್ಯಗಳ ಕ್ರಿಯಾಪದವನ್ನು ಭವಿಷ್ಯತ್ ಕಾಲದ ರೂಪದಲ್ಲಿ ಪೂರ್ಣಗೊಳಿಸು.**

೧. ಒಂದೇ ಮನಸ್ಸಿನಿಂದ ಶ್ರಮಿಸುತ ಪ್ರಗತಿಯ ಶಿಖರವನ್ನು ........................

೨. ಮರುದಿನ ತಮ್ಮ ಹಳ್ಳಿಗೆ ....................

೩. ಮುಂಜಾನೆದ್ದು ಕುಂಬಾರಣ್ಣ ಹಾಲು ಅನ್ನ ಊಟ ........................

೪. ನಾವು ಬೇವಿನ ಮರಗಳನ್ನು ಹೆಚ್ಚಾಗಿ ಬೆಳೆಸಿ ಅವುಗಳನ್ನು ...............

೫. ಮಾವಿನ ಹಣ್ಣು ದೊಪ್ಪನೆ ಕೆಳಗೆ ........................

# ಬ್ಯಾಂಕ ವ್ಯವಹಾರ ಮತ್ತು ಮಾಹಿತಿ



# ಅಂಚೆ ಕಚೇರಿ.




**ಸೂಚನೆ :** ಅಂಚೆ ಮತ್ತು ಬ್ಯಾಂಕಿನ ಸಿಬ್ಬಂದಿಯೊಂದಿಗಿನ ಒಂದು ಸಂವಾದವನ್ನು ಹೇಳಲು ಮಕ್ಕಳಿಗೆ ಅವಕಾಶ ಮಾಡಿ ಕೊಡಿರಿ.

# ೧೨. ಅಂಟಿಗೆ ಪಂಟಿಗೆ

ದೀಪಾವಳಿ ಬೆಳಕಿನ ಹಬ್ಬ. ಇದು ಕತ್ತಲಿನಿಂದ ಬೆಳಕಿನೆಡೆಗೆ ಸಾಗಲು ಕರೆ ನೀಡುತ್ತದೆ. ಕರ್ನಾಟಕದ ಮಲೆನಾಡಿನಲ್ಲಿ ದೀಪಾವಳಿಯ ಸಂದರ್ಭದ ಒಂದು ಆಚರಣೆಯೇ 'ಅಂಟಿಗೆ ಪಂಟಿಗೆ'.



ಕಾರ್ತಿಕ ಮಾಸದ ಮೊದಲ ದಿನ ಬಲಿಪಾಡ್ಯದಂದು ಪ್ರಾರಂಭಿಸಿ ಮೂರು ದಿನಗಳವರೆಗೆ ಅಂಟಿಗೆ ಪಂಟಿಗೆ ಪ್ರದರ್ಶನ ನಡೆಯುತ್ತದೆ. ರೈತರು ತಮ್ಮ ಕೃಷಿ ಕೆಲಸಗಳಿಗೆ ನೆರವಾದ ದನ ಕರುಗಳು, ನೇಗಿಲು, ನೊಗ ಮುಂತಾದ ಉಪಕರಣಗಳ, ಪೈರುಪಚ್ಚೆಗಳ ಪೂಜೆ ಮಾಡುವರು. ದೀಪಾವಳಿ ಪಾಡ್ಯದ ದಿನ ಸಂಜೆಯಾದಂತೆ ದೀಪಗಳ ಸಾಲು ಹತ್ತಿಕೊಳ್ಳುತ್ತವೆ. ದೀಪಾವಳಿಯಲ್ಲಿ ಮೂರು ದಿನ ಸಂಜೆ ದೀಪ ಉರಿಸಿಕೊಂಡು ಜಾನಪದ ಗೀತೆ ಹಾಡುತ್ತಾ ಮನೆಮನೆಗೆ ಹೋಗುವ ಜಾನಪದ ಗೀತಮೇಳಗಳೇ ಅಂಟಿಗೆ ಪಂಟಿಗೆ ತಂಡಗಳು, ಅವರು ಹಾಡುವ ಹಾಡುಗಳೇ ಅಂಟಿಗೆ ಪಂಟಿಗೆ ಹಾಡುಗಳು. ಅಂಟಿಗೆ ಪಂಟಿಗೆಯವರು ಊರ ದೇವಾಲಯದ ಬಳಿ ಬಂದು ದೇವರನ್ನು ಸ್ತುತಿಸುವ ಹಾಡುಗಳನ್ನು ಹೇಳುವರು.

**''ಕಲ್ಲಲ್ಲಿ ಹುಟ್ಟೋಳೆ ಕಲ್ಲಲ್ಲಿ ಬೆಳೆಯೋಳೆ**
**ಕಲ್ಲಲ್ಲಿ ಕಣ್ಣ ಬಿಡುವೋಳೆ''**

ಎಂದು ಹಾಡಿ ದೀಪ ಹಚ್ಚುವರು. ದೊಡ್ಡ ಮಣ್ಣಿನ ಹಣತೆಯಲ್ಲಿ ಹಚ್ಚಿದ ಕೈದೀಪ ಹಿಡಿದುಕೊಂಡು ಮನೆ ಮನೆಗೆ ಹೊರಡುತ್ತಾರೆ. ಪಾಡ್ಯದಂದು ಹಚ್ಚಿದ ದೀಪ ಮೂರು ದಿನ ಎಡೆಬಿಡದೆ ಬೆಳಗುತ್ತದೆ,

ನಡುವೆ ಆರಿದರೆ ಕೆಡುಕೆಂದು ಅವರ ನಂಬುಗೆ.

ಅಂಟಿಗೆ ಪಂಟಿಗೆಯವರು ಮನೆಮನೆಗೆ ತೆರಳಿ ಜ್ಯೋತಿಯನ್ನು ಮನೆಯ ಮುಂದಿಟ್ಟು ಪದ ಹೇಳಿ ಮನೆಯವರನ್ನು ಎಬ್ಬಿಸುತ್ತಾರೆ.

**''ಬಾಗಿಲು ತೆಗಿಯಮ್ಮ ಭಾಗ್ಯದ ಲಕ್ಷ್ಮಮ್ಮ**
**ಜ್ಯೋತಿ ಮನ್ಯೊಳಗೆ ಕರಕೊಳ್ಳಿ''**

ಎಂದು ಹಾಡುತ್ತಾ ದೀಪ ತಂದಿರಿಸುತ್ತಾರೆ. ಮನೆಯೊಡತಿ ತಾನೊಂದು ದೀಪ ತಂದು ಬಾಗಿಲು ತೆರೆದು ದೀಪದಿಂದ ದೀಪವನ್ನು ಸ್ವಾಗತಿಸುವಳು. ಆ ಮನೆಯವರ ವೈಭವ, ತ್ಯಾಗ, ಉದಾರತೆ, ದಾನ ಗುಣವಿಶೇಷತೆಗಳನ್ನು ತಂಡದವರು ಜಾನಪದ ಗೀತೆಗಳಿಂದಲೇ ನಿರೂಪಿಸುತ್ತಾರೆ. ಇದನ್ನು ಕೇಳಿ ಮನೆಯವರು ಮುದಗೊಳ್ಳುವರು. ಎಲೆ, ಅಡಿಕೆ, ಅಕ್ಕಿ, ಧಾನ್ಯ, ತೆಂಗಿನಕಾಯಿ, ಹಣ ಎಲ್ಲಾ ಕೈನೀಡಿ ಕೊಡುವುದನ್ನು ಪಡೆದುಕೊಳ್ಳುವರು. ತಂಡದವರು ಹರಕೆಯ ಹಾಡುಗಳನ್ನು ಹಾಡುವರು. ಇಲ್ಲಿಗೆ ನಿಲ್ಲದೆ ತಂಡದವರು ತಾವು ತಂದ ಜ್ಯೋತಿಗೆ ಎಣ್ಣೆ ಎರೆಯಿರೆಂದು ಕೇಳುವರು.

**''ಎಣ್ಣೆ ಎರೆದರೆ ಪುಣ್ಯೇವು ಬರುತಾವೆ**
**ಪುತ್ರೈದರ ಫಲವು ತಮಗಾದೋ''**

ಎಂದು ರಮ್ಯವಾಗಿ ಹರಕೆಯ ಹಾಡನ್ನು ಹೇಳುತ್ತ ತಾವು ತಂದ ಜ್ಯೋತಿಗೆ ಎಣ್ಣೆ ಎರೆಯಿರೆಂದು ಕೇಳುವರು.

ಮನೆಯೊಡತಿ ಎಣ್ಣೆ ಎರೆದಾದ ಮೇಲೆ ತಂಡದವರು ತಮ್ಮ ಹಣತೆಯಿಂದ ಉರಿವ ಬತ್ತಿಯ ಕದಿರೊಂದನ್ನು ತೆಗೆದು ಮನೆಯ ಹಣತೆಗೆ ಇಡುವರು.

ಬಡವ-ಬಲ್ಲಿದ, ಮೇಲು-ಕೀಳೆನ್ನದೆ ಎಲ್ಲರ ಮನೆಗೂ ಈ ತಂಡದವರು ಹೋಗಿ ಅವರವರ ವೃತ್ತಿಗಳನ್ನು ಹೊಗಳುವ ಹಾಡುಗಳನ್ನು ಹಾಡುತ್ತಾರೆ. ಅಂಟಿಗೆ ಪಂಟಿಗೆ ತಂಡದಲ್ಲಿ ಸಾಮಾನ್ಯವಾಗಿ ಇಬ್ಬರು ಮುಮ್ಮೇಳದವರಾದರೆ ಉಳಿದವರೆಲ್ಲ ಹಿಮ್ಮೇಳದವರು. ಹೀಗೆ ಮೂರು ದಿನ ನಡೆಯುವ ಈ ಉತ್ಸವ ಜಾನಪದ ಪದವೈಭವದಿಂದ ಕೂಡಿದೆ. ಮಲೆನಾಡಿನ ಸಮೃದ್ಧ ಬದುಕಿನ ಚಿತ್ರಣ ಈ ಗೀತೆಗಳಲ್ಲಿದೆ. ಮೂರು ದಿನ ಕಳೆದು ನೇಸರು ಮೂಡಿದರೆ ಅಂಟಿಗೆ ಪಂಟಿಗೆ ಮುಗಿಯುತ್ತದೆ. ಆಗ 'ಜ್ಯೋತಿಮಾತಾಯಿ'ಯನ್ನು ಬೀಳ್ಕೊಡುವ ಹಾಡನ್ನು ಹಾಡುತ್ತಾರೆ.

**''ಹೋಗಿ ಬರ್ತೀವಿ ಹೊಸ್ತಿಲೆ, ಹೋಗಿ ಬರ್ತಿವಿ ಬಾಗೀಲೆ**
**ನಾಗ ಸಂಪಗೆಯ ನಡುಮನೆ ದೇವರ ಕೋಣೆ**
**ಇಂದೋಗಿ ಮುಂದೆ ಬರುತೀವಿ''**

ಎಂದು ದೇವರನ್ನು ಆರಾಧಿಸಿ ಹಾಲುಮರಕ್ಕೆ ತಾಗಿಸಿ ದೀಪವನ್ನು ನಂದಿಸುವರು. ಒಂದೆರಡು ದಿನದಲ್ಲಿ ಅವರೆಲ್ಲ ಸೇರಿ ಔತಣ ಮಾಡುವರು. ಇಲ್ಲಿಗೆ ಬೆಳಕಿನ ಹಬ್ಬ ಮುಕ್ತಾಯವಾಗುವುದು. ಮಂಡ್ಯ, ಚಿಕ್ಕಮಗಳೂರು ಜಿಲ್ಲೆಗಳ ಮಲೆನಾಡಿನಲ್ಲಿ ಮಾತ್ರ ಕಾಣಬರುವ ಈ ಜಾನಪದ ಸಂಪ್ರದಾಯ ತನ್ನದೇ ಆದ ವಿಶೇಷತೆಯಿಂದ ಕೂಡಿದ್ದು ಇಂದಿನವರೆಗೂ ಉಳಿದು ಬೆಳೆದು ಬಂದಿದೆ.

## ಶಬ್ದಾರ್ಥ:

| | | |
|---|---|---|
| ಪ್ರದರ್ಶನ -ತೋರಿಸುವಿಕೆ, ನೋಟ | ತೆರಳು -ಹೋಗು | ಕದಿರು - ಬೆಳಕಿನ ಕುಡಿ, ಕಿರಣ |
| ಕೃಷಿ -ಒಕ್ಕಲುತನ | ತ್ಯಾಗ - ಕೊಡುಗೆ, ದಾನ, ತೊರೆಯುವದು | ವೈಭವ - ಐಶ್ವರ್ಯ |
| | | ಹಾಲುಮರ - ಆಲದ ಮರ |

## ಪದಗಳ ಅರ್ಥವನ್ನು ಶಬ್ದಕೋಶದಿಂದ ಹುಡುಕಿ ಬರೆಯಿರಿ.

೧) ರಮ್ಯ -

೨) ಕೀರ್ತಿ -

## ಮಾತನಾಡೋಣ ಬನ್ನಿ.

೧. ನಿಮ್ಮ ಊರುಗಳಲ್ಲಿ ದನ ಕರುಗಳನ್ನು ಯಾವ ಯಾವ ಹಬ್ಬಗಳ ಸಂದರ್ಭದಲ್ಲಿ ಪೂಜಿಸುತ್ತಾರೆ?

೨. ನಿಮಗೆ ಗೊತ್ತಿರುವ ಜಾನಪದ ಹಾಡುಗಳನ್ನು ಹಾಡಿ ತೋರಿಸಿರಿ.

## ಯೋಚಿಸಿ ಬರೆ.

೧) ಅಂಟಿಗೆ ಪಂಟಿಗೆಯನ್ನು ಯಾವ ಹಬ್ಬದ ಸಂದರ್ಭದಲ್ಲಿ ಆಚರಿಸುತ್ತಾರೆ?

..............................................................................................

೨) ಅಂಟಿಗೆ ಪಂಟಿಗೆಯಲ್ಲಿ ಯಾವುದರ ಚಿತ್ರಣ ಕಂಡು ಬರುವದು?

..............................................................................................

೩) ಮನೆಯೊಡತಿ ಅಂಟಿಗೆ ಪಂಟಿಗೆ ತಂಡದವರನ್ನು ಹೇಗೆ ಸ್ವಾಗತಿಸುವಳು?

..............................................................................................

೪) ಮುದಗೊಂಡ ಮನೆಯವರು ಕೈ ನೀಡಿ ಏನನ್ನು ಕೊಡುವರು?

..............................................................................................

## ನೀವು ನಿಮ್ಮ ಆಪ್ತರಿಗೆ ಮಕರಸಂಕ್ರಾಂತಿ,ಯುಗಾದಿ, ವಿಜಯದಶಮಿ, ದೀಪಾವಳಿ ಹಬ್ಬಗಳ ಸಂದರ್ಭಗಳಲ್ಲಿ ಹೇಗೆ ಶುಭಾಶಯಗಳನ್ನು ಕೋರುವಿರಿ? ಅವುಗಳನ್ನು ಬರೆಯಿರಿ.





  

**ಕೆಳಗಿನ ಗದ್ಯಭಾಗವನ್ನು ಓದಿ, ಅನುಲೇಖನ ಮಾಡಿ ಅದಕ್ಕೆ ಯೋಗ್ಯ ತಲೆಬರಹ ಕೊಡು.**

ಮನುಷ್ಯ ಗುಂಪಿನಲ್ಲಿ ಇರಲು ಇಷ್ಟಪಡುತ್ತಾನೆ. ಅವನಿಗೆ ಒಂಟಿಬಾಳು ಹಿತವೆನಿಸುವುದಿಲ್ಲ. ಅದಕ್ಕಾಗಿ ಅವನನ್ನು ಸಮಾಜಜೀವಿ ಎನ್ನುತ್ತಾರೆ. ಯಾವುದೋ ನೆನಪಿಗಾಗಿ, ಯಾವುದೋ ನಂಬಿಕೆಗಾಗಿ, ಸಮಾಜದ ಹಿತಕ್ಕಾಗಿ ಉತ್ಸವಗಳನ್ನು ಆಚರಿಸುತ್ತಾರೆ. ಉತ್ಸವ ಎಂದರೆ ಎಲ್ಲರಿಗೂ ಸಂಭ್ರಮ. ಮಕ್ಕಳಿಂದ ಮುದುಕರವರೆಗೂ ಎಲ್ಲರಿಗೂ ಸಡಗರ, ಸರಿ ತಾನೆ? ನಮ್ಮ ನಿತ್ಯದ ತಿಂಡಿ –ತಿನಿಸು,ಉಡುಗೆ–ತೊಡುಗೆಗಳಲ್ಲಿ ವಿಶೇಷತೆ ಇರುವುದು ಕಡಿಮೆ. ಆದರೆ ಹಬ್ಬ, ಉತ್ಸವಗಳ ರೀತಿ ಬೇರೆ. ಅಂಥ ದಿನಗಳಲ್ಲಿ ಊಟ– ಉಪಚಾರಗಳ ಸವಿಯೇ ಬೇರೆ. ಬಟ್ಟೆ –ಬರೆಗಳ ಬೆಡಗು ಹೆಚ್ಚಿನದು. ಕೆಲವು ಸಲ ಹಾಡು ಕುಣಿತಗಳ ಸೊಗಸು ಇರುತ್ತದೆ.

## ಭಾಷೆ ತಿಳಿಯೋಣ ಬಾ:

**ಕೊಟ್ಟ ಪಡೆನುಡಿಗಳ ಅರ್ಥ ಹುಡುಕಿರಿ.**

೧) ಅಳಿಲುಸೇವೆ

ಅ) ಇಣಚಿ ಸೇವೆ ಬ) ಮನೆ ಸೇವೆ ಕ) ದೊಡ್ಡಸೇವೆ ಡ) ಅಲ್ಪಸೇವೆ

೨) ತಲೆದೂಗು

ಅ) ತಲೆನೋವು ಬ) ಮೆಚ್ಚುಗೆ ವ್ಯಕ್ತಪಡಿಸು ಕ) ತಲೆ ತೂಗಿಸು ಡ) ತಲೆ ತಿರುಗು

೩) ಕಿವಿ ಊದು

ಅ) ಚಾಡಿ ಹೇಳು ಬ) ಕಿವಿಯಲ್ಲಿ ಊದು ಕ) ಕಿವಿ ಕೇಳು ಡ) ಕಿವಿ ನೋವು

೪) ಕೆಳಗಿನ ಶಬ್ದಗಳನ್ನು ವರ್ಣಮಾಲೆಯ ಕ್ರಮದಲ್ಲಿ ಬರೆದಾಗ ಬರುವ ಕೊನೆಯ ಶಬ್ದ ಯಾವುದು?

ಅ) ಮಂಗಳ ಬ) ಶನಿ ಕ) ಸೋಮ ಡ) ರವಿ

೫) ಆರೋಗ್ಯ, ಆನಂದ, ಆಸೆ, ಆಕಾರ ಈ ಶಬ್ದಗಳನ್ನು ವರ್ಣಮಾಲೆಯ ಕ್ರಮದಲ್ಲಿ ಬರೆದಾಗ ಕೊನೆಯಿಂದ ಮೂರನೆಯ ಕ್ರಮಾಂಕದಲ್ಲಿ ಬರುವ ಶಬ್ದದ ವಿರುದ್ಧಾರ್ಥದ ಶಬ್ದ ಗುರುತಿಸಿರಿ.

ಅ) ಅನಾರೋಗ್ಯ ಬ) ಆಕಾರವಿರದ ಕ) ದುರಾಸೆ ಡ) ದುಃಖ

೬) ವರ್ಣಮಾಲೆಯ ಕ್ರಮಕ್ಕನುಸಾರ ಬರೆದಾಗ ಬರುವ ಮೂರನೆಯ ಪದ ಯಾವುದು?

ಅ) ತಾಯಿ ಬ) ತಾತ ಕ) ತಾವರೆ ಡ) ತಾಳು

## ವಾಕ್ಯ ಅಂದರೇನು?

ಪೂರ್ಣವಾದ ಅರ್ಥವನ್ನು ನೀಡುವ ಶಬ್ದಗಳ ಸಮೂಹಕ್ಕೆ ವಾಕ್ಯ ಎನ್ನುತ್ತಾರೆ.

ಉದಾಹರಣೆ – ರೋಹಿತನು ಕ್ರಿಕೆಟ್ ಆಡುತ್ತಾನೆ

**ವಾಕ್ಯದ ಪ್ರಕಾರಗಳು**

ಸರಳ ವಾಕ್ಯ — ಸಂಯುಕ್ತ ವಾಕ್ಯ — ಮಿಶ್ರ ವಾಕ್ಯ

### ಸರಳ ವಾಕ್ಯ

ಒಂದೇ ಒಂದು ಪೂರ್ಣ ಕ್ರಿಯಾಪದವನ್ನು ಹೊಂದಿರುವ ಸ್ವತಂತ್ರ ವಾಕ್ಯವನ್ನು 'ಸರಳ ವಾಕ್ಯ' ಎನ್ನಲಾಗುತ್ತದೆ.

ಉದಾಹರಣೆಗಾಗಿ:
೧) ಸೂರ್ಯನು ಪೂರ್ವದಲ್ಲಿ ಹುಟ್ಟುತ್ತಾನೆ.
೨) ಗಾಳಿಯು ಜೋರಾಗಿ ಬೀಸುತ್ತಿದೆ.
೩) ತಂದೆಯು ತಿಂಡಿಗಳನ್ನು ತಂದರು.
೪) ಮಕ್ಕಳು ಓಡುತ್ತಾ ಬಂದರು.
೫) ಹನುಮಂತನು ಆಕಾಶಕ್ಕೆ ನೆಗೆದನು.
೬) ಮಕ್ಕಳು ಮೈದಾನದಲ್ಲಿ ಆಟವಾಡುತ್ತಿದ್ದಾರೆ.

### ಸಂಯುಕ್ತ ವಾಕ್ಯ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಸ್ವತಂತ್ರ ವಾಕ್ಯಗಳು 'ಮತ್ತು'. 'ಹಾಗೂ', 'ಅಥವಾ' ಇತ್ಯಾದಿ ಅವ್ಯಯಗಳ ಮೂಲಕ ಒಂದಕ್ಕೊಂದು ಬೆಸೆದುಕೊಂಡಿದ್ದರೆ ಅವುಗಳನ್ನು 'ಸಂಯುಕ್ತ ವಾಕ್ಯ' ಎನ್ನುತ್ತಾರೆ.

೧) ರಾಣಿಯು ಹಾಡುತ್ತಾಳೆ **ಮತ್ತು** ರವಿಯು ತಬಲಾ ಬಾರಿಸುತ್ತಾನೆ.
೨) ನಾವು ಪ್ರತಿದಿನ ವ್ಯಾಯಾಮ ಮಾಡಬೇಕು **ಹಾಗೂ** ಪೌಷ್ಟಿಕ ಆಹಾರ ಸೇವಿಸಬೇಕು.
೩) ಬಸ್ಸಿನಲ್ಲಿ ಪ್ರಯಾಣಿಸಿ **ಅಥವಾ** ರೈಲಿನಲ್ಲಿ ಪ್ರಯಾಣಿಸಿ.
೪) ಕುದುರೆಯು ಉಪವನವನ್ನು ಹೊಕ್ಕಿತು **ಆಗ** ತೋಟದ ಕಾವಲುಗಾರನು ಅದನ್ನು ಕಟ್ಟಿಹಾಕಿದನು.
೫) ನನಗೆ ಸಂಗೀತ ಇಷ್ಟ **ಆದರೆ** ಹಾಡಲು ಬರುವುದಿಲ್ಲ.
೬) ಸಂಜೆಯಾಯಿತು **ಆದ್ದರಿಂದ** ಹಕ್ಕಿಗಳು ಗೂಡಿಗೆ ಮರಳಿದವು.

✤ **ಹೇಳಿ ನೋಡೋಣ**



ಅಬ್ಬಬ್ಬ ಹಬ್ಬ ಬಂತು,
ಸಿಹಿಕಹಿ ಎರಡೂ ತಂತು.

ಯುಗಾದಿ

**ಜನಪದದಲ್ಲಿದೆ ಜೀವನದ ಸಾರ**

# ೧೩. ಪುಸ್ತಕ ಪ್ರೇಮಿ



ಅಮ್ಮ ಅಮ್ಮ ಬೀರಿನ ತುಂಬ
ಬಟ್ಟೆಯೇ ತುಂಬಿವೆ ।
ಹಬ್ಬಕೆ ಬಟ್ಟೆಯು ಬೇಡಮ್ಮ
ಅಪ್ಪಗೆ ನೀನೇ ಹೇಳಮ್ಮ ॥

ಹೊಸ ಹೊಸ ಪುಸ್ತಕ ಓದುವೆನು
ನನ್ನಯ ಮಸ್ತಕ ತುಂಬುವೆನು ।
ಎಲ್ಲರ ಪ್ರೀತಿಯ ಪಡೆಯುವೆನು
ಬದುಕುವ ರೀತಿಯ ಕಲಿಯುವೆನು ॥

ದಿನವೂ ಪತ್ರಿಕೆ ಓದುವೆನು
ಜಗದ ಸುದ್ದಿಯ ತಿಳಿಯುವೆನು ।
ಹಿರಿಯರ ಭಾಷಣ ಕೇಳುವೆನು
ಬದುಕನು ಭೂಷಣಗೊಳಿಸುವೆನು ॥



ಪುಸ್ತಕ ಸಂಗ್ರಹ ಮಾಡುವೆನು
ಪುಸ್ತಕ ಪ್ರೇಮಿ ಆಗುವೆನು ।
ಪುಸ್ತಕ ತುಂಬುತ ಬಾಳುವೆನು
ಪುಸ್ತಕ ಸಂಸ್ಕೃತಿ ಉಳಿಸುವೆನು ॥

– ಪರಮೇಶ್ವರಪ್ಪ ಕುದರಿ

## ಶಬ್ದಾರ್ಥ:

| | | |
|---|---|---|
| ಬೀರು – ಕಪಾಟು | ಭೂಷಣ – ಶೋಭೆ | ಜಗ – ವಿಶ್ವ |

## ಮಾತನಾಡೋಣ ಬನ್ನಿ.

೧. ನಿಮ್ಮ ಶಾಲೆಯಲ್ಲಿ ಯಾವ ಯಾವ ಪುಸ್ತಕಗಳು ಇವೆ?

೨. ನಿಮ್ಮ ಪಾಲಕರು ಓದಲು ಯಾವ ಯಾವ ಪುಸ್ತಕಗಳನ್ನು ತಂದು ಕೊಟ್ಟಿದ್ದಾರೆ?

## ಯೋಚಿಸಿ ಬರೆ.

೧) ಬೀರಿನ ತುಂಬ ಏನು ತುಂಬಿವೆ ?

..........................................................................................

೨) ಬಾಲಕನು ತನ್ನ ಮಸ್ತಕವನ್ನು ಯಾವುದರಿಂದ ತುಂಬುವನು?

..........................................................................................

೩) ಜಗದ ಸುದ್ದಿಯನ್ನು ಹೇಗೆ ತಿಳಿಯುವುದು?

..........................................................................................

೪) ಯಾವ ಸಂಸ್ಕೃತಿಯನ್ನು ಉಳಿಸಬೇಕೆಂಬುದು ಕವಿಯ ಆಶಯವಾಗಿದೆ ?

..........................................................................................

## ಪದಬಂಧ ಬಿಡಿಸು.

| | | |
|---|---|---|
| ಮ | | |
| | ಸ್ತ | |
| | | ಕ |

| | | |
|---|---|---|
| ಭೂ | | |
| | ಷ | |
| | | ಣ |

**ಕೆಳಗಿನ ಚಿತ್ರವನ್ನು ನಿರೀಕ್ಷಣೆ ಮಾಡು ಮತ್ತು ನೀನೂ ಭಿತ್ತಿ ಚಿತ್ರ ತಯಾರಿಸಿ ಶಾಲೆಯ ಗೋಡೆಗೆ ಅಂಟಿಸು.**




❖ **ನನ್ನ ಭಿತ್ತಿ ಚಿತ್ರಗಳು.**

(**ಸೂಚನೆ :** ಬೇರೆ ಬೇರೆ ವಿಷಯಗಳ ಕುರಿತು ಮಕ್ಕಳಿಂದ ಆಕರ್ಷಕ ಭಿತ್ತಿಚಿತ್ರಗಳನ್ನು ತಯಾರಿಸಿಕೊಂಡು ಶಾಲೆಯಲ್ಲಿ ಅವುಗಳ ಪ್ರದರ್ಶನವನ್ನು ಏರ್ಪಡಿಸಿರಿ.)

## ಭಾಷೆ ತಿಳಿಯೋಣ ಬಾ:

**ಗುಂಪಿಗೆ ಸೇರುವ ಪದ ಗುರುತಿಸಿರಿ.**

೧) ಚಿನ್ನ, ಬಂಗಾರ, ಸುವರ್ಣ, ......................

ಅ ) ಗಾಳಿ  ಬ ) ಬೆಂಕಿ  ಕ ) ವಾಯು  ಡ) ಕನಕ

೨) ಪ್ರಥಮೇಶ, ಗಣಪತಿ, ಏಕದಂತ ......................

ಅ) ಗೌರಿಸುತ  ಬ) ಮಹಾದೇವ  ಕ) ಶ್ರೀ ಕೃಷ್ಣ  ಡ) ಪರಮೇಶ್ವರ

೩) ಮೊಸರು, ಬೆಣ್ಣೆ, ತುಪ್ಪ, ......................

ಅ) ಸಕ್ಕರೆ  ಬ) ಬೆಲ್ಲ  ಕ) ಸಾಸಿವೆ  ಡ) ಮಜ್ಜಿಗೆ

## ಕೆಳಗಿನ ಆಕೃತಿಯ ಸಹಾಯದಿಂದ ಉದಾಹರಣೆಯಲ್ಲಿ ತೋರಿಸಿದಂತೆ ಪದರಚನೆ ಮಾಡು.




ಉದಾ- ಚರಕ

______

______

______

______

## ಕವಿತೆಯಲ್ಲಿ ಬಂದಿರುವ ವಿಜಾತಿ ಒತ್ತಕ್ಷರಗಳನ್ನು ಹುಡುಕಿ ಬರೆ.

| ............................ | ............................ | ............................ |
| ............................ | ............................ | ............................ |

## ಕೆಳಗಿನ ಚಿತ್ರದಲ್ಲಿಯ ದಿನಪತ್ರಿಕೆಗಳ ಹೆಸರುಗಳನ್ನು ಬರೆ.




ದಿನಪತ್ರಿಕೆಗಳ ಹೆಸರುಗಳು

..........................................

..........................................

..........................................

..........................................

..........................................

- **ದಿನಪತ್ರಿಕೆಯಲ್ಲಿ ಬಂದಿರುವ ಕ್ರೀಡಾಸುದ್ದಿಗಳನ್ನು ವರ್ಗದಲ್ಲಿ ಓದಿ ತೋರಿಸು.**
- **ದಿನಪತ್ರಿಕೆಗಳಲ್ಲಿನ ಶೈಕ್ಷಣಿಕ ಸುದ್ದಿಗಳನ್ನು ಸಂಗ್ರಹಿಸಿ ಅದರಲ್ಲಿನ ವಿಶೇಷ ಸುದ್ದಿಗಳ ಕಟಿಂಗ್‌ಗಳನ್ನು ಶಾಲೆಯ ಭಿತ್ತಿ ಫಲಕದ ಮೇಲೆ ಅಂಟಿಸು.**



ಕೆಳಗಿನ ಗ್ರಂಥಾಲಯದ ಚಿತ್ರವನ್ನು ನಿರೀಕ್ಷಣೆ ಮಾಡಿ ಸಾಹಿತ್ಯ ಪ್ರಕಾರಗಳಿಗೆ ಅನುಗುಣವಾಗಿ ಅಲ್ಲಿನ ಪುಸ್ತಕಗಳ ವರ್ಗೀಕರಣ ಮಾಡಿರಿ.




**ಸೂಚನೆ :** ಇ-ಗ್ರಂಥಾಲಯ (ಇ-ಲೈಬ್ರರಿ) ಕುರಿತು ಮಾಹಿತಿ ಪಡೆದುಕೊಂಡು ವಾಚನದ ಸಲುವಾಗಿ ಅದರ ಬಳಕೆ ಮಾಡಿಕೊಳ್ಳಿರಿ.

ಜಗತ್ತನ್ನು ಸೂರ್ಯ ಬೆಳಗಿದರೆ, ಬದುಕನ್ನು ಪುಸ್ತಕ ಬೆಳಗುತ್ತದೆ

# ೧೪. ಚಿತ್ರಕಥೆ-ಅಜ್ಜಿ ಮತ್ತು ಆನೆಮರಿ











## ಇಲ್ಲಿ ಏನಾಗಿರಬಹುದು





**ಸೂಚನೆ :** ಮಕ್ಕಳಿಗೆ ಚಿತ್ರದ ಸಹಾಯದಿಂದ ಕಥೆಯನ್ನು ಹೇಳಲು ಸಹಾಯ ಮಾಡಿರಿ. ಇಂತಹ ಬೇರೆ ಬೇರೆ ಚಿತ್ರಕಥೆಗಳನ್ನು ತಯಾರಿಸುಕೊಳ್ಳಿರಿ ಮತ್ತು ಕಥೆಯಲ್ಲಿಯ ಪ್ರಶ್ನೆಚಿಹ್ನೆಯ ಸ್ಥಳದಲ್ಲಿ ಏನಾಗಿರಬಹುದು? ಎಂಬುದನ್ನು ಊಹೆ ಮಾಡಲು ಹೇಳಿರಿ.

ಕೂಡಿ ನಡೆ, ಸುಖವ ಪಡೆ

# ೧೫. ಬಾಪೂಜಿ ಮತ್ತು ಅರ್ಧ ಆಣೆ

ಮಹಾತ್ಮ ಗಾಂಧೀಜಿ ನಮ್ಮ ದೇಶದ ರಾಷ್ಟ್ರಪಿತ. ಅವರನ್ನು ಎಲ್ಲರೂ ಪ್ರೀತಿಯಿಂದ 'ಬಾಪೂಜಿ' ಎಂದು ಕರೆಯುತ್ತಿದ್ದರು.

ಒಮ್ಮೆ ಬಾಪೂಜಿ ತಮ್ಮ ಆಶ್ರಮ ಮತ್ತು ಚರಖಾ ಸಂಘದ ಕೆಲಸಕ್ಕಾಗಿ ಹಣ ಸಂಗ್ರಹ ಮಾಡಲು ದೇಶಾದ್ಯಂತ ಪ್ರವಾಸ ಮಾಡುತ್ತಿದ್ದರು. ಬಾಪೂಜಿ ಎಲ್ಲಿಗೆ ಹೋದರೂ, ಅಲ್ಲಿ ಸಾವಿರಾರು ಜನರು ಸೇರುತ್ತಿದ್ದರು. ಎಲ್ಲರೂ ಬಾಪೂಜಿಯ ಜಯ ಜಯಕಾರ ಮಾಡುತ್ತಿದ್ದರು.



ಹೀಗೆ ದೇಶಸಂಚಾರ ಮಾಡುತ್ತ 'ಬಾಪೂಜಿ' ಒಂದು ಊರಿಗೆ ಬಂದರು. ಅಲ್ಲಿ ಸಾಕಷ್ಟು ಜನ ಸೇರಿದ್ದರು. ಆ ಜನಸಂದಣಿಯಲ್ಲಿ ವಯಸ್ಸಾದ ಅಜ್ಜಿಯೊಬ್ಬಳು ಬಂದಿದ್ದಳು. ಅವಳು ಬಾಪೂಜಿಯ ಹತ್ತಿರ ಹೋಗಲು ಪ್ರಯತ್ನಿಸುತ್ತಿದ್ದಳು. ಆಕೆಯ ಬೆನ್ನು ಬಾಗಿತ್ತು, ಕೂದಲೆಲ್ಲ ಬೆಳ್ಳಗಾಗಿತ್ತು. ಹರಿದ, ಮಾಸಿದ ಸೀರೆಯುಟ್ಟು ಬಂದ ಆ ಅಜ್ಜಿಯನ್ನು ಸೇವಕರು ತಡೆದರು. ಬಾಪೂಜಿ ಅದನ್ನು ಗಮನಿಸಿ ತಕ್ಷಣ ಎದ್ದು ಆ ಅಜ್ಜಿಯ ಬಳಿಗೆ ಹೋದರು.



ಅಜ್ಜಿ ಬಾಪೂಜಿಯ ಪಾದಗಳಿಗೆ ನಮಿಸಿದಳು. ತನ್ನ ಸೀರೆ ಸೆರಗಿನಲ್ಲಿ ಕಟ್ಟಿರುವ ಅರ್ಧ ಆಣೆಯನ್ನು ತೆಗೆದು ಅವರ ಕೈಯಲ್ಲಿಟ್ಟಳು. ಬಾಪೂಜಿ ಆಕೆಗೆ ಧನ್ಯವಾದ ಹೇಳಿದರು ಆ ಅರ್ಧ ಆಣೆಯನ್ನು ಗೌರವದಿಂದ ತಮ್ಮ ಬಳಿ ಇಟ್ಟುಕೊಂಡರು. ಆಕೆ ಏನೂ ಮಾತನಾಡದೆ ಶಾಂತವಾಗಿ ಅಲ್ಲಿಂದ ತೆರಳಿದಳು.

ಆಶ್ರಮದ ಲೆಕ್ಕಪತ್ರಗಳನ್ನು ನೋಡುತ್ತಿದ್ದ ಶೇಠ್ ಜಮ್ನಾಲಾಲ್ ಬಜಾಜ್ ಅವರು ಬಾಪೂಜಿಯ ಬಳಿ ಬಂದು, ''ಬಾಪೂಜಿ, ಆ ಅರ್ಧ ಆಣೆಯನ್ನು ಇಂದಿನ ಹಣದ ಜೊತೆ ಸೇರಿಸೋಣವೇ?'' ಕೇಳಿದರು. ಆದರೆ ಬಾಪೂಜಿ ಅದನ್ನು ಕೊಡಲಿಲ್ಲ.

ಜಮ್ನಾಲಾಲಜಿ ಆಶ್ಚರ್ಯದಿಂದ ಕೇಳಿದರು, ''ಬಾಪೂಜಿ, ನೀವು ಸಾವಿರಾರು ರೂಪಾಯಿಗಳನ್ನು ಕೊಟ್ಟಿರುವಿರಿ, ಆದರೆ ಆ ಅರ್ಧ ಆಣೆಯನ್ನು ಏಕೆ ಅಡಗಿಸುತ್ತಿದ್ದೀರಿ?''

ಬಾಪೂಜಿ ಮುಗುಳು ನಗುತ್ತಾ ಹೇಳಿದರು, ''ಈ ಅರ್ಧ ಆಣೆ ಆ ಸಾವಿರ ರೂಪಾಯಿಗಳಿಗಿಂತಲೂ ಅಮೂಲ್ಯವಾದದ್ದು. ಕಾರಣ ಅಜ್ಜಿಗೆ ಇದೇ ಅವಳ ಸರ್ವಸ್ವ. ಅವಳು ತನ್ನ ಸರ್ವಸ್ವವನ್ನೇ ನಮಗೆ ಕೊಟ್ಟಿದ್ದಾಳೆ. ಅವಳ ಮನಸ್ಸು ಎಷ್ಟು ದೊಡ್ಡದು. ಅವಳ ದಾನ ಎಲ್ಲರ ದಾನಕ್ಕಿಂತ ಮಿಗಿಲು.''

## ಶಬ್ದಾರ್ಥ:

| | | |
|---|---|---|
| ಅರ್ಧ ಆಣೆ – ಹಿಂದಿನ ಕಾಲದ ಒಂದು ನಾಣ್ಯ | ಜನಸಂದಣಿ – ಜನಸಮೂಹ | ತೆರಳು – ಹೋಗು |
| ಸಂಗ್ರಹ – ಒಟ್ಟುಗೂಡಿಸು | ಅಮೂಲ್ಯ – ಬೆಲೆಬಾಳುವ | ಮಾಸಿದ – ಹೊಲಸಾದ |
| ಸರ್ವಸ್ವ – ಸಮಸ್ತ ಸ್ವತ್ತು | | |

## ಮಾತನಾಡೋಣ ಬನ್ನಿ.

೧) ನೀನು ಯಾರಿಗಾದರೂ ಏನಾದರು ದಾನ ಮಾಡಿದ್ದೀಯಾ?

೨) ದಾನ ಏಕೆ ಮಾಡಬೇಕು?

## ಗಾಂಧೀಜಿಯವರನ್ನು ಇನ್ನೂ ಯಾವ ಯಾವ ಹೆಸರುಗಳಿಂದ ಕರೆಯುತ್ತಾರೆ? ಬರೆ.

..........................................................................................

..........................................................................................

## ಕೆಳಗಿನ ವಾಕ್ಯಗಳು ಸರಿಯೋ ಅಥವಾ ತಪ್ಪು ಎಂಬುದನ್ನು ಚೌಕಟ್ಟಿನಲ್ಲಿ ಬರೆ.

೧. ಮಹಾತ್ಮ ಗಾಂಧೀಜಿ ನಮ್ಮ ದೇಶದ ರಾಷ್ಟ್ರಪಿತ. [ ]

೨. ಬಾಪೂಜಿಯವರು ಮಹಾರಾಷ್ಟ್ರದಾದ್ಯಂತ ಪ್ರವಾಸ ಮಾಡುತ್ತಿದ್ದರು. [ ]

೩. ಅಜ್ಜಿಯು ಅರ್ಧ ಆಣೆಯನ್ನು ತೆಗೆದು ಗಾಂಧೀಜಿಯವರ ಕೈಯಲ್ಲಿಟ್ಟಳು. [ ]

೪. ಬಾಪೂಜಿ, ನೀವು ಸಾವಿರಾರು ರೂಪಾಯಿಗಳನ್ನು ಕೊಟ್ಟಿಲ್ಲ,ಆದರೆ ಈ ಅರ್ಧ ಆಣೆಯನ್ನು ಏಕೆ ಕೊಟ್ಟಿದ್ದೀರಾ? [ ]

## ಮಹಾತ್ಮ ಗಾಂಧೀಜಿಯವರ ಕೆಳಗಿನ ಮಾಹಿತಿಯನ್ನು ಅಂತರ್ಜಾಲದಿಂದ ಹುಡುಕಿ ಬರೆ.

ಗಾಂಧೀಜಿಯವರ ಪೂರ್ಣ ಹೆಸರು : ..........................................

ಗಾಂಧೀಜಿಯವರ ಜನ್ಮ ದಿನಾಂಕ : ..........................................

ಗಾಂಧೀಜಿಯವರ ತಂದೆ- ತಾಯಿಯ ಹೆಸರು :..................................

ಗಾಂಧೀಜಿಯವರು ದೇಶಕ್ಕಾಗಿ ಮಾಡಿರುವ ಕಾರ್ಯಗಳು : ......................

..........................................................................................

..........................................................................................



**'ನನ್ನ ನೆಚ್ಚಿನ ರಾಷ್ಟ್ರನಾಯಕ' ಈ ವಿಷಯದ ಬಗ್ಗೆ ಯೋಗ್ಯ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಎಂಟರಿಂದ ಹತ್ತು ವಾಕ್ಯಗಳಲ್ಲಿ ನಿಬಂಧ ಬರೆ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**ಭಾಷೆ ತಿಳಿಯೋಣ ಬಾ.**

ಕೆಳಗೆ ಕೊಟ್ಟ ಪದಗಳ ಬೇರೆ ಬೇರೆ ಅರ್ಥಗಳನ್ನು ಕಂಸದಲ್ಲಿ ಕೊಟ್ಟ ಪದಗಳಿಂದ ಹುಡುಕಿ ಬರೆಯಿರಿ.

(ಬಿಡು, ರಾಜ, ನೀರಿನ ಝರಿ, ತಿಳಿ, ಕೈ, ವೈರಿ, ತೆರಿಗೆ, ಹುಡುಕು, ವಿಷ್ಣು, ಹರಿದು ಹಾಕು, ಕೀಳು)

೧) ಅರಿ =.............., ...............

೨) ಕರ =.................., ..................

೩) ಅರಸು =.................., ..................

೪) ತೊರೆ =...................., ....................

೫) ಹರಿ =...................., ..................

**ಕೆಳಗಿನ ಉದಾಹರಣೆಯ ವಾಕ್ಯಗಳಂತೆ ಮೇಲೆ ಕೊಟ್ಟ ಪದಗಳನ್ನು ಬಳಸಿ ಬೇರೆ ಬೇರೆ ಅರ್ಥ ಕೊಡುವ ವಾಕ್ಯಗಳನ್ನು ರಚಿಸು.**

ಉದಾ : ೧) ನದಿಯ ನೀರು ಜುಳು ಜುಳು **ಹರಿ**ಯುತ್ತದೆ.

೨) ದಾಸರು **ಹರಿ**ಯ ಭಜನೆ ಮಾಡುತ್ತಾರೆ.

೩) ವಿಜಯನು ಸಿಟ್ಟಿನಲ್ಲಿ ದಿನಪತ್ರಿಕೆ **ಹರಿ**ದು ಹಾಕಿದನು.

**ಕೆಳಗಿನ ಪರಿಚ್ಛೇದವನ್ನು ಓದಿ ಯೋಗ್ಯ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಬರೆ.**

ಜಮ್ನಾಲಾಲಜಿ ಆಶ್ಚರ್ಯದಿಂದ ಕೇಳಿದರು ಬಾಪೂಜಿ ನೀವು ಸಾವಿರಾರು ರೂಪಾಯಿಗಳನ್ನು ಕೊಟ್ಟಿರುವಿರಿ ಆದರೆ ಆ ಅರ್ಧ ಆಣೆಯನ್ನು ಏಕೆ ಅಡಗಿಸುತಿದ್ದೀರಿ ಬಾಪೂಜಿ ಮುಗುಳು ನಗುತ್ತಾ ಹೇಳಿದರು ಅಯ್ಯಾ ಈ ಅರ್ಧ ಆಣೆ ಆ ಸಾವಿರ ರೂಪಾಯಿಗಳಿಗಿಂತಲೂ ಅಮೂಲ್ಯವಾದದ್ದು ಕಾರಣ ಅಜ್ಜಿಗೆ ಇದೇ ಅವಳ ಸರ್ವಸ್ವ.

ನಿನ್ನ ಶಾಲೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ನಿರೀಕ್ಷಣೆ ಮಾಡು.







ಮಕ್ಕಳ ದಿನಾಚರಣೆಯ ಆಮಂತ್ರಣ ಪತ್ರಿಕೆಯನ್ನು ನಿರೀಕ್ಷಣೆ ಮಾಡು.

## ಆಮಂತ್ರಣ ಪತ್ರಿಕೆ

ಗೆ, ................... .........

...........................

**ಮಕ್ಕಳ ದಿನಾಚರಣೆ**

ಸ್ಥಳ : ಜಿಲ್ಲಾ ಪರಿಷದ ಪ್ರಾಥಮಿಕ ಕನ್ನಡ

ಶಾಲೆ : ............ ತಾ : ............

ಜಿ. : .. ........................

ದಿನಾಂಕ : 14 ನವ್ಹೆಂಬರ್ 2026

**ತಮಗೆ ಆದರದ ಸ್ವಾಗತ**

## ಕಾರ್ಯಕ್ರಮದ ವಿವರ

ಸ್ವಾಗತ : .............................

ಪ್ರಾರ್ಥನಾಗೀತೆ .......................

ಅಧ್ಯಕ್ಷತೆ :...........................

ಉದ್ಘಾಟನೆ :..........................

ಸತ್ಕಾರ : ಕು. .......................

(ಆದರ್ಶ ವಿದ್ಯಾರ್ಥಿ ಪ್ರಶಸ್ತಿ ವಿಜೇತ)

ಸ್ಫೂರ್ತಿ ಭಾಷಣ : ....................

ಬಹುಮಾನ ವಿತರಣೆ :.................

ಅಧ್ಯಕ್ಷೀಯ ಭಾಷಣ : ................

ವಿಶೇಷ ಕಾರ್ಯಕ್ರಮ : ವಿದ್ಯಾರ್ಥಿಗಳ ಸುಂದರ ಸಾಂಸ್ಕೃತಿಕ ಕಾರ್ಯಕ್ರಮಗಳು

ಸಮಾರೋಪ :.........................

ನಿಮ್ಮ ಶಾಲೆಯಲ್ಲಿ ಆಯೋಜಿಸುತ್ತಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಸುಂದರ ಆಮಂತ್ರಣ ಪತ್ರಿಕೆಯನ್ನು ನಿನ್ನ ಸ್ವಂತ ಹಸ್ತಾಕ್ಷರದಲ್ಲಿ ತಯಾರಿಸು.

ನಿಮ್ಮ ಶಾಲೆ ಹಾಗೂ ಪರಿಸರದಲ್ಲಿ ಆಚರಿಸಲಾಗುವ ವಿವಿಧ ಕಾರ್ಯಕ್ರಮ ಪತ್ರಿಕೆಗಳನ್ನು ಅಂತರ್ಜಾಲ, ಪತ್ರಿಕೆ ಹಾಗೂ ಇನ್ನಿತರ ಮೂಲಗಳಿಂದ ಸಂಗ್ರಹಿಸಿರಿ. ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳ ಸ್ವರೂಪದಲ್ಲಿನ ವ್ಯತ್ಯಾಸಗಳ ಕುರಿತು ವರ್ಗದಲ್ಲಿ ಚರ್ಚೆ ಮಾಡಿರಿ.

ಭಾವ ಶುದ್ಧವಿದ್ದರೆ, ಭಾಗ್ಯಕ್ಕೇನು ಕಡಿಮೆ

# ೧೬. ಹಿತನುಡಿ



ದೊರೆತನ ಸಿರಿತನ ಬೇಡಮ್ಮಾ
ಹೆಮ್ಮರವಾಗುವೆ ನಾನಮ್ಮಾ
ಊರಿಗೆ ಆಗುವೆ ಉಪಕಾರಿ
ಆಗೆನು ಎಂದಿಗು ಅಪಕಾರಿ

ಜಡಿಮಳೆ ಜಡಿದರೆ ನನ್ನಲ್ಲಿ
ತರು ಲತೆ ಹೂಗಳು ಅಲ್ಲಲ್ಲಿ
ಚಿಟ್ಟೆಗಳೋಡಿ ಮುತ್ತನು ಇಟ್ಟೊಡೆ
ಕಚಗುಳಿಯಂತೆ ಮೈಯಲ್ಲಿ

ಹಾರುತ ಹಕ್ಕಿ ಬರುತಿಹುದು
ಗೂಡನು ಕಟ್ಟಿ ಇರುತಿಹುದು
ಹಣ್ಗಳ ಕುಕ್ಕಿ ಮನದಣಿ ಉಂಡು
ಮರಿಗಳನಿಲ್ಲೇ ಪೊರೆಯುವುದು

ಓಡುವ ಪಯಣಿಗ ದಣಿಯುವನು
ನೆರಳನು ಕಂಡು ಕೂಡುವನು
ಈ ಮರ ಶಾಂತಿಯ ತಾಣವು ಎಂದು
ವಿರಮಿಸಿ ಮನದಲಿ ನಲಿಯುವನು

ಹಣ್ಗಳ ಸವಿಯುವ ಮಾನವನು
ಕೊಡಲಿಯ ಹಿಡಿಯುವ ದಾನವನು
ಕಡಿದೊಗೆಯುವ ಅವ ಅಪಕಾರಿ
ಅಳಿದರೂ ನಾ ಪರರುಪಕಾರಿ

– ಜಿ. ಎಸ್. ಕುಂಭಾರ

## ಶಬ್ದಾರ್ಥ:

| | | |
|---|---|---|
| ಹೆಮ್ಮರ – ದೊಡ್ಡದಾದ ಮರ, ವೃಕ್ಷ | ಲತೆ – ಬಳ್ಳಿ | ಹಣ್ಗಳ – ಹಣ್ಣುಗಳ |
| ದಣಿದ – ಆಯಾಸಗೊಂಡ | ಅಳಿ – ಹಾಳಾಗು, ನಾಶ | ವಿರಮಿಸು – ವಿಶ್ರಾಂತಿ ಪಡೆ |

## ಮಾತನಾಡೋಣ ಬನ್ನಿ.

೧. ಗಿಡಮರಗಳು ಉಪಕಾರಿ ಹೇಗೆ? ಎಂಬುದನ್ನು ಹೇಳು.

೨. ನೀನು ಉಪಕಾರಿ ಆಗಬೇಕಾದರೆ ಏನೇನು ಮಾಡುವೆ?

## ಯೋಚಿಸಿ ಬರೆ.

೧) ಮಗು ಏನಾಗಲು ಬಯಸುತ್ತದೆ?

..........................................................................................

೨) ಹಕ್ಕಿಯು ಏನನ್ನು ಪೊರೆಯುವದು?

..........................................................................................

೩) ಪಯಣಿಗನು ಮನದಲ್ಲಿ ಹೇಗೆ ನಲಿಯುವನು?

..........................................................................................

೪) ಮಾನವನು ಅಪಕಾರಿ ಹೇಗೆ?

..........................................................................................

## ಕವಿತೆಯಿಂದ ಪ್ರಾಸ ಪದಗಳನ್ನು ಆರಿಸಿ ಬರೆ.

| | | |
|---|---|---|
| ............... – ............... | ............... – ............... | ............... – ............... |
| ............... – ............... | ............... – ............... | ............... – ............... |

**ಕೆಳಗಿನ ಚಿತ್ರಗಳನ್ನು ನೋಡಿ ಮರದಿಂದ ತಯಾರಿಸಿದ ವಸ್ತುಗಳಿಗೆ ಗೋಲು ಹಾಕಿರಿ.**



## ಮಿಶ್ರ ವಾಕ್ಯ

ಒಂದು ಅಥವಾ ಒಂದಕ್ಕಿಂತ ಹೆಚ್ಚು ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವನ್ನು ಮಿಶ್ರವಾಕ್ಯ ಎನ್ನುವರು.

೧) ಗುರುಗಳು ತರಗತಿಗೆ ಬಂದಾಗ, ವಿದ್ಯಾರ್ಥಿಗಳು ಎದ್ದು ನಿಂತರು.

೨) ಯಾರು ಕಷ್ಟಪಟ್ಟು ದುಡಿಯುತ್ತಾರೋ, ಅವರು ಜೀವನದಲ್ಲಿ ಸುಖವಾಗಿರುತ್ತಾರೆ.

೩) ಪರೀಕ್ಷೆ ಮುಗಿಯಿತೆಂದು, ಮಗನು ತಂದೆಗೆ ತಿಳಿಸಿದನು.

೪) ಯಾರು ಕಷ್ಟಪಡುತ್ತಾರೋ ಅವರು ಯಶಸ್ವಿಯಾಗುತ್ತಾರೆ.

೫) ಸಂಗೀತಾ ಹಾಡು ಹಾಡಿದಾಗ, ಎಲ್ಲರೂ ಸಂತೋಷಪಟ್ಟರು.

- **ಕೆಳಗಿನ ವಾಕ್ಯಗಳ ಪ್ರಕಾರವನ್ನು ಗುರುತಿಸಿ ಬರೆ.** (ಸರಳ ವಾಕ್ಯ, ಸಂಯುಕ್ತ ವಾಕ್ಯ, ಮಿಶ್ರ ವಾಕ್ಯ)

೧) ರಾಜನು ಕಾಡಿಗೆ ಹೋದನು ಮತ್ತು ಬೇಟೆಯಾಡಿದನು.

೨) ಸೂರ್ಯನು ಉದಯಿಸಿದಾಗ ಕಮಲವು ಅರಳಿತು.

೩) ಗಿಡದಲ್ಲಿ ಸುಂದರವಾದ ಹೂವುಗಳಿವೆ.

೪)    ಯಾರು ಸತ್ಯವನ್ನು ಹೇಳುತ್ತಾರೋ ಅವರು ಗೌರವಿಸಲ್ಪಡುತ್ತಾರೆ. [ ]

೫)    ನಾವು ಶಾಲೆಗೆ ಹೋದೆವು ಹಾಗೂ ಪಾಠಗಳನ್ನು ಕಲಿತೆವು. [ ]

- **ಕೆಳಗಿನ ವಾಕ್ಯಗಳನ್ನು ಓದಿ ಯೋಗ್ಯ ಪರ್ಯಾಯದ ಎದುರಿಗೆ ★ ಹಾಕು.**

೧)    ನಾಳೆ ಊರಿಗೆ ಹೋಗುತ್ತಿದ್ದೇನೆ.

ಅ) ಸರಳ ವಾಕ್ಯ [ ]    ಆ) ಸಂಯುಕ್ತ ವಾಕ್ಯ [ ]    ಇ) ಮಿಶ್ರ ವಾಕ್ಯ [ ]

೨)    ಅವನು ಪಾಠ ಓದಿದನು ಆದ್ದರಿಂದ ಪರೀಕ್ಷೆ ಬರೆದನು.

ಅ) ಸರಳ ವಾಕ್ಯ [ ]    ಆ) ಸಂಯುಕ್ತ ವಾಕ್ಯ [ ]    ಇ) ಮಿಶ್ರ ವಾಕ್ಯ [ ]

೩)    ಶಿಕ್ಷಕರು ಬಂದಾಗ ವಿದ್ಯಾರ್ಥಿಗಳು ಸುಮ್ಮನಾದರು.

ಅ) ಸರಳ ವಾಕ್ಯ [ ]    ಆ) ಸಂಯುಕ್ತ ವಾಕ್ಯ [ ]    ಇ) ಮಿಶ್ರ ವಾಕ್ಯ [ ]

- **ಕೊಟ್ಟ ಶಬ್ದಗಳನ್ನು ಉಪಯೋಗಿಸಿ ಬಿಟ್ಟ ಸ್ಥಳ ತುಂಬಿರಿ.**

(ಮತ್ತು, ಆದ್ದರಿಂದ, ಅಥವಾ, ಆದರೆ)

೧)    ನಾನು ಚೆನ್ನಾಗಿ ಓದಿದೆ ................ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದವು.

೨)    ನೀನು ಕಾಫಿ ಕುಡಿಯುತ್ತೀಯೋ ................ ಟೀ ಕುಡಿಯುತ್ತೀಯೋ?

೩)    ಬೆಳಿಗ್ಗೆ, ಬೇಗ ಎದ್ದೆನು ................ ವ್ಯಾಯಾಮ ಮಾಡಿದೆನು.

೪)    ಬಸ್ಸು ತಡವಾಗಿ ಬಂತು ....................... ನಾನು ಶಾಲೆಗೆ ತಡವಾಗಿ ಹೋದೆನು.

# ೧೭. ಧ್ವನಿ ಪ್ರದೂಷಣೆ

ಕೇಳ್ರಪ್ಪೋ ss ......ಕೇಳ್ರಿ..........ಕೇಳ್ರಪ್ಪೋ ss........ಕೇಳ್ರಿ..........ದೂರ ಇದ್ದವರು ಹತ್ತಿರ ಬರ್ರಿ, ಹತ್ತಿರ ಇದ್ದವರು ಕುಳಿತುಕೊಳ್ಳಿ

ಇಲ್ಲಿ ಕೇಳ್ರಿ ನಮ್ಮ ಕಷ್ಟ , ನಿಮ್ಮೆಲ್ಲರ ಕಷ್ಟ

ಪರಿಹಾರ ಹುಡುಕಿದರೆ ಮಾತ್ರ

ಜೀವನ ಆಗೋದು ಬೆಸ್ಟ್........ಬೆಸ್ಟ್... ಬೆಸ್ಟ್...

ಇಲ್ಲದಿದ್ದರೆ ಎಲ್ಲರಿಗೂ ಆಗೋದು ನಷ್ಟ.........ನಷ್ಟ........ನಷ್ಟ.....

**ಪಾತ್ರಗಳ ಪರಿಚಯ:**

**ಲೋಕೇಶ** : ನಾನು ಲೋಕೇಶ ಜಿಲ್ಲಾ ಪರಿಷತ್ತಿನ ಕನ್ನಡ ಶಾಲೆಯ ವಿದ್ಯಾರ್ಥಿ.

**ಶಾಂತಪ್ಪ** : ನಾನು ಇದೇ ಊರಿನ ಪ್ರಗತಿಪರ ರೈತ.

**ಜೋಸೆಫ** : ನಾನು ರಾಮಜ್ಜ

**ಪ್ರಕಾಶ** : ನಾನು ಪ್ರಕಾಶ ನಿರೂಪಕ

**ಸಾನಿಯಾ** : ನಾನು ಡಾಕ್ಟರ್

**ರಾಮ** : ನಾನು ಸಮಾಜಸೇವಕ

(ನಾಟಕ ಪ್ರಾರಂಭ)

**ಪ್ರಕಾಶ** : ಏನು ನಿಮ್ಮ ಪ್ರಶ್ನೆ?...ಏನು ನಿಮ್ಮ ಕಷ್ಟ ?



**ಲೋಕೇಶ** : ನನಗೆ ಅಭ್ಯಾಸ ಮಾಡಲು ಮನಸ್ಸೆ ಬರುತ್ತಿಲ್ಲ. ಅಭ್ಯಾಸದ ಸಮಯದಲ್ಲಿ ಬರೀ ಸುತ್ತಮುತ್ತಲು ಡಿಜೆ, ಧ್ವನಿವರ್ಧಕಗಳ ಸದ್ದು ಕೇಳಿಸುವದು. ಅದರಿಂದ ಅಭ್ಯಾಸದ ಕಡೆಗೆ ಗಮನ ಕೊಡಲು ಆಗುತ್ತಿಲ್ಲ.

**ಶಾಂತಪ್ಪ** : ನೀವು ಇಲ್ಲಿ ಸುತ್ತಮುತ್ತಲು ಹಾರಿಸುವ ಪಟಾಕಿ, ಕರ್ಣ ಕರ್ಕಶವಾದ ವಾಹನಗಳ ಹಾರ್ನ್ ಇದರಿಂದ ನನ್ನ ಪ್ರಾಣಿಗಳೆಲ್ಲ ಹೆದರಿ ದೂರ ಓಡಹತ್ತಿವೆ. ಹಾಲು ಸರಿಯಾಗಿ ಕೊಡುವುದಿಲ್ಲ. ನನಗೆ ಜೀವನ ನಡೆಸಲು ತೊಂದರೆಯಾಗುತ್ತಿದೆ.

**ಜೋಸೆಫ** : ಈ ವಾಹನಗಳ ಧ್ವನಿ ಹಾಗೂ ಕಾರ್ಖಾನೆಗಳಿಂದ ಬರುವ ಯಂತ್ರಗಳ ಧ್ವನಿಯಿಂದ ನನ್ನ ಕಿವಿ ಯಾವಾಗಲೂ ನೋಯುತ್ತಿವೆ. ನನಗೆ ರಕ್ತದ ಒತ್ತಡ ಹೆಚ್ಚಾಗಿದೆ, ನಿದ್ರೆಯು ಸರಿಯಾಗಿ ಆಗುವುದಿಲ್ಲ.

**ಪ್ರಕಾಶ** : ಹಾಗಾದರೆ ಈ ಸಮಸ್ಯೆಗಳ ಬಗ್ಗೆ ಡಾಕ್ಟರ್ ಏನು ಹೇಳುತ್ತಾರೆ ಕೇಳೋಣ...




**ಸಾನಿಯಾ** : ಹೌದು ಈ ಧ್ವನಿ ಪ್ರದೂಷಣೆಯ ಕಾರಣದಿಂದ ಶಾಶ್ವತ ಕಿವುಡುತನ, ಹೃದಯದ ಒತ್ತಡ, ನಿದ್ರಾನಾಶ, ಮಾನಸಿಕ ಅಸ್ವಸ್ಥತೆ ಉಂಟಾಗುವದು. ವಿದ್ಯಾರ್ಥಿಗಳ ಅಭ್ಯಾಸದ ಮೇಲೆ, ಪ್ರಾಣಿಗಳ ಮೇಲೆ ಕೂಡ ಪರಿಣಾಮ ಬೀರುವುದು, ಇದರಿಂದ ನಮ್ಮ ಮಾನಸಿಕ, ಸಾಮಾಜಿಕ ಅಸ್ವಸ್ಥತೆ ಹೆಚ್ಚಾಗುವುದು.

**ಪ್ರಕಾಶ** : ಹಾಗಾದರೆ, ಡಾಕ್ಟರ್ ಜನರಿಂದ ನೀವು ಏನನ್ನು ಅಪೇಕ್ಷೆ ಮಾಡಬೇಕು.

**ಸಾನಿಯಾ** : ಅದಕ್ಕೆ ಇಲ್ಲಿ ಬಂದಂತಹ ಸಮಾಜ ಸೇವಕರೇ ಯೋಗ್ಯ ನಿರ್ಧಾರ ತೆಗೆದುಕೊಳ್ಳಬೇಕು.

**ರಾಮ** : ನಾವೆಲ್ಲರೂ ಅನಾವಶ್ಯಕವಾದ ಸದ್ದು ಗದ್ದಲವನ್ನು ನಿಯಂತ್ರಿಸಲು ಪ್ರಯತ್ನಿಸಬೇಕು.

ಡಿಜೆ ಇನ್ನಿತರ ಧ್ವನಿವರ್ಧಕಗಳ ಸೌಂಡನ್ನು ಐವತ್ತು ಡೇಸಿಬಲಕ್ಕಿಂತ ಕಡಿಮೆ ಇಡುವಂತೆ ಕಾನೂನು ಇದೆ. ಅದೇ ತರಹ ನಾವು ಅನಾವಶ್ಯಕವಾಗಿ ವಾಹನಗಳ ಹಾರ್ನ ಬಾರಿಸುವದು, ಪಟಾಕಿಗಳನ್ನು ಹಾರಿಸುವದನ್ನು ಕಡಿಮೆ ಮಾಡಬೇಕು. ನಾವೆಲ್ಲರೂ ನಿಯಮಗಳನ್ನು ಪಾಲಿಸಿದರೆ ನಮ್ಮೆಲ್ಲರ ಆರೋಗ್ಯ ಕಾಪಾಡಿಕೊಳ್ಳಬಹುದು. ಅದಕ್ಕಾಗಿ ನಾವು ಹೆಚ್ಚಿನ ಗಿಡ –ಮರಗಳನ್ನು ಬೆಳೆಸಬೇಕು. ವಾಹನ ಮತ್ತು ಯಂತ್ರಗಳನ್ನು ನಿತ್ಯ ಕಾಳಜಿಯಿಂದ ಬಳಸಿ ಸರಿಯಾದ ಸಮಯಕ್ಕೆ ದುರಸ್ತಿ ಮಾಡಿದರೆ ಪ್ರದೂಷಣೆ ಕಡಿಮೆಯಾಗುವಂತೆ ಮಾಡಬಹುದು.

**ಪ್ರಕಾಶ :** ಹಾಗಾದರೆ, ಎಲ್ಲರೂ ಧ್ವನಿ ಪ್ರದೂಷಣೆಯನ್ನು ತಡೆಯಲು ಸಿದ್ದರಿದ್ದೀರಾ?

**ಜನಸಮೂಹ :** ಹೌದು. ಸಿದ್ಧರಿದ್ದೇವೆ.

**ಘೋಷವಾಕ್ಯಗಳು:**

೧. ಸದ್ದಿಲ್ಲದ ಪರಿಸರ, ಆರೋಗ್ಯಕ್ಕೆ ಹಿತಕರ.

೨. ನೆಮ್ಮದಿಯ ಬದುಕು ಬೇಕು, ಡಿ.ಜೆ. ದ್ವನಿಗೆ ಲಗಾಮು ಹಾಕು.

೩. ಬೇಡ ಬೇಡ ಸದ್ದು ಬೇಡ, ನಡೆಸಲು ನಮಗೆ ಬದ್ಧ ಜೀವನ.

ಎಲ್ಲರಿಗೂ ಧನ್ಯವಾದಗಳು ( ಒಟ್ಟಾಗಿ ಬಾಗಿ)..

## ಶಬ್ದಾರ್ಥ:

| |
|---|
| **ಧ್ವನಿವರ್ಧಕ (ಲೌಡ್ ಸ್ಪೀಕರ್) – ಧ್ವನಿಯನ್ನು ಜೋರಾಗಿ ಕೇಳಿಸುವ ಸಾಧನ** |
| **ಧ್ವನಿ ಪ್ರದೂಷಣೆ – ಹೆಚ್ಚು ಹಾಗೂ ಕರ್ಕಶವಾದ ಸದ್ದುಗಳಿಂದ ಉಂಟಾಗುವ ಪರಿಸರ ಮಾಲಿನ್ಯ** |
| **ಡೆಸಿಬಲ – ಧ್ವನಿಯ ಪ್ರಮಾಣ ಅಳೆಯುವ ಅಳತೆ** |
| **ಕರ್ಕಶ – ಕಿವಿಗೆ ನೋವು ಕೊಡಿಸುವಷ್ಟು ಗಟ್ಟಿಯಾದ, ಕಠಿಣವಾದ ಸದ್ದು** |

## ಮಾತನಾಡೋಣ ಬನ್ನಿ.

೧) ನಿಮ್ಮ ಮನೆಯನ್ನು ಸ್ವಚ್ಛವಾಗಿಡಲು ನೀವು ಏನು ಮಾಡುವಿರಿ?

೨) ಕಸವನ್ನು ನೀವು ಎಲ್ಲಿ ಚೆಲ್ಲುತ್ತೀರಿ?

೩) ಪ್ರದೂಷಣೆಯ ಪ್ರಕಾರಗಳು ಯಾವವು?

## ಯೋಚಿಸಿ ಬರೆ.

- **ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

ಅ) ನಾನು ಇದೇ ಊರಿನ .............................. ರೈತ.

ಆ) ನನಗೆ ........................... ಮಾಡಲು ಮನಸ್ಸೇ ಬರುತ್ತಿಲ್ಲ.

ಇ) ನನಗೆ ರಕ್ತದ ........................... ಹೆಚ್ಚಾಗಿದೆ, ನಿದ್ರೆ ಸರಿಯಾಗಿ ಆಗುವುದಿಲ್ಲ.

ಈ) ನಾವು ............................ ಸದ್ದನ್ನು ನಿಯಂತ್ರಿಸಲು ಪ್ರಯತ್ನಿಸಬೇಕು.

ಉ) ನೆಮ್ಮದಿಯ ಬದುಕು ಬೇಕು ...................... ಲಗಾಮು ಹಾಕು.

## ಯಾರು ಯಾರಿಗೆ ಹೇಳಿದರು?

ಅ) ನನಗೆ ಜೀವನ ನಡೆಸಲು ತೊಂದರೆಯಾಗುತ್ತಿದೆ?

..........................................................................................

ಆ) ಧ್ವನಿ ಪ್ರದೂಷಣೆಯ ಕಾರಣದಿಂದ ಶಾಶ್ವತ ಕಿವುಡುತನ, ಹೃದಯದ ಒತ್ತಡ, ನಿದ್ರಾನಾಶ, ಮಾನಸಿಕ ಅಸ್ವಸ್ಥತೆ ಉಂಟಾಗುವದು, ಅಭ್ಯಾಸದ ಮೇಲೆ ಕೂಡ ದುಷ್ಪರಿಣಾಮ ಬೀರುವುದು.

..........................................................................................

ಇ) ಹಾಗಾದರೆ ಎಲ್ಲರೂ ಧ್ವನಿ ಪ್ರದೂಷಣೆಯನ್ನು ತಡೆಯಲು ಸಿದ್ಧರಿದ್ದೀರಾ?

..........................................................................................

ಈ) ಧ್ವನಿ ಪ್ರದೂಷಣೆಯನ್ನು ನಿಯಂತ್ರಿಸಲು ಏನು ಮಾಡಬೇಕು?

..........................................................................................

## ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಅ) ಪ್ರಗತಿಪರ ರೈತನ ಹೆಸರು ಏನು?

..........................................................................................

ಆ) ವಿದ್ಯಾರ್ಥಿಗಳಿಗೆ ಅಭ್ಯಾಸದ ಕಡೆಗೆ ಏಕೆ ಗಮನ ಕೊಡಲು ಆಗುತ್ತಿಲ್ಲ?

..........................................................................................

ಇ) ಧ್ವನಿ ಪ್ರದೂಷಣೆಯಿಂದ ಯಾವ ಯಾವ ತೊಂದರೆಗಳು ಆಗುತ್ತವೆ?

..........................................................................................

ಈ) ಧ್ವನಿ ಪ್ರದೂಷಣೆಯನ್ನು ನಿಯಂತ್ರಿಸಲು ಏನು ಮಾಡಬೇಕು?

..........................................................................................

- ಇನ್ನೂ ಯಾವ ಯಾವ ಪ್ರದೂಷಣೆಗಳು ಆಗುತ್ತವೆ? ಎಂಬುದರ ಕುರಿತು ಐದು ಆರು ಸಾಲುಗಳಲ್ಲಿ ಬರೆ.
- ನಿಮಗೆ ಗೊತ್ತಿರುವ ಪ್ರದೂಷಣೆಯ ಕುರಿತಾದ ಘೋಷವಾಕ್ಯಗಳ ಭಿತ್ತಿಚಿತ್ರಗಳನ್ನು ತಯಾರಿಸು. ಅವುಗಳನ್ನು ವರ್ಗದ ಗೋಡೆಯ ಮೇಲೆ ಅಂಟಿಸು.

## ಸೂಚನೆಗೆ ಅನುಸಾರವಾಗಿ ಸರಿ ಉತ್ತರದ ಸಂಖ್ಯೆಗೆ ಗೋಲು ◯ ಹಾಕು.

ಅ) ರವಿಯ **ಮೊಬೈಲ್** ಸಂತೆಯಲ್ಲಿ ಕಳೆಯಿತು, ಈ ವಾಕ್ಯದಲ್ಲಿಯ ಗೆರೆ ಹೊಡೆದ ಶಬ್ದಕ್ಕೆ ಕನ್ನಡದ ಯಾವ ಪರ್ಯಾಯ ಪದ ಬಳಸುವಿ?

೧) ಸಂಗಣಕ　　೨) ದೂರಧ್ವನಿ

೩) ಪ್ರಕ್ಷೇಪಕ　　೪) ಭ್ರಮಣಧ್ವನಿ

ಆ) ತಪ್ಪು ಜೋಡಿ ಹುಡುಕು

೧) ಸಂಗಣಕ – ಕಂಪ್ಯೂಟರ್　　೨) ಪ್ರಕಲ್ಪ – ಪ್ರೊಜೆಕ್ಟ್

೩) ಸಂದೇಶ–ಮೆಸೇಜ್　　೪) ಇಂಟರ್ನೆಟ್ – ಸಿರಿಧಾನ್ಯ

ಇ) ಕೆಳಗಿನವುಗಳಲ್ಲಿ ಯಾವ ಪರ್ಯಾಯವು ದ್ವಿರುಕ್ತಿ ಪದವಲ್ಲ.

೧) ವಿಧ ವಿಧ　　೨) ಸಣ್ಣ ಸಣ್ಣ

೩) ರಪರಪ　　೪) ಬಲಾಬಲ



**ಕೆಳಗಿನ ಗಾದೆಮಾತು, ಸುವಿಚಾರ, ಘೋಷವಾಕ್ಯಗಳನ್ನು ನಿಮ್ಮ ಸುಂದರ ಹಸ್ತಾಕ್ಷರಗಳಲ್ಲಿ ಅನುಲೇಖನ ಮಾಡಿರಿ.**

## ● ಗಾದೆ ಮಾತುಗಳು ●

ಕೈ ಕೆಸರಾದರೆ, ಬಾಯಿ ಮೊಸರು.

ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು.

## ● ಸುವಿಚಾರಗಳು ●

ಪ್ರಯತ್ನದಲ್ಲಿ ಫಲವಿದೆ.

ವಾಚನವು ಜ್ಞಾನದ ಬಾಗಿಲು ತೆರೆಸುವ ಕೀಲಿಕೈಯಾಗಿದೆ.

## ● ಘೋಷವಾಕ್ಯಗಳು ●

ಕಲಿತ ನಾರಿ, ಪ್ರಗತಿಗೆ ದಾರಿ

ಪರಿಸರ ರಕ್ಷಣೆ, ನಮ್ಮೆಲ್ಲರ ಹೊಣೆ

ಧ್ವನಿ ಪ್ರದೂಷಣೆ ತಡಿಯಿರಿ, ಆರೋಗ್ಯ ಕಾಪಾಡಿರಿ.

ರಕ್ತದಾನ, ಶ್ರೇಷ್ಠದಾನ

- ಸಂದರ್ಭ ಪುಸ್ತಕ ಹಾಗೂ ಅಂತರ್ಜಾಲದಿಂದ ಗಾದೆಮಾತು, ಸುವಿಚಾರ ಹಾಗೂ ಘೋಷವಾಕ್ಯಗಳನ್ನು ಹುಡುಕಿ ನಿಮ್ಮ ಸುಂದರ ಹಸ್ತಾಕ್ಷರದಲ್ಲಿ ಬರೆದು ನಿಮ್ಮ ವರ್ಗದಲ್ಲಿ ಪ್ರದರ್ಶನ ಮಾಡಿರಿ.

**ಭಾಷೆ ತಿಳಿಯೋಣ ಬಾ:**

ಕೆಳಗಿನ ಬಿಟ್ಟ ಸ್ಥಳಗಳಲ್ಲಿ ಕೊಟ್ಟ ಶಬ್ದದ ಸಮಾನ ಅರ್ಥವಿರುವ ಪದಗಳನ್ನು ಬರೆ.













## ಸಾಮಾನ್ಯ ಅರ್ಥ ಮತ್ತು ವ್ಯವಹಾರಿಕ ಅರ್ಥ

| ಸಾಮಾನ್ಯ ಅರ್ಥ ⟶ ನೇರವಾದ ಅರ್ಥ | ವ್ಯವಹಾರಿಕ ಅರ್ಥ ⟶ ಸಂದರ್ಭಕ್ಕೆ ತಕ್ಕ ಅರ್ಥ |
|---|---|
| ೧. **ಸಾಮಾನ್ಯ ಅರ್ಥ:** ಒಂದು ಶಬ್ದವನ್ನು ನಾವು ಸಾಧಾರಣವಾಗಿ, ಪುಸ್ತಕಗಳಲ್ಲಿ ಅಥವಾ ಮಾತಿನಲ್ಲಿ ಬಳಸುವ ಅರ್ಥವೇ ಸಾಮಾನ್ಯ ಅರ್ಥ. | ೨. **ವ್ಯವಹಾರಿಕ ಅರ್ಥ:** ಒಂದೇ ಶಬ್ದವು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಡುವುದೇ ವ್ಯವಹಾರಿಕ ಅರ್ಥ. |
| **ಉದಾಹರಣೆಗಳು:** | **ಉದಾಹರಣೆಗಳು:** |
| **ಬಾಯಿ** - ಮಾತನಾಡಲು ಬಳಸುವ ಅಂಗ | **ಬಾಯಿ** - ಅವನ ಬಾಯಿ ದೊಡ್ಡದು (ಹೆಚ್ಚು ಮಾತನಾಡುವವನು) |
| **ಕೈ** - ಕೆಲಸ ಮಾಡಲು ಬಳಸುವ ಅಂಗ | **ಕೈ** - ಅವನ ಕೈ ಚೆನ್ನಾಗಿದೆ (ಕೆಲಸ ಚೆನ್ನಾಗಿ ಮಾಡುತ್ತಾನೆ) |
| **ಕಣ್ಣು** - ನೋಡುವ ಅಂಗ | **ಕಣ್ಣು** - ಅವಳು ಕಣ್ಣಿಟ್ಟಳು (ಜಾಗ್ರತೆ ವಹಿಸಿದಳು) |

**ಧ್ವನಿ ಮಾಲಿನ್ಯವು ಕಿವಿಗೆ ಮಾರಕ, ಶಾಂತತೆಯು ಜೀವನಕ್ಕೆ ಪೂರಕ**

# ೧೮. ಸಿರಿಧಾನ್ಯ

ಸಿರಿಧಾನ್ಯ ನಮ್ಮ ಆಹಾರ
ಆರೋಗ್ಯದ ಸುಂದರ ಸಾರ ॥ಪ॥

ಸಿರಿಧಾನ್ಯ ಇರುವ ಸಿರಿಗಳಿವು
ನೋಡಿ ಊದಲು ಸಾಮೆ ಕೊರಲು
ರಾಗಿ ಜೋಳ ನವಣೆ ಸಜ್ಜೆ
ಪ್ರಕೃತಿಯ ಕಡೆ ನಮ್ಮಯ ಹೆಜ್ಜೆ ॥೧॥




ಕಡಿಮೆ ನೀರು ಬೇಕಾಗುವುದು
ಬಿಸಿಲು ಮಳೆಗೆ ಬೆಳೆಯುವುದು
ರೈತರಿಗೆ ಸಹಾಯ ಮಾಡುವುದು
ಭೂಮಿಯ ಸತ್ವ ಕಾಯುವುದು ॥೨॥

ದೇಹಕ್ಕೆ ಬಲ ಎಲುಬಿಗೆ ಶಕ್ತಿ
ಮಕ್ಕಳಿಗೆ ಕೊಡುವುದು ಚುರುಕು ಶಕ್ತಿ
ವಿಧ ವಿಧ ತಿಂಡಿಯ ಮಾಡೋಣ
ದಿನವೂ ಸಿರಿಧಾನ್ಯ ಬಳಸೋಣ ॥೩॥

ಉತ್ತಮ ಆಹಾರ ತಿನ್ನೋಣ
ಆರೋಗ್ಯದ ದಾರಿ ಹಿಡಿಯೋಣ
ಬಳಸುತ್ತ ಬೆಳೆಯುವ ಸಿರಿಧಾನ್ಯ
ಸದೃಢತೆಯ ಪಡೆದು ಆಗೋಣ ಧನ್ಯ ॥೪॥

## ಶಬ್ದಾರ್ಥ:

| | |
|---|---|
| ಸಾರ-ಸತ್ವ<br>ತನು-ದೇಹ, ಶರೀರ<br>ಚುರುಕು -ಚತುರತೆ | ಸದೃಢ-ಗಟ್ಟಿಯಾದ<br>ಸಿರಿಧಾನ್ಯಗಳು - ರಾಗಿ, ಜೋಳ, ನವಣೆ, ಸಜ್ಜೆ, ಊದಲು, ಸಾಮೆ, ಕೊರಲು. |

## ಮಾತನಾಡೋಣ ಬನ್ನಿ.

೧) ಮನೆಯಲ್ಲಿ ನೀನು ಯಾವ ಯಾವ ಸಿರಿಧಾನ್ಯಗಳನ್ನು ನೋಡಿರುವೆ?

೨) ಹೊರಗಿನ, ತೆರೆದಿಟ್ಟ ಆಹಾರ ತಿನ್ನುವದರಿಂದ ಏನಾಗುತ್ತದೆ ಹೇಳಿ?

೩) ಸಿರಿಧಾನ್ಯಗಳಿಂದ ಯಾವ ಯಾವ ತಿಂಡಿಗಳನ್ನು ಮಾಡುತ್ತಾರೆ?

## ಪದ್ಯದ ಸಾಲುಗಳನ್ನು ಪೂರ್ಣ ಮಾಡು :

ಉತ್ತಮ ..............................................................................

..............................................................................

..............................................................................

.................................................................. ಆಗೋಣ ಧನ್ಯ॥

## ಕೆಳಗಿನ ಉದಾಹರಣೆಯ ಶಬ್ದ ಉತ್ತರವಾಗಿ ಬರುವಂತೆ ಪ್ರಶ್ನೆ ತಯಾರಿಸು.

**ಉದಾ :** ಸಿರಿಧಾನ್ಯ

**ಪ್ರಶ್ನೆ:** ಯಾವುದು ನಮ್ಮ ಆಹಾರ?

೧) ರೈತರಿಗೆ. ಪ್ರಶ್ನೆ: .................................................... ?

೨) ಭೂಮಿಯ. ಪ್ರಶ್ನೆ: .................................................... ?

೩) ಮಕ್ಕಳಿಗೆ. ಪ್ರಶ್ನೆ: .................................................... ?

೪) ಆರೋಗ್ಯದ. ಪ್ರಶ್ನೆ: .................................................... ?

## ಸಿರಿ ಧಾನ್ಯಗಳ ಮಹತ್ವವನ್ನು ಕವಿತೆಯ ಸಹಾಯದಿಂದ ೬ರಿಂದ ೮ ವಾಕ್ಯಗಳಲ್ಲಿ ಬರೆ.

..............................................................................

..............................................................................

..............................................................................

..............................................................................

**ಕೆಳಗೆ ಕೊಟ್ಟ ಸಿರಿಧಾನ್ಯಗಳಲ್ಲಿ ಯಾವ ಯಾವ ಪೋಷಕಾಂಶಗಳಿವೆ ಎಂಬುದನ್ನು ಅಂತರ್ಜಾಲದ ಸಹಾಯದಿಂದ ಹುಡುಕಿ ಬರೆ.**






| ಸಿರಿ ಧಾನ್ಯಗಳು | ಜೋಳ | ಸಜ್ಜೆ | ರಾಗಿ | ನವಣೆ |
|---|---|---|---|---|
| ಪೋಷಕಾಂಶಗಳು | | | | |

**ಭಾಷೆ ತಿಳಿಯೋಣ ಬಾ:**

- **ಕೆಳಗೆ ಕೊಟ್ಟ ದೊಡ್ಡ ಶಬ್ದಚೀಲಗಳಲ್ಲಿನ ಶಬ್ದಗಳನ್ನು ವಿಂಗಡಿಸಿ ಚಿಕ್ಕ ಚೀಲದಲ್ಲಿ ಬರೆ.**





ನಾಮಪದ


ಸರ್ವನಾಮ


ವಿಶೇಷಣ


ಕ್ರಿಯಾಪದ

**ಮೊಳಕೆ ಬರಿಸಿದ ಕಾಳುಗಳಿಂದ ಭೇಳ್ ತಯಾರಿಸುವ ವಿಧಾನ ಬರೆ.**

**ಸಾಮಗ್ರಿಗಳು :** ಮೊಳಕೆ ಬರಿಸಿದ ಕಾಳು [ಹೆಸರು, ಕಡಲೆ, ನೆಲಗಡಲೆ(ಶೇಂಗಾ), ಹುರಳಿ, ಮೂಕಣಿ ಇತ್ಯಾದಿ] ಸಣ್ಣಗೆ ಕತ್ತರಿಸಿದ ಈರುಳ್ಳಿ, ಟೊಮೇಟೊ, ಸೌತೆಕಾಯಿ, ಕೊತ್ತಂಬರಿ, ಉಪ್ಪು, ಖಾರ, ಚಾಟ್ ಮಸಾಲೆ, ಸಕ್ಕರೆ, ನಿಂಬೆಹಣ್ಣು.



**ನಿಮ್ಮ ಎದುರಿಗೆ ಜೋಳ, ರಾಗಿ, ಸಜ್ಜೆ ಈ ಸಿರಿ ಧಾನ್ಯಗಳಿವೆ ಅವುಗಳ ಮಹತ್ವ ಹಾಗೂ ಅವುಗಳಲ್ಲಿ ಇರುವಂಥ ಪೋಷಕಾಂಶಗಳ ಕುರಿತು ಆ ಸಿರಿಧಾನ್ಯಗಳೊಂದಿಗೆ ಮಾತನಾಡುತ್ತಿರುವಂತೆ ಕಲ್ಪಿಸಿಕೊಂಡು ಒಂದು ಸಂವಾದ ರಚಿಸು.**

ವಿದ್ಯಾರ್ಥಿ : ಓ! ಜೋಳವೆ ನೀನೇನು ಇಲ್ಲಿ?

ಜೋಳ : ನಾನು ನಿನ್ನನ್ನೆ ನೋಡಲೆಂದು ಬಂದೆ.

ವಿದ್ಯಾರ್ಥಿ : ................................................................................

ಜೋಳ : ................................................................................

**ಉತ್ತಮ ಆಹಾರ ಆರೋಗ್ಯಕ್ಕೆ ಆಧಾರ**

# ೧೯. ಇವುಗಳಿಗೆ ತಡೆ ಇಲ್ಲವೆ?





**ಸೂಚನೆ:** ವಿದ್ಯಾರ್ಥಿಗಳಿಂದ ಚಿತ್ರ ನಿರೀಕ್ಷಣೆ ಮಾಡಲು ಹೇಳಿ ಮತ್ತು ಈ ಚಿತ್ರದಲ್ಲಿ ಕಂಡು ಬರುವ ಮಾಲಿನ್ಯದ ಬಗ್ಗೆ ಚರ್ಚೆ ಮಾಡಿರಿ.

# ೨೦. ಅಮೂಲ್ಯ ಉಡುಗೊರೆ

ಜಾಗೃತಿ ಹೊಸ ಶಾಲೆಗೆ ಸೇರಿದಳು. ಕೆಲವೇ ದಿನಗಳಲ್ಲಿ ಅವಳು ಎಲ್ಲರಿಗೂ ಪ್ರಿಯಳಾದಳು. ಶೆಫಾಲಿ, ದಿಯಾ ಮತ್ತು ತರುಣ್ ಅವಳಿಗೆ ಒಳ್ಳೆಯ ಸ್ನೇಹಿತರಾದರು.

ಒಂದು ದಿನ ಶೆಫಾಲಿ ನಿಧಾನವಾಗಿ ಕೇಳಿದಳು, ''ಜಾಗೃತಿಯ ಹುಟ್ಟುಹಬ್ಬ ಹತ್ತಿರವಿದೆ, ಏನು ಮಾಡೋಣ?'' ಎಂದಾಗ ತರುಣ್ ''ಅವಳಿಗೆ ಸರ್ಪ್ರೈಸ್ ಕೊಡೋಣ'' ಎಂದನು.

''ಅವಳ ಮನೆಗೆ ಕೇಕ್ ತೆಗೆದುಕೊಂಡು ಹೋಗಿ ಅವಳಿಂದ ಅದನ್ನು ಕತ್ತರಿಸೋಣವೇ?'' ಎಂದು ಶೆಫಾಲಿ ಕೇಳಿದಾಗ ದಿಯಾ ತಲೆ ಆಡಿಸಿದಳು.

ಆದರೆ ಜಾಗೃತಿ ಯಾರನ್ನೂ ಮನೆಗೆ ಕರೆಯುವುದಿಲ್ಲ. ಅವಳಿಗೆ ಅದು ಇಷ್ಟವಿಲ್ಲ ಎಂಬುದು ಅವರಿಗೆಲ್ಲ ಗೊತ್ತಿತ್ತು. ಸ್ನೇಹಿತರೆಲ್ಲ ತುಂಬಾ ಯೋಚಿಸಿ ಕೊನೆಗೊಂದು ನಿರ್ಧಾರ ಮಾಡಿದರು. ಜಾಗೃತಿಗೆ ತಿಳಿಯದಂತೆ ಅವಳ ಮನೆಗೆ ಹೋಗಿ ಮನೆಯನ್ನು ಅಲಂಕರಿಸೋಣ ಎಂದರು.

ಹುಟ್ಟುಹಬ್ಬದ ದಿನ ಸಾಯಂಕಾಲ ಅವರೆಲ್ಲ ಕೇಕ್ ಮತ್ತು ಅಲಂಕಾರದ ವಸ್ತುಗಳನ್ನು ತೆಗೆದುಕೊಂಡು ಜಾಗೃತಿಯ ಮನೆಗೆ ಹೋದರು. ಆಗ ಜಾಗೃತಿ ಮನೆಯಲ್ಲಿರಲಿಲ್ಲ. ಇವರೆಲ್ಲ ಅಲ್ಲಿಗೆ






ಹೋದಾಗ ಮನೆಯ ಬಾಗಿಲು ತೆರೆದಿತ್ತು. ಬಾಗಿಲನ್ನು ತಟ್ಟಿ ಅವರು 'ಅಮ್ಮಾಽಽ' ಎಂದು ಕೂಗಿದರು. ಒಳಗಿನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ, ಆಗ ಮಕ್ಕಳೆಲ್ಲ ಒಳಗೆ ಹೋದರು. ಅಲ್ಲಿ ಜಾಗೃತಿಯ ಅಮ್ಮ ನಿರ್ಮಲಾ ಲ್ಯಾಪ್ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಶೆಫಾಲಿ ಅವರ ಭುಜ ಮುಟ್ಟಿದಳು. ಆಗ ನಿರ್ಮಲಾ ಅವಳ ಕಡೆ ನೋಡಿದರು.

''ಅಮ್ಮಾ ನಾವು ಜಾಗೃತಿಯ ಸ್ನೇಹಿತರು, ಅವಳ ಹುಟ್ಟುಹಬ್ಬ ಆಚರಿಸಲು ಬಂದಿದ್ದೇವೆ. ನಾವು ಈ ಗೋಡೆಯನ್ನು ಅಲಂಕರಿಸಬಹುದೇ?'' ಎಂದು ಕೇಳಿದರು. ನಿರ್ಮಲಾ ನಗುತ್ತಾ ತಲೆದೂಗಿದಳು.

ಮಕ್ಕಳು ಅವರ ಕಡೆಗೆ ಆಶ್ಚರ್ಯದಿಂದ ಇವರಿಗೆ ನಾವು ಹೇಳಿದ್ದು ತಿಳಿಯಿತೋ ಇಲ್ಲವೋ ಎಂದು ಯೋಚಿಸತೊಡಗಿದರು. ಆಗ ನಿರ್ಮಲಾ ಪಾಟಿಯ ಮೇಲೆ, ''ನನಗೆ ಕಿವಿ ಕೇಳಿಸುತ್ತದೆಯೋ ಇಲ್ಲವೋ ಎಂದು ನೀವು ಯೋಚಿಸುತ್ತಿದ್ದೀರಾ?'' ಎಂದು ಬರೆದು ತೋರಿಸಿದರು. ಆಗ ಎಲ್ಲರೂ ಮುಖ ಮುಖ ನೋಡತೊಡಗಿದರು. ನಿರ್ಮಲಾ ನಗುತ್ತಾ, ''ಹೌದು ನನಗೆ ಕೇಳಿಸುವುದಿಲ್ಲ, ಮಾತನಾಡಲೂ

ಬರುವುದಿಲ್ಲ, ತುಟಿಗಳ ಚಲನೆ ಹಾಗೂ ಸಂಕೇತಗಳಿಂದ ಅರ್ಥ ಮಾಡಿಕೊಳ್ಳುತ್ತೇನೆ'' ಎಂದು ಬರೆದು ತೋರಿಸಿದರು.

ಇದರ ಬಗ್ಗೆ ಜಾಗೃತಿ ನಮಗೇನು ಹೇಳಲಿಲ್ಲ ಎಂದು ಮಕ್ಕಳು ಸನ್ನೆ ಮಾಡಿ ಹೇಳಿದರು. ''ಹೌದು ನಾನೇ ಅವಳಿಗೆ ಹೇಳಬೇಡ ಅಂತ ಹೇಳಿದ್ದೆ, ಕಾರಣ ಈ ಹಿಂದಿನ ಶಾಲೆಯಲ್ಲಿ ಅವಳು ನೋವು ಅನುಭವಿಸಿದ್ದಳು'' ಎಂದು ನಿರ್ಮಲ ಹೇಳಿದರು. ''ನಾನು ನಮಗಾಗಿ ಇರುವ ವಿಶೇಷ ಶಾಲೆಯಲ್ಲಿ ಓದಿದ್ದೇನೆ'' ಎಂದು ಅವರು ತಮ್ಮ ಸಾಂಕೇತಿಕ ಭಾಷೆಯಲ್ಲಿ ಹೇಳಿದರು.

''ನಾನೂ ಸಹಾಯ ಮಾಡಲೇ? ಜಾಗೃತಿ ಬರುವ ಹೊತ್ತಾಗಿದೆ'' ಎಂದು ಅವರು ಕೇಳಿದಾಗ ಮಕ್ಕಳೆಲ್ಲ ಸಂತೋಷದಿಂದ ಒಪ್ಪಿಕೊಂಡರು. ಎಲ್ಲರೂ ಸೇರಿ ಅಲಂಕಾರ ಮಾಡಿದರು.

ಅಷ್ಟರಲ್ಲಿ ಹಳದಿ ಬೆಳಕು ಮಿನುಗಿತು. ಜಾಗೃತಿ ಮನೆಗೆ ಬಂದಳು. 'ಸರ್ಪ್ರೈಸ್'!!! ಎಂದು ಸ್ನೇಹಿತರೆಲ್ಲ ಕೂಗಿದರು. ಜಾಗೃತಿಗೆ ತುಂಬಾ ಸಂತೋಷವಾಯಿತು. ಅವಳು ಖುಷಿಯಿಂದ ಕೇಕ್ ಕತ್ತರಿಸಿದಳು. ಒಬ್ಬರಿಗೊಬ್ಬರು ಕೇಕ್ ತಿನ್ನಿಸಿ ಸಂಭ್ರಮಿಸಿದರು. ಆಗ ಜಾಗೃತಿಯ ಕಣ್ಣಿಂದ ಆನಂದಾಶ್ರು ಹರಿದವು. ನೀವೆಲ್ಲ ನನ್ನ ತಾಯಿಯೊಂದಿಗೆ ಅವಳದೇ ಭಾಷೆಯಲ್ಲಿ ಮಾತನಾಡಿ ಅವಳಿಗೆ ಖುಷಿ ನೀಡಿದ್ದೀರಿ. ಇದೇ ನನಗೆ ಸಿಕ್ಕ ಅಮೂಲ್ಯ ಉಡುಗೊರೆ ಎಂದು ಜಾಗೃತಿ ಹೇಳಿದಳು.

## ಶಬ್ದಾರ್ಥ:

| | |
|---|---|
| ಸರ್ಪ್ರೈಸ್ – ಅಚ್ಚರಿ | ಪ್ರತಿಕ್ರಿಯೆ – ಉತ್ತರ / ಪ್ರತಿಸ್ಪಂದನೆ |
| ಅಲಂಕಾರ – ಸಿಂಗಾರ | ಸಂಕೇತ – ಸೂಚನೆ |
| ನಿರ್ಧಾರ – ತೀರ್ಮಾನ | ಸಂಕೇತ ಭಾಷೆ – ಕೈಚಲನೆಗಳಿಂದ ಮಾತನಾಡುವ ಭಾಷೆ. |

## ಮಾತನಾಡೋಣ ಬನ್ನಿ.

೧. ಜಾಗೃತಿಯ ಸ್ನೇಹಿತರು ಅವಳಿಗೆ ಸರ್ಪ್ರೈಸ್ ನೀಡಲು ಯೋಜನೆ ಮಾಡಿದ್ದರಲ್ಲವೇ? ನೀವು ಎಂದಾದರೂ ನಿಮ್ಮ ಸ್ನೇಹಿತರಿಗೆ ಇಂತಹ ಸರ್ಪ್ರೈಸ್ ನೀಡಿದ್ದೀರಾ? ಇದ್ದರೆ ಆ ಅನುಭವ ಹಂಚಿಕೊಳ್ಳಿ.

೨. ಒಂದು ವೇಳೆ ನಿಮಗೆ ಮಾತನಾಡಲು ಅಥವಾ ಕೇಳಲು ಬರುವದಿಲ್ಲ ಎಂದು ಕಲ್ಪಿಸಿಕೊಂಡು ನಿಮ್ಮ ಅಗತ್ಯಗಳನ್ನು ಇತರರಿಗೆ ಹೇಗೆ ತಿಳಿಸುತ್ತೀರಿ? ಸನ್ನೆಗಳ ಮೂಲಕ ಮಾಡಿ ತೋರಿಸಿ.

೩. ಕೇವಲ ಉಡುಗೊರೆಗಳನ್ನು ನೀಡುವುದಷ್ಟೇ ಹುಟ್ಟುಹಬ್ಬದ ಸಂಭ್ರಮವೇ? ಅಥವಾ ಜಾಗೃತಿಯ ಗೆಳೆಯರು ಮಾಡಿದಂತೆ ಪ್ರೀತಿ ತೋರಿಸುವುದು ಮುಖ್ಯವೇ? ನಿನ್ನ ಅನಿಸಿಕೆ ಹೇಳು.

೪. ಜಾಗೃತಿಯ ತಾಯಿ ನಿರ್ಮಲಾ ಅವರು ಲ್ಯಾಪ್ಟಾಪ್‌ನಲ್ಲಿ ಕೆಲಸ ಮಾಡುವುದನ್ನು ಕಂಡು ನಿಮಗೆ ಏನು ಅನ್ನಿಸಿತು? ದೈಹಿಕ ಸವಾಲುಗಳಿದ್ದರೂ ಅವರು ಸಾಧನೆ ಮಾಡುತ್ತಿರುವುದು ನಿಮಗೆ ಏನು ಕಲಿಸುತ್ತದೆ?

## ಯೋಚಿಸಿ ಬರೆ.

೧. ಜಾಗೃತಿ ತನ್ನ ತಾಯಿಯ ಬಗ್ಗೆ ಸ್ನೇಹಿತರಿಗೆ ಮೊದಲೆ ಏಕೆ ತಿಳಿಸಿರಲಿಲ್ಲ? ಅವಳ ಮನಸ್ಸಿನ ಭಯ ಏನು ಇರಬಹುದು?

..........................................................................................

..........................................................................................

೨. ಜಾಗೃತಿಯ ಸ್ನೇಹಿತರು ಅವಳ ಮನೆಗೆ ಹೋಗಿ ಏನು ಮಾಡಿದರು? ಆ ಕೆಲಸದ ಬಗ್ಗೆ ನಿಮ್ಮ ಅಭಿಪ್ರಾಯವೇನು?

..........................................................................................

..........................................................................................

## ನಿಮ್ಮ ಮುಂದೆ ಇಂತಹ ಸಂದರ್ಭ ಬಂದರೆ ಏನು ಮಾಡುತ್ತೀರಿ?

೧. ನಿಮ್ಮ ತರಗತಿಗೆ ಕಿವಿ ಕೇಳಿಸದ ಮಗು ಹೊಸದಾಗಿ ಸೇರಿದರೆ, ನೀವು ಅವರೊಂದಿಗೆ ಸ್ನೇಹ ಬೆಳೆಸಲು ಯಾವ ಮಾರ್ಗಗಳನ್ನು ಬಳಸುತ್ತೀರಿ?

..........................................................................................

..........................................................................................

೨. ಕಥೆಯಲ್ಲಿ ಹಳದಿ ಬೆಳಕು ಮಿನುಗಿದಾಗ ಜಾಗೃತಿ ಮನೆಗೆ ಬಂದಳು ಎಂದು ಉಲ್ಲೇಖವಿದೆ. ಸಾಮಾನ್ಯ ಮನೆಗಳಲ್ಲಿ ಕರೆ ಗಂಟೆ ಇರುತ್ತದೆ. ಆದರೆ ನಿರ್ಮಲಾ ಅವರ ಮನೆಯಲ್ಲಿ ಬೆಳಕು ಏಕಿರಬಹುದು? ಆಲೋಚಿಸಿ ಬರೆಯಿರಿ.

..........................................................................................

..........................................................................................

## ಭಾಷೆ ತಿಳಿಯೋಣ ಬಾ.

**ಕೆಳಗಿನ ವಾಕ್ಯದಲ್ಲಿನ ಕರ್ತೃ, ಕರ್ಮ, ಕ್ರಿಯಾಪದ, ವಿಶೇಷಣಗಳನ್ನು ಗುರುತಿಸು.**

೧) ಜಾಗೃತಿ ಹೊಸ ಶಾಲೆಗೆ ಸೇರಿದಳು.

ಕರ್ತೃ– ........................ ಕರ್ಮ – ........................

ಕ್ರಿಯಾಪದ – ........................ ವಿಶೇಷಣ – ........................

೨) ಜಾಗೃತಿಯ ಕಣ್ಣಿಂದ ಆನಂದಾಶ್ರು ಹರಿದವು.

ಕರ್ತೃ – ........................ ಕರ್ಮ– ........................

ಕ್ರಿಯಾಪದ– ........................ ವಿಶೇಷಣ – ........................

೩) ಮನೆಯಲ್ಲಿ ಹಳದಿ ಬೆಳಕು ಮಿನುಗಿತು.

ಕರ್ತೃ– ........................ ಕರ್ಮ – ........................

ಕ್ರಿಯಾಪದ – ........................ ವಿಶೇಷಣ – ........................

- **ಕೊಟ್ಟ ವಾಕ್ಯಗಳ ಪ್ರಕಾರಗಳನ್ನು ಗುರುತಿಸಿ ಬರೆ. (ಸರಳ ವಾಕ್ಯ, ಸಂಯುಕ್ತ ವಾಕ್ಯ, ಮಿಶ್ರ ವಾಕ್ಯ)**

೧) ಅಮ್ಮ ನಾವು ಜಾಗೃತಿಯ ಸ್ನೇಹಿತರು. ......................

೨) ಹುಟ್ಟು ಹಬ್ಬದ ದಿನ ಸಾಯಂಕಾಲ ಅವರೆಲ್ಲ ಕೇಕ್ ಮತ್ತು ಅಲಂಕಾರದ ವಸ್ತುಗಳನ್ನು ತೆಗೆದುಕೊಂಡು ಜಾಗೃತಿಯ ಮನೆಗೆ ಹೋದರು. ......................

೩) ನೀವೆಲ್ಲ ನನ್ನ ತಾಯಿಯೊಂದಿಗೆ ಅವಳದೇ ಭಾಷೆಯಲ್ಲಿ ಮಾತನಾಡಿ ಅವಳಿಗೆ ಖುಷಿ ನೀಡಿದ್ದೀರಿ. .................

- **ಕೆಳಗಿನ ಗದ್ಯಭಾಗವನ್ನು ಓದಿ, ಅನುಲೇಖನ ಮಾಡಿ ಅದಕ್ಕೆ ಯೋಗ್ಯ ತಲೆಬರಹ ಕೊಡಿ.**

ನಾವು ವಾಸಿಸುವ ಮನೆಯನ್ನು ಶುಚಿಯಾಗಿಟ್ಟುಕೊಳ್ಳುವುದೂ ಒಂದು ಕಲೆ. ಹಿತಮಿತವಾದ ಅಲಂಕಾರ ಮನೆಗೆ ಶೋಭೆ ತರುತ್ತದೆ. ಪ್ರತಿಯೊಂದು ವಸ್ತುವನ್ನು ತಕ್ಕಸ್ಥಾನದಲ್ಲಿಯೇ ಇಡಬೇಕು. ಉಡುಗೆ-ತೊಡುಗೆಗಳನ್ನು ಕಪಾಟಿನಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟುಕೊಳ್ಳಬೇಕು. ಬಳಸದ ಬಟ್ಟೆಗಳನ್ನು ಗಂಟು ಕಟ್ಟಿಡದೆ ಚೊಕ್ಕಟವಾಗಿ ಮಡಿಕೆ ಮಾಡಿ ಇಡಬೇಕು. ಅಲಂಕಾರದ ಸಾಮಗ್ರಿಗಳನ್ನು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿಸಾಡದೆ ಕನ್ನಡಿಯ ಮುಂದೆ ಸರಿಯಾಗಿ ಇಟ್ಟುಕೊಳ್ಳಬೇಕು. ಆಗ ಅವು ಸುರಕ್ಷಿತವಾಗಿರುತ್ತವೆ. ಇಂತಹ ಎಷ್ಟೋ ಕೆಲಸಗಳು ಮನೆಯ ಅಲಂಕಾರದಲ್ಲಿ ಬರುತ್ತವೆ. ಎಲ್ಲವನ್ನೂ ಸಮಯಕ್ಕೆ ಸರಿಯಾಗಿ ಮಾಡುತ್ತ ಬರುವುದು ಒಂದು ಒಳ್ಳೆಯ ಹವ್ಯಾಸ. ಈ ಹವ್ಯಾಸವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು.

- ನಿಮ್ಮ ಕಲ್ಪನೆಯ 'ಸಂತಸದ ಹುಟ್ಟುಹಬ್ಬ'ದ ಚಿತ್ರ ಬಿಡಿಸಿ ಅಥವಾ ನಿಮ್ಮ ಸ್ನೇಹಿತರಿಗೆ ನೀಡಲು ಇಷ್ಟಪಡುವ ಒಂದು ಸುಂದರ ಉಡುಗೊರೆಯ ಚಿತ್ರ ಬಿಡಿಸಿ ಅದಕ್ಕೆ ಬಣ್ಣ ಹಚ್ಚಿ.



**ಸೂಚನ :** ನಿಮ್ಮ ಹುಟ್ಟು ಹಬ್ಬದ ಆಮಂತ್ರಣ ಪತ್ರಿಕೆಯನ್ನು ತಯಾರಿಸಿ ನಿಮ್ಮ ಗೆಳೆಯರ ಬಳಗಕ್ಕೆ ಹಂಚಿರಿ.

# ‘ಅಸಾಧ್ಯವೆಂಬ ಬದುಕಿಗೆ ಅರ್ಥ ಕೊಟ್ಟ ಬಾಲಕಿ’




**ಕೀಯಾ ಹಟ್ಕರ್ ಅಪರೂಪದ ಸ್ಪೈನಲ್ ಮಸ್ಕುಲರ್ ಆಟ್ರೋಫಿ (SMA) ರೋಗದಿಂದ ಬಳಲುತ್ತಿದ್ದರೂ ಅಪಾರ ಧೈರ್ಯದಿಂದ ಬದುಕನ್ನು ಎದುರಿಸಿದ ಸಾಧಕಿ.**

ಈ ರೋಗದಿಂದ ನಡೆಯಲು ಹಾಗೂ ಚಲಿಸಲು ಅಸಾಧ್ಯವಾಗಿದ್ದರೂ ಅವಳು ಎಂದಿಗೂ ಹತಾಶೆಯಾಗಲಿಲ್ಲ.

ತನ್ನ ರೋಗಕ್ಕೆ ದೂರದೆ, ತನ್ನೊಳಗಿನ ಶಕ್ತಿಯನ್ನು ಗುರುತಿಸಿಕೊಂಡು ಮುನ್ನಡೆದಳು.

ವ್ಹೀಲ್‌ಚೇರಿನಲ್ಲಿದ್ದರೂ ಸಂತೋಷದ ಬದುಕು ಸಾಧ್ಯವೆಂದು ತನ್ನ ಬದುಕಿನ ಮೂಲಕ ಸಮಾಜಕ್ಕೆ ತೋರಿಸಿದಳು.

ಚಿಕ್ಕ ವಯಸ್ಸಿನಲ್ಲೇ ಅವಳು ಪ್ರತಿಭಾವಂತ ಲೇಖಕಿಯಾಗಿ ಗುರುತಿಸಿಕೊಂಡು ಪುಸ್ತಕಗಳನ್ನು ಬರೆದಳು.

‘DANCING ON MY WHEELS’ ಕೃತಿಯಲ್ಲಿ ತನ್ನ ಜೀವನ ಕಥೆಯನ್ನು ಮನಮುಟ್ಟುವಂತೆ ವಿವರಿಸಿದ್ದಾಳೆ.

‘I M POSSIBLE’ ಪುಸ್ತಕದ ಮೂಲಕ ಅಸಾಧ್ಯವನ್ನೂ ಸಾಧ್ಯ ಮಾಡಬಹುದು ಎಂಬ ಆತ್ಮವಿಶ್ವಾಸ ತುಂಬಿದ್ದಾಳೆ. ಮೂರನೆಯ ಪುಸ್ತಕ ‘BOOK ON HOW TO WRITE A BOOK’ ಇದರಲ್ಲಿ ಮಕ್ಕಳಿಗೆ ಪುಸ್ತಕವನ್ನು ಯಾವ ರೀತಿ ಬರೆಯಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಿದ್ದಾಳೆ.

ತನ್ನ ಲೇಖನ ಮತ್ತು ಬದುಕಿನ ಹಾದಿಯಿಂದ ವಿಕಲಚೇತನ ಮಕ್ಕಳಿಗೆ ಪ್ರೇರಣೆಯಾದ ಸಾಮಾಜಿಕ ಕಾರ್ಯ ಮಾಡುತ್ತಿದ್ದಾಳೆ.

ಕೀಯಾ ಹಟ್ಕರ್ ರೋಗದ ಮಿತಿಗಳನ್ನು ಮೀರಿ ಸಾಧನೆಗೈದು, ಸಾಹಿತ್ಯರಚಿಸಿ ಸಮಾಜಸೇವೆಯಿಂದ ದೇಶದ ಹೆಮ್ಮೆಯ ಮಗಳಾಗಿದ್ದಾಳೆ.

ಎಲ್ಲೆಡೆ ತರೋಣ ಸ್ನೇಹಭಾವ, ಮರೆಯಾಗಿಸೋಣ ಮನದ ನೋವ

# ೨೧. ಒಂದೇ ವೃಕ್ಷದ ಕೊಂಬೆಗಳು

ಒಂದೇ ವೃಕ್ಷದ ಕೊಂಬೆಗಳು
ನಾವೊಂದೇ ಬಳ್ಳಿಯ ಹೂವುಗಳು
ಒಂದೇ ನೆಲದೊಳು ಬೇರೂರುತ
ನಾವೊಂದೇ ಮುಗಿಲಿಗೆ ನೆಗೆವವರು

ಒಂದೇ ವಸಂತದ ಸ್ಪರ್ಶಕೆ ಝುಗ್ಗನೆ
ಚಿಗುರುತ ಎದೆಯನು ತೆರೆದವರು,
ಹಳೆಯ ನೆನಪುಗಳನೊಂದೇ ಗಾಳಿಗೆ
ತೂರುತ ಭರವಸೆಗೊಲಿದವರು

ಹಣ್ಣು ಕಾಯ್ಗಳಲಿ ನಾಳಿನ ಕನಸಿನ
ಬೀಜವ ಹುದುಗಿಸಿ ಇಟ್ಟವರು
ಕೊಂಬೆ ಕೊಂಬೆಯಲಿ ಹಾಡುವ ಹಕ್ಕಿಯ
ರಾಗಕೆ ಮನಸನು ಕೊಟ್ಟವರು

ಹಗಲಿರುಳಿನ ಋತುಮಾನದ ಗತಿಯೊಳು
ಮರಳಿ ಮರಳಿ ಹೊಸತಾಗುವರು
ಹಿಂದು-ಮುಂದುಗಳ ಒಂದೇ ಕೇಂದ್ರಕೆ
ತಂದುಕೊಂಡು ನೆಲೆ ನಿಂತವರು

**– ಡಾ. ಜಿ. ಎಸ್. ಶಿವರುದ್ರಪ್ಪ**



**ಸೂಚನೆ :** ಈ ಕವಿತೆಯನ್ನು ಲಯಬದ್ಧವಾಗಿ ಸಾಭಿನಯದೊಂದಿಗೆ ಹಾಡಿಸಿಕೊಳ್ಳಿರಿ.

- **ಶಬ್ದ ಸರಪಳಿಯನ್ನು ಪೂರ್ಣಗೊಳಿಸಲು ಹೊಸ ಶಬ್ದ ತಯಾರಿಸು.**

**ಅಂತಾಕ್ಷರಿಯ ಆಟ**

ವೃಕ್ಷದ

- **ಉದಾಹರಣೆಯಲ್ಲಿ ಕೊಟ್ಟ ಪದ್ಯದ ಸಹಾಯದಿಂದ ಒಂದು ಪ್ರಾಸಯುಕ್ತ ಪದ್ಯವನ್ನು ತಯಾರಿಸಿ ಶೀರ್ಷಿಕೆಯನ್ನು ಬರೆ.**

ಉದಾ- ಬಾರಲೆ ಹಕ್ಕಿ,ಹಾಡುವ ಹಕ್ಕಿ
ರಾಗವ ಕಲಿಸು ನನ್ನನು ನಲಿಸು.
ಮನಸನು ಕೊಟ್ಟು ಕಲಿಯುವೆ ನಾನು
ವೃಕ್ಷದ ಹಾಗೆ ಬೆಳೆಯುವೆ ನಾನು.

............................................
............................................
............................................
............................................

- **ರಚಿಸಿ ನೋಡೋಣ.**

ಕೊಡೆಯ ಚಿತ್ರದಲ್ಲಿ ಆರು 'ಋತು'ಗಳ ಹೆಸರುಗಳನ್ನು ಶಿಕ್ಷಕರ ಸಹಾಯದಿಂದ ಬರೆಯಿರಿ.

ಉದಾ.



- **ಕೆಳಗೆ ಕೊಟ್ಟ 'ವೃಕ್ಷದ' ಚಿತ್ರವನ್ನು ಬಣ್ಣದ ಮೂಲಕ ಬೆರಳಚ್ಚುಗಳಿಂದ ಎಲೆ, ಹೂ, ಕಾಯಿ, ಹಣ್ಣು, ಪಕ್ಷಿಗಳನ್ನು ತೋರಿಸಿರಿ.**



**ಬನ್ನಿ ಆಸರೆಗೆ**

- **ಹೊಂದಿಸಿ ಬರೆ.**

| (ಅ) | ಉತ್ತರ | (ಬ) |
|---|---|---|
| ೧) ಬೆಳಗಿನ | ................................ | ಚಿಲಿಪಿಲಿ |
| ೨) ರಣರಣ | ................................ | ಹಣ್ಣು |
| ೩) ತಂಪಾದ | ................................ | ಜಾವ |
| ೪) ಪಕ್ಷಿಗಳ | ................................ | ಬಿಸಿಲು |
| ೫) ಸಿಹಿಸಿಹಿ | ................................ | ಗಾಳಿ |



# ಶಬ್ದಕೋಶ

(ಅ)

ಅಚ್ಚರಿ – ಆಶ್ಚರ್ಯ, ಬೆರಗು, ಸೋಜಿಗ.
ಅನಾವಶ್ಯಕ – ಅವಶ್ಯವಿಲ್ಲದ.
ಅಪ್ಪ – ತಂದೆ, ಜನಕ, ಪಿತ.
ಅಪೇಕ್ಷೆ – ಇಚ್ಛೆ, ಬಯಕೆ, ಬಯಸು.
ಅಮೂಲ್ಯ – ಅತ್ಯಧಿಕ ಬೆಲೆಯುಳ್ಳ, ಬೆಲೆಕಟ್ಟಲಾಗದ
ಅರಿ – ವೈರಿ, ಶತ್ರು, ತಿಳಿ.
ಅಲಂಕಾರ– ಶೃಂಗಾರ
ಅಸ್ವಸ್ಥ–ಆರೋಗ್ಯವಿಲ್ಲದ, ಕ್ಷೇಮವಿಲ್ಲದ.
ಅಳಿದರು – ಸಾಯು, ನಾಶವಾಗು, ಹಾಳು, ಕೆಟ್ಟ.
ಅಂಬುಜ– ಕಮಲ

(ಆ)

ಆನಂದಾಶ್ರು – ಆನಂದದ ಕಣ್ಣೀರು.
ಆರೋಗ್ಯ – ರೋಗವಿಲ್ಲದಿರುವಿಕೆ, ಕ್ಷೇಮ, ಸೌಖ್ಯ, ಹಿತಕರ.
ಆಶ್ಚರ್ಯ –ಅಚ್ಚರಿ, ಸೋಜಿಗ.

(ಉ)

ಉಡುಗೊರೆ–ಓಡುತೋಡುವುದಕ್ಕೆ ಕೊಡುವ ನೆಚ್ಚಿನ ಬಟ್ಟೆ ಬರೆಗಳು, ಕಾಣಿಕೆ.
ಉದಯ–ಹುಟ್ಟುವಿಕೆ, ಏರುವಿಕೆ, ಮೇಲೆ ಹೋಗುವಿಕೆ.
ಉರುಳು –ಉರುಳಿಹೋಗು, ಕಳಚು, ಹೊರಳಾಡಿಸು.
ಉಂಡು – ಊಟಮಾಡಿ.

(ಎ)

ಎನಗೆ – ನನಗೆ
ಎಲೆ – ಪರ್ಣ

(ಏ)

ಏಕಕಾಲಕ್ಕೆ –ಒಂದೇ ಕಾಲಕ್ಕೆ, ಒಂದೇ ಸಮಯಕ್ಕೆ
ಏಳ್ಗೆ–ಅಭಿವೃದ್ಧಿ, ಉನ್ನತಿ, ಹೆಚ್ಚಾಗುವಿಕೆ, ಉತ್ತಮ ಸ್ಥಿತಿ.

(ಐ)

ಐರಾಣಿ – ಮಣ್ಣಿನ ಮಡಿಕೆ, ಕೊಡ. ಗಡಿಗೆ. ಕೊಡಪ.

(ಒ)

ಒಗ್ಗಟ್ಟು –ಒಕ್ಕಟ್ಟು, ಒಂದುತನ, ಐಕ್ಯಮತ, ಒಟ್ಟಾಗಿ.
ಒಮ್ಮನ –ಒಂದೇ ಮನಸ್ಸು .
ಒಂದೆಡೆ – ಒಂದೇ ಕಡೆ.
ಒಯ್ಯಾರ – ಧಿಮಾಕು, ಶೋಕಿ.

(ಕ)

ಕನಸು–ಸ್ವಪ್ನ, ಎಚ್ಚರವಿದ್ದಾಗ ಕಂಡದ್ದನ್ನು ನಿದ್ದೆಯ ಮರೆವಿನಲ್ಲಿಯೂ ಕಾಣುವ ಸ್ಥಿತಿ.
ಕರ್ಕಶ –ಉಗ್ರ, ಭಯಂಕರ, ಬಿರುಸು, ಒರಟು, ಕಠಿಣ, ನಯವಿಲ್ಲದ, ದಯೆಇಲ್ಲದ.
ಕಾಡು–ಉಪದ್ರವಕೊಡು, ಪೀಡಿಸು, ಅರಣ್ಯ, ಕಾನನ, ಅಡವಿ, ವಿಪಿನ.
ಕಾಪಾಡು–ಕಾಯು, ರಕ್ಷಿಸು ಜೋಪಾನ,
ಕಾರ್ಯ–ಕೆಲಸ ಮಾಡಲ್ಪಡತಕ್ಕ.
ಕಿವಿ–ಶ್ರವಣೇಂದ್ರಿಯ, ಕೇಳುವ ಅವಯವ.
ಕಿರಿಯ–ಸಣ್ಣ, ಚಿಕ್ಕ, ಎಳೆಯ.
ಕುಡಿ–ತುದಿ, ಕೊನೆ, ಚಿಗುರು, ಮೊಳಕೆ.
ಕೆಚ್ಚೆದೆ –ಧೈರ್ಯವುಳ್ಳ ಹೃದಯ, ನಿರ್ಭಿತ ಮನಸ್ಸು, ವೀರತನ, ಧೀರತನ.
ಕೇಡುಕು–ಕೆಟ್ಟ ಕೆಲಸ, ಹಾನಿ, ಅಪಾಯ, ಹಾಳಾದುದು
ಕೊಂಕಿಸು –ಬಾಗು, ಡೊಂಕು.
ಕೃಷಿ –ಒಕ್ಕಲುತನ ಬೇಸಾಯ.

(ಖ)

ಖುಷಿ– ಸಂತೋಷ, ಆನಂದ, ಮೋದ.

(ಗ)

ಗರಿ –ಹಕ್ಕಿಗಳ ಪುಚ್ಛ, ರೆಕ್ಕೆಯ ಎಸಳು, ಪುಕ್ಕ.
ಗಿಣಿ–ಹಸಿರು ಬಣ್ಣದಹಕ್ಕಿ, ಕೀರ, ಶುಕ.

(ಘ)

ಘನ–ದೊಡ್ಡ, ಶ್ರೇಷ್ಠ, ಭಾರಉಳ್ಳ ವಸ್ತು.

(ಚ)

ಚಕ್ಕಡಿ –ಎತ್ತಿನಗಾಡಿ, ಎತ್ತಿನಬಂಡಿ, ಶಕಟ.
ಚತುರ –ನಿಪುಣ, ಜಾಣ, ದಕ್ಷ, ನೈಪುಣ್ಯ.
ಚಿಗುರು–ಚಿಗಿ, ಎಳೆ, ಎಲೆಗಳು ಹೊರಡು, ಮೊಳಕೆ.
ಚಿಟ್ಟೆ –ಪತಂಗ, ಪಾತರಗಿತ್ತಿ.
ಚಿಣ್ಣರು–ಸಣ್ಣ ಮಕ್ಕಳು, ಮುದ್ದಿನ ಮಕ್ಕಳು.
ಚುರುಕು –ಚಪಲ, ಕುಶಾಗ್ರ, ತೀಕ್ಷ್ಣ, ಚಪಲತನ.
ಚೆಲ್ಲು –ಸುರಿ, ಬಿಸಾಡು, ಹರಡು, ಜಾರಿ ಬೀಳುವ.
ಚೈತನ್ಯ–ಆತ್ಮ, ಜೀವ, ಶಕ್ತಿ, ಸಾಮರ್ಥ್ಯ, ಅರಿವು, ಪ್ರಜ್ಞೆ, ಬೋಧ.

(ಛ)

ಛಲ–ದಿಟ್ಟ, ಹಠ

(ಜ)

ಜನಸಮೂಹ –ಮನುಷ್ಯಗಣ, ಜನರ ಗುಂಪು
ಜಾಣೆ–ಚತುರೆ, ಜಾಣತನಉಳ್ಳವಳು, ತಿಳಿವಳಿಕೆಯುಳ್ಳವಳು
ಜೋಪಾನ–ಸಂರಕ್ಷಣೆ, ಕಾಪಾಡುವಿಕೆ, ಹಾರೈಕೆ, ಲಕ್ಷ್ಯ ಕೊಡುವಿಕೆ.
ಜಂಬ –ಒಣ ಆಡಂಬರ, ಸೊಕ್ಕು.

(ಟ)

ಟೊಂಗೆ–ಗೆಲ್ಲು, ಕೊಂಬೆ.ರೆಂಬೆ, ಟಿಸಿಲು, ಶಾಖೆ.

(ತ)

ತರು –ವೃಕ್ಷ, ಮರ.
ತಾಣ–ಸ್ಥಾನ, ಚಾವಡಿ, ಆಶ್ರಯ.
ತುಡುಗ –ಕಳ್ಳ, ಸುಲಿಗೆಗಾರ, ವಂಚಕ, ಮೋಸಗಾರ.
ತೂಗಾಡು – ನೇತಾಡು
ತೆರದಲಿ – ರೀತಿಯಲ್ಲಿ
ತೆರಳು – ಹೋಗು, ಹಿಂದಿರುಗು.

(ದ)

ದಷ್ಟಪುಷ್ಟ– ಗಟ್ಟಿಯಾದ.
ದಾರಿ–ಹಾದಿ, ಮಾರ್ಗ.
ಧಾನ್ಯ – ಕಾಳುಕಡಿ, ದವಸ.
ದೀಪ್ತಿ –ಕಾಂತಿ, ಕಿರಣ, ಬೆಳಕು, ಹೊಳಪು, ದೀವಿಗೆ.
ಧ್ವನಿ–ಶಬ್ದ, ನಾದ, ಸ್ವರ, ಉಲಿ.
ದೇವಾಲಯ–ದೇಗುಲ, ದೇವಸ್ಥಾನ, ಮಂದಿರ,

(ನ)

ನಿರ್ಧಾರ–ದೃಢತೆ, ನಿರ್ಣಯ, ಮನಸ್ಸಿನ ನಿಶ್ಚಯ.
ನಿಯಂತ್ರಿಸು–ತಡೆಯು, ನಿಲ್ಲಿಸು, ಹತೋಟಿಯಲ್ಲಿಡು
ನಿರೂಪಕ –ಸ್ಪಷ್ಟ ಮಾಡುವವ, ವಿವರಿಸುವ, ತಿಳಿಸಿ ಹೇಳುವವ.
ನಿಃಶಕ್ತ–ಬಲವಿಲ್ಲದಿರುವಿಕೆ, ದೌರ್ಬಲ್ಯ, ನಿತ್ರಾಣ.

ನುಡಿ-ಹೇಳು, ಮಾತನಾಡು, ಮಾತು, ಶಬ್ದ, ಭಾಷೆ. ನೆಗೆಜಿಗಿ, ಹಾರು.
ನೆಮ್ಮದಿ- ಸೌಖ್ಯ, ಕ್ಷೇಮ.
ನೆರವಾಗು-ಸಹಾಯ ಮಾಡು, ಬೆಂಬಲಿಸು.
ನೆರಳು-ಛಾಯೆ.
ನೆರೆ- ಅಕ್ಕಪಕ್ಕ, ಎಡಬಲ, ಪಕ್ಕದಲ್ಲಿ, ಹತ್ತಿರ,
ನೆತ್ತರ -ರಕ್ತ. ರುಧೀರ.
ನೆಲ-ತಳ, ಭೂಮಿ, ದೇಶ, ನಾಡು, ಜನ್ಮಸ್ಥಾನ.
ನೇತಾಡು -ತೂಗಾಡು.

(ಪ)

ಪಠಿಸು-ಓದು, ಬಾಯಿಪಾಠ ಮಾಡು, ಕಲಿ ಅಭ್ಯಾಸ ಮಾಡು.
ಪಥ-ಹಾದಿ, ಮಾರ್ಗ, ರಸ್ತೆ, ದಾರಿ.
ಪಯಣಿಗ - ಪ್ರವಾಸಿ, ಸಂಚಾರಿ, ಊರಿಂದೂರಿಗೆ ಹೋಗುವ.
ಪರರ - ಬೇರೆಯವರ, ತನ್ನದಲ್ಲದ, ಅನ್ಯರ, ದೂರದ.
ಪರರುಪಕಾರಿ-ಬೇರೆಯವರಿಗೆ ಉಪಕಾರ ಮಾಡುವವ, ಹಿತಬಯಸುವವ.
ಪರಿಮಳ-ಸುಗಂಧ, ಸುವಾಸನೆ, ಕಂಪು, ವಾಸನೆ.
ಪರಿಹಾರ-ತ್ಯಾಗ, ಬಿಡುವಿಕೆ, ನಿವಾರಣೆ.
ಪುಸ್ತಕ-ಗ್ರಂಥ, ಸಾಹಿತ್ಯ ಕೃತಿ
ಪ್ರೇರಣೆ-ಮುನ್ನಡೆಸುವಿಕೆ, ಹುರಿದುಂಬಿಸುವಿಕೆ, ಸ್ಫೂರ್ತಿ ಕೊಡುವಿಕೆ.
ಪೊರೆ-ಸಂರಕ್ಷಿಸು, ಕಾಪಾಡು, ಪೋಷಿಸು, ಬೆಳೆಸು.
ಪ್ರೋತ್ಸಾಹಿಸು - ಹುರೂಪಿಸು, ಉತ್ತೇಜಿಸು, ಉಲ್ಲಾಸ.
ಪ್ರಗತಿ- ಏಳ್ಗೆ, ಅಭಿವೃದ್ಧಿ.
ಪ್ರಕೃತಿ- ನಿಸರ್ಗ, ಯಾವುದೆಂದು ಸ್ವಾಭಾವಿಕ ಸ್ಥಿತಿ.

(ಬ)

ಬದುಕು - ಬಾಳು, ಜೀವನ, ಜೀವಿಸು, ಪಾರು ಮಾಡು.
ಬಳಸು-ಸುತ್ತುವರಿ, ಉಪಯೋಗಿಸು, ಸುತ್ತುಗಟ್ಟು
ಬಳ್ಳಿ - ಲತೆ
ಬಾಗಿಲು- ದ್ವಾರ.
ಬಾಡಿದ-ಬತ್ತಿದ, ಮಸುಕಾದ, ಒಣಗಿದ, ಮುದುಡಿದ.
ಬಾನ- ಅನ್ನ
ಬೀದಿ-ಓಣಿ, ದಾರಿ, ದಿಕ್ಕು.
ಬೀರು- ಕಪಾಟು, ಪ್ರಕಟಿಸು, ಚೆಲ್ಲು, ಹರಡು.
ಬಿಂಕು-ಜಂಭ, ಗರ್ವ, ವಕ್ರತೆ.
ಬೆದರು-ಅಂಜು, ಗಾಬರಿಯಾಗು, ನಡುಗು, ಹೆದರು.
ಬೇಗೆ-ಸುಡುವಿಕೆ, ಉರಿ, ಉಷ್ಣ, ತಾಪ, ಸಂಕಟ.
ಬೇರೂರು-ತಳವೂರು, ಬೀಡುಬಿಡು, ನೆಲೆನಿಲ್ಲು.
ಭತ್ತ - ನೆಲ್ಲು, ಕವಳೆ, ಅಕ್ಕಿಯಬೀಜ.
ಭದ್ರ - ಗಟ್ಟಿಯಾದ, ಸುರಕ್ಷಿತವಾದ, ಬಲವಾದ, ಬಿಗಿಯಾದ.
ಭಲೆ-ಹೊಗಳಿಕೆ ಶಬ್ದ, ಉದ್ಗಾರ.
ಭ್ರಮರ-ಭೃಂಗ, ಗುಂಗಿಹುಳ, ದುಂಬಿ.
ಭಾನು-ಸೂರ್ಯ, ಬೆಳಕು, ಕಿರಣ, ರವಿ, ಆದಿತ್ಯ.

(ಮ)

ಮಡದಿ-ಹೆಂಡತಿ.
ಮಧು - ಪುಷ್ಪರಸ, ಮಕರಂದ, ಸಿಹಿ, ಸವಿ, ಜೇನುತುಪ್ಪ.
ಮರಳಿ - ತಿರುಗಿ ಬರು, ಹಿಂದುರುಗು.
ಮಸುಕು-ಮಬ್ಬು, ಮಾಸಲು, ಕೊಳೆ, ಕಾಂತಿಹೀನ, ಹೊದಿಕೆ.
ಮಾಸ-ತಿಂಗಳು, ಮೂವತ್ತು ದಿನಗಳ ಅವಧಿ.
ಮಾರ್ಗ-ದಾರಿ, ಹಾದಿ.
ಮಿನುಗು-ಮಿಂಚು, ಪ್ರಕಾಶಿಸು, ಹೊಳೆಯು, ರಂಜಿಸು
ಮಿಶ್ರಿತ-ಕೂಡಿದ, ಬೆರೆತ, ಹೊಂದಿಕೆಯಾದ, ಸೇರಿದ.
ಮುಕ್ತ-ಬಿಡಲ್ಪಟ್ಟ, ವಿರಕ್ತ, ಮೋಕ್ಷ ಹೊಂದಿದ, ಬಿಡುಗಡೆ ಹೊಂದಿದವನು, ತೊರೆದದು.
ಮೂಳೆ-ಎಲುಬು, ಅಸ್ಥಿ.
ಮೋಡ-ಮೇಘ, ಮುಗಿಲು.

(ರ)

ರಮ್ಯ-ಮನೋಹರವಾದ, ಚೆಲುವಾದ, ಸುಂದರ.
ರೆಕ್ಕೆ - ಪುಚ್ಛ, ಪುಕ್ಕ, ಗರಿ.

(ಲ)

ಲತೆ - ಬಳ್ಳಿ.

(ವ)

ವರ್ಧಕ-ಹೆಚ್ಚುವ, ಬೆಳೆಸುವ, ದೊಡ್ಡದಾಗಿಸುವ.
ವೃತ್ತಿ-ಉದ್ಯೋಗ, ಕೆಲಸ, ಕಸಬು, ಉಪಜೀವನದ ಕಾರ್ಯ.
ವೃಕ್ಷ-ಮರ, ಗಿಡ. ತರು
ವಿರಮಿಸು - ವಿಶ್ರಾಂತಿಪಡೆ, ಬಿಡುವುಪಡೆ,
ವಿಶ್ವ-ಜಗತ್ತು, ಪ್ರಪಂಚ, ಲೋಕ.
ವಿದೇಯತೆ - ನಮ್ರತೆ.
ವೀಕ್ಷಣೆ - ನೋಟ, ದಿಟ್ಟಿಸಿ ನೋಡು.

(ಶ)

ಶಕುತಿ-ಶಕ್ತಿ, ಕಸುವು, ಸಾಮರ್ಥ್ಯ, ಶೌರ್ಯ.
ಶ್ರಮಿಸು - ದುಡಿಮೆ, ಕಷ್ಟಪಡು, ಬೆವರು ಸುರಿಸು.
ಶಿರ-ತಲೆಯ ಮೇಲ್ಭಾಗ, ತುದಿ, ಶಿಖರ.
ಶುಶ್ರೂಷೆ-ಉಪಚಾರ, ಆರೈಕೆ

(ಸ)

ಸತ್ವ-ಬಲ, ಸಾರ, ಅರ್ಕ, ತಿರುಳು.
ಸ್ಫಟಿಕ-ಪಳಿಕು, ಪಟಕದ ಕಲ್ಲು.
ಸದ್ದು -ಗದ್ದಲ, ಶಬ್ದ, ಸಪ್ಪಳ.
ಸಣ್ಣ-ಬಡಕಲಾದ, ಚಿಕ್ಕ, ಕಿರಿಯ, ಕ್ಷುಲ್ಲಕ.
ಸ್ಪರ್ಶ-ಸೊಂಕು, ಅಂಟು, ಮುಟ್ಟು.
ಸದೃಢ- ಗಟ್ಟಿಯಾದ, ಆರೋಗ್ಯಕರ.
ಸನಿಹ-ಸಮೀಪ, ಹತ್ತಿರ.
ಸಿರಿತನ -ಶ್ರೀಮಂತಿಕೆ, ಐಶ್ವರ್ಯ.
ಸೇರು-ಹೊಂದು, ಕೂಡು, ಸಮೀಪಿಸು, ಒಂದು ತೂಕ.
ಸ್ನೇಹಿತ-ಮಿತ್ರ, ಗೆಳೆಯ, ಒಡನಾಡಿ.
ಸೊಕ್ಕು - ಗರ್ವ, ಅಹಂಕಾರ.
ಸೋಜಿಗ-ಆಶ್ಚರ್ಯ, ಬೆರಗು, ವಿಸ್ಮಯ.
ಸಂಜೆ - ಸಾಯಂಕಾಲ.
ಸಂಗ್ರಹ-ರಾಶಿ, ಸಂಚಯ, ಗುಂಪು.
ಸಂಸ್ಕೃತಿ-ಮಾರ್ಪಾಟು, ಸುಧಾರಣೆ, ಉಚ್ಚ ಪರಂಪರೆ.

(ಹ)

ಹಕ್ಕಿ - ಪಕ್ಷಿ.
ಹಣತೆ-ಪ್ರಣತಿ, ದೀಪ ಉರಿಸುವ ಮಣ್ಣಿನ ಬಟ್ಟಲು.
ಹಣ್ಗಳ - ಹಣ್ಣುಗಳ.
ಹಬ್ಬ-ಪರ್ವ, ಉತ್ಸವ.
ಹುದುಗಿಸು-ಅಡಗಿಸು, ಮುಚ್ಚಿಡು.
ಹೆಮ್ಮರ -ದೊಡ್ಡಮರ.
ಹೊಗಳು-ಸ್ತುತಿಮಾಡು, ಕೀರ್ತಿಸು, ಹುರಿದುಂಬಿಸು.
ಹೊಸ -ನಾವಿನ್ಯ, ನವ.

ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




ಈ ಬಟನನ್ನುಒತ್ತಿರಿ

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಬಹುದು.**

CHILD LINE 1098 NIGHT & DAY

ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಅಪತ್ಕಾಲಕದ ಫೋನ್ ಸೇವೆಯಾಗಿದೆ. ಇಂಡಿಯಾ ಪೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.

नए समाज की ओर
Towards a new dawn

‘‘ವಿದ್ಯಾರ್ಥಿಗಳಿಗೆ ಯೋಗ್ಯಸ್ಪರ್ಶ - ಅಯೋಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ’’

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4.

बालभारती इयत्ता चौथी (कन्नड)

₹ 69.00